# ಜನಶಕ್ತಿ


ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ13 | ಸಂಚಿಕೆ 20 | ಮೇ 13–19, 2019 | ಪುಟ 16 | ರೂ. 10/-




## CITU ಸುವರ್ಣ ಮಹೋತ್ಸವ



## ತಿರಸ್ಕೃತ ಅರಣ್ಯ ಅರ್ಜಿಗಳ ಮರು ಪರಿಶೀಲನೆ



## ಮೀನುಗಾರರ ನಾಪತ್ತೆ ಪ್ರಕರಣ



## ಕನ್ನಡ ಶಾಲೆಗಳ ಮೇಲೆ ದಾಳಿ





## ಕನಿಷ್ಠ ವೇತನ: ಭರವಸೆ ಮೂಡಿಸಿದ ತೀರ್ಪು

# ತ್ರಿಪುರಾ ಪಶ್ಚಿಮ ಲೋಕಸಭಾ ಕ್ಷೇತ್ರದ ಕುರಿತ ಚುನಾವಣಾ ಆಯೋಗದ ನಿರ್ಧಾರ ನಿರಾಶಾದಾಯಕ

## ಮರು ಚುನಾವಣೆಯಿಂದ ಮಾತ್ರವೇ ಮತದಾರರ ಹಕ್ಕುಗಳ ರಕ್ಷಣೆ ಸಾಧ್ಯ–ಸಿಪಿಐ(ಎಂ) ಪೊಲಿಟ್‌ಬ್ಯುರೊ


ತ್ರಿಪುರಾ ಪಶ್ಚಿಮ ಲೋಕಸಭಾ ಕ್ಷೇತ್ರದ ಮತದಾನದಲ್ಲಿ 168 ಮತಗಟ್ಟೆಗಳಲ್ಲಿ ಮಾತ್ರವೇ ಮತದಾನವನ್ನು ರದ್ದುಗೊಳಿಸಿ ಅಲ್ಲಿ ಮರು ಮತದಾನ ನಡೆಸಲು ಚುನಾವಣಾ ಆಯೋಗ ನಿರ್ಧರಿಸಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ತೀವ್ರ ನಿರಾಶೆಯನ್ನು ವ್ಯಕ್ತಪಡಿಸಿದೆ. ಎಪ್ರಿಲ್ 11 ರಂದು ನಡೆದ ಮತದಾನದಲ್ಲಿ ವ್ಯಾಪಕವಾಗಿ ಅಕ್ರಮಗಳು, ಮೋಸ ನಡೆದಿವೆ, ಆಳುವ ಬಿಜೆಪಿಯು ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸದಂತೆ ತಡೆದಿದೆ ಎಂದು ಅದು ನೆನಪಿಸಿದೆ.

ಈ ಆದೇಶ ಬುಡವಟ್ಟದ ವಾಸ್ತವತೆಗೆ ಅನುಗುಣವಾಗಿಲ್ಲ, ಅರ್ಧಕ್ಕಿಂತ ಹೆಚ್ಚು ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸದಂತೆ ಮಾಡಿರುವಲ್ಲಿ ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಯುವಂತೆ ಮಾಡಲು ಬಹಳ ತಡವಾಗಿ ಕೈಗೊಂಡಿರುವ ಏನೇನೂ ಸಾಲದ ಆದೇಶವಿದು ಎಂಬುದು ತನ್ನ ದೃಢವಾದ ಅಭಿಪ್ರಾಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ರಾಜಕೀಯ ಪಕ್ಷಗಳು ಮತ್ತು ವ್ಯಕ್ತಿಗಳು ಇಲ್ಲಿ ವ್ಯಾಪಕ ಪ್ರಮಾಣದಲ್ಲಿ ಮೋಸ, ಅಕ್ರಮಗಳು ನಡೆದಿವೆ ಎಂದು ಹಲವಾರು ದೂರುಗಳನ್ನು ಕೊಟ್ಟ ಸುಮಾರು ಒಂದು ತಿಂಗಳ ನಂತರ ಬಂದಿರುವ ಆದೇಶ ದೂರುಗಳನ್ನು ಭಾಗಶಃ ಮಾತ್ರ ಗಮನಕ್ಕೆ ತಗೊಂಡಿದೆ. ಈ ಆದೇಶ ಒಂದೆಡೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಮೋಸ ನಡೆದಿದೆ ಎಂದು ಒಪ್ಪಿಕೊಂಡಿರುವುದರ ಸಂಕೇತವಾಗಿದೆ. ಆದರೂ ಭಾರತದ ಚುನಾವಣಾ ಆಯೋಗ ಮತದಾನ ಮಾಡಲಾಗದ ಈ ಕ್ಷೇತ್ರದ ಮತದಾರರಿಗೆ ನ್ಯಾಯ ಒದಗಿಸುತ್ತದೆ ಎಂಬ ನಿರೀಕ್ಷೆಯನ್ನು ಈಡೇರಿಸಲಾರದಾಗಿದೆ.

ಇಡೀ ತ್ರಿಪುರಾ ಪಶ್ಚಿಮ ಲೋಕಸಭಾ ಕ್ಷೇತ್ರದಲ್ಲಿ ಮರುಮತದಾನ ಮಾತ್ರವೇ ಮುಕ್ತ ಮತ್ತು ನ್ಯಾಯಯುತ ಮತದಾನದ ಉದ್ದೇಶವನ್ನು ಈಡೇರಿಸಬಲ್ಲದು ಮತ್ತು ಮತದಾರರ ಹಕ್ಕುಗಳನ್ನು ರಕ್ಷಿಸ ಬಲ್ಲದು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

**ಈ ಬಗ್ಗೆ ಮಾತಾಡುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ನೀಲೋತ್ಪಲ ಬಸುರವರು 168 ಮತಗಟ್ಟೆಗಳಲ್ಲಿ ಮರು ಮತದಾನ ಎನ್ನುವುದು ದೊಡ್ಡ ವಿಷಯವೇ, ಏಕೆಂದರೆ ಇದು ಒಟ್ಟು ಮತಗಟ್ಟೆಗಳ ಸಂಖ್ಯೆಯ 10 ಶೇಕಡಾಕ್ಕಿಂತಲೂ ಹೆಚ್ಚಾಗುತ್ತದೆ, ಆದರೆ ಇಲ್ಲಿ ನಡೆದಿರುವ ಮೋಸ, ಅಕ್ರಮಗಳನ್ನು ನೋಡಿದರೆ ಬಹಳ ಸಣ್ಣದು, ಏಕೆಂದರೆ ಪಕ್ಷದ ಅಂದಾಜುಗಳ ಪ್ರಕಾರ ಅರ್ಧಕ್ಕಿಂತಲೂ ಹೆಚ್ಚು ಮತಗಟ್ಟೆಗಳಲ್ಲಿ ಈ ಅಕ್ರಮಗಳು ನಡೆದಿವೆ ಎಂದು ಅವರು ಹೇಳಿದ್ದಾರೆ.** ಚುನಾವಣಾ ಆಯೋಗಕ್ಕೆ ಈ ಕುರಿತ ಎಲ್ಲ ವಿವರಗಳನ್ನು, ದಸ್ತಾವೇಜುಗಳನ್ನು, ಮತ್ತು ಅವರದ್ದೇ ಅಧಿಕಾರಿಗಳ ವರದಿಗಳನ್ನೂ ಸಲ್ಲಿಸಿದ್ದೇವೆ. ಆದರೂ ಆಯೋಗ ಈ ಕ್ಷೇತ್ರದ ಮತದಾರರಿಗೆ ನ್ಯಾಯ ಒದಗಿಸುವಲ್ಲಿ ವಿಫಲವಾಗಿದೆ ಮಾತ್ರವಲ್ಲ, ಒಂದೇ ವರ್ಷದಲ್ಲಿ ಜನಗಳಿಂದ ದೂರವಾಗಿರುವ ಬಿಜೆಪಿ ರಾಜ್ಯ ಆಡಳಿತಕ್ಕೆ ಅನುಕೂಲ ಮಾಡಿಕೊಟ್ಟಿದೆ ಎಂದು ಬಸು ಖೇದ ವ್ಯಕ್ತಪಡಿಸಿದ್ದಾರೆ.



ಇಂತಹ ಸನ್ನಿವೇಶದಲ್ಲಿ ಆಯೋಗದ ನಿರ್ಧಾರ ನಮಗೆ ಒಪ್ಪಿಗೆಯಿಲ್ಲ ಎಂಬ ಸಂಗತಿಯನ್ನು ನಾವು ಜನರ ನಡುವೆ ಒಯ್ಯುತ್ತೇವೆ. **ಇಡೀ ಪಶ್ಚಿಮ ತ್ರಿಪುರಾ ಲೋಕಸಭಾ ಕ್ಷೇತ್ರದಲ್ಲಿ ಮರುಮತದಾನ ನಡೆಸಬೇಕು ಎಂದು ಮತ್ತೆ ಆಗ್ರಹಿಸುತ್ತೇವೆ ಎಂದಿರುವ ನೀಲೋತ್ಪಲ ಬಸುರವರು, ಇಲ್ಲಿನ ಹಾಲಿ ಲೋಕಸಭಾ ಸದಸ್ಯರೂ ಆಗಿರುವ ಸಿಪಿಐ(ಎಂ) ಅಭ್ಯರ್ಥಿ ಶಂಕರ ಪ್ರಸಾದ ದತ್ತ ಅವರು ಈ ಕುರಿತು ಸುಪ್ರಿಂ ಕೋರ್ಟ್‌ನಿಂದ ಪರಿಹಾರ ಕೇಳುವುದಾಗಿಯೂ ತಿಳಿಸಿದ್ದಾರೆ.**

# ಚಂಡಮಾರುತ ಫೊನಿ ಪೀಡಿತರಿಗೆ ತ್ವರಿತ ಪರಿಹಾರ ಒದಗಿಸಬೇಕಾಗಿದೆ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಚಂಡಮಾರುತ ಫೊನಿ ಒಡಿಶಾದಲ್ಲಿ ಅನಾಹುತಗಳನ್ನು ಉಂಟುಮಾಡಿರುವ ಅತ್ಯಂತ ತೀವ್ರವಾದ ಚಂಡಮಾರುತಗಳಲ್ಲಿ ಒಂದು. ಸಾವಿರಾರು ಗುಡಿಸಲುಗಳು ಧ್ವಂಸವಾಗಿವೆ, ಮತ್ತು ಐವತ್ತಕ್ಕೂ ಹೆಚ್ಚು ಜನಗಳು ಪ್ರಾಣ ಕಳಕೊಂಡಿರುವ ವರದಿಗಳು ಬರುತ್ತಿವೆ. ವಿದ್ಯುತ್ ಪೂರೈಕೆ, ಸಂಪರ್ಕಗಳು ಮತ್ತು ಮೂಲರಚನೆಗಳಿಗೆ ವ್ಯಾಪಕ ಹಾನಿಯುಂಟಾಗಿದೆ.

ಈ ಗಂಭೀರ ಸನ್ನಿವೇಶವನ್ನು ಎದುರಿಸಲು ಕೇಂದ್ರ ಸರಕಾರ ತಾನಾಗಿಯೇ ರಾಜ್ಯಸರಕಾರದ ನೆರವಿಗೆ ಧಾವಿಸಬೇಕಾಗಿದೆ. ಪರಿಹಾರ ಕಾರ್ಯಾಚರಣೆಗಳನ್ನು ಬಲಪಡಿಸಬೇಕಾಗಿದೆ ಮತ್ತು ಸಂತ್ರಸ್ತರಿಗೆ ಆಗತ್ಯ ವಸ್ತುಗಳ ಪೂರೈಕೆಯಾಗುವಂತೆ, ವೈದ್ಯಕೀಯ ಮತ್ತು ಆರೋಗ್ಯ ಆಗತ್ಯಗಳನ್ನು ನೋಡಿಕೊಳ್ಳಬೇಕಾಗಿದೆ ಹಾಗೂ ಪುನರ್ವಸತಿಯ ಪ್ರಕ್ರಿಯೆಯನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಇದಕ್ಕೆ ಮೊದಲು, ಮೇ3 ರಂದು ನೀಡಿದ ಹೇಳಿಕೆಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಚಂಡಮಾರುತ ಫೊನಿಯಿಂದ ಒಡಿಶ ಮತ್ತು ಆಂದ್ರಪ್ರದೇಶದ ಉತ್ತರ ಭಾಗಗಳಲ್ಲಿ ಕರಾವಳಿ ಪ್ರದೇಶಗಳಲ್ಲಿ ಜೀವ, ಜಾನುವಾರು ಮತ್ತು ಆಸ್ತಿಗಳಿಗೆ ಉಂಟಾಗಿರುವ ಭಾರೀ ಹಾನಿಯ ಬಗ್ಗೆ ಗಂಭೀರ ಆತಂಕ ವ್ಯಕ್ತಪಡಿಸಿತ್ತು. ಮತ್ತು ಕೇಂದ್ರ ಮತ್ತು ಸಂಬಂಧಿತ ರಾಜ್ಯ ಸರಕಾರಗಳು ಜನಗಳಿಗೆ ಪರಿಹಾರ ಒದಗಿಸಲು ಮತ್ತು ಅವರನ್ನು ಇನ್ನಷ್ಟು ಕಷ್ಟ–ಕಾರ್ಪಣ್ಯಗಳಿಂದ ರಕ್ಷಿಸಲು ಅತ್ಯಂತ ತುರ್ತಿನಿಂದ ಕೆಲಸ ಮಾಡಬೇಕಾಗಿದೆ. ಸಂಪನ್ಮೂಲಗಳ ಕೊರತೆ ಯುದ್ಧಸ್ತರದಲ್ಲಿ ಕಾರ್ಯಾಚರಣೆಗಳನ್ನು ಆರಂಭಿಸಲು ಅಡ್ಡಿಯಾಗ ಬಾರದು ಎಂದಿತ್ತು. ಸಂಕಟಗ್ರಸ್ತ ಪ್ರದೇಶಗಳಲ್ಲಿ ಪರಿಹಾರಗಳನ್ನು ಒದಗಿಸಲು ಮತ್ತು ಸಂಕಟಕ್ಕೆ ಗುರಿಯಾಗುವವರ ನೆರವಿಗೆ ಧಾವಿಸುವಂತೆ ಪಕ್ಷದ ಎಲ್ಲ ಘಟಕಗಳನ್ನು ಜಾಗೃತಗೊಳಿಸಲಾಗಿದೆ.

# ರೈತರಿಗಾಗಿರುವ ಹಾನಿಗಳ ಸರಿಯಾದ ಅಂದಾಜು ನಡೆಸಿ ಅವರಿಗೆ ನೆರವು ನೀಡಬೇಕು–ಎಐಕೆಎಸ್

ಫೊನಿ ಚಂಡಮಾರುತದಲ್ಲಿ ಜೀವಹಾನಿಗಳ ಬಗ್ಗೆ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಸಂತಾಪವನ್ನು ವ್ಯಕ್ತಪಡಿಸಿದೆ 1999ರಲ್ಲಿ ಒಡಿಶಾವನ್ನು ಅಪ್ಪಳಿಸಿದ ಸೂಪರ್ ಚಂಡಮಾರುತದ ನಂತರದ ಈ ಬಲಿಷ್ಟ ಚಂಡಮಾರುತ ಕರಾವಳಿ ಜಿಲ್ಲೆಗಳಲ್ಲಿ ವ್ಯಾಪಕ ಜಾನುವಾರು, ಆಸ್ತಿ ಮತ್ತು ಬೆಳೆಹಾನಿಗಳನ್ನೂ ಮಾಡಿದೆ ಎಂದು ಅದು ಹೇಳಿದೆ. ಆಂಧ್ರ ಪ್ರದೇಶ ಮತ್ತು ಪಶ್ಚಿಮ ಬಂಗಾಲದ ಕೆಲವು ಸ್ಥಳಗಳೂ ಹಾನಿಗೀಡಾಗಿವೆ.

ಭಾರತೀಯ ಹವಾಮಾನ ಇಲಾಖೆ ಈ ಚಂಡಮಾರುತ ಯಾವಾಗ ಕರಾವಳಿಯನ್ನು ಅಪ್ಪಳಿಸುತ್ತದೆ ಎಮಬುದನ್ನು ಕರಾರುವಾಕ್ಕಾಗಿ ತಿಳಿಸಿದ್ದರಿಂದ ಮತ್ತು ಮೊದಲೇ ಎಚ್ಚರಿಕೆ ಕೊಟ್ಟದ್ದರಿಂದ ಇನ್ನಷ್ಟು ಜೀವಹಾನಿಯಾಗುವುದನ್ನು ತಡೆಯಲು ನೆರವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿರುವ ಐಕೆಎಸ್ 10 ಲಕ್ಷ ಮಂದಿಯನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವ ಕಾರ್ಯಾಚರಣೆ ಪರಿಣಾಮಕಾರಿಯಾಗಿ ನಡೆದಿದೆ ಎಂಬ ವರದಿಯನ್ನೂ ಉಲ್ಲೇಖಿಸಿದೆ.

ರೈತರ ಬೆಳೆದು ನಿಂತ ಪೈರುಗಳು ನಷ್ಟಗೊಂಡಿವೆ, ಹಣ್ಣು ಮತ್ತು ತರಕಾರಿ ಬೆಳೆಗಳೂ ವ್ಯಾಪಕವಾಗಿ ನಷ್ಟಗೊಂಡಿವೆ. ಜಾನುವಾರುಗಳಿಗೂ ಅಪಾರ ಹಾನಿಯುಂಟಾಗಿದೆ. ರೈತರಿಗೆ ಆಗಿರುವ ಹಾನಿಗಳ ಸರಿಯಾದ ಅಂದಾಜು ಮಾಡಬೇಕು, ಅವರಿಗೆ ಸರಿಯಾದ ಪರಿಹಾರ ಒದಗಿಸಬೇಕು ಎಂದು ಎಐಕೆಎಸ್ ಹೇಳಿದೆ. ಅವರಿಗೆ ಬಡ್ಡಿರಹಿತ ಸಾಲಗಳನ್ನು, ಸಬ್ಸಿಡಿ ದರಗಳಲ್ಲಿ ಲಾಗುವಾಡುಗಳನ್ನು ಮತ್ತು ಮನರೇಗ ಅಡಿಯಲ್ಲಿ ಉದ್ಯೋಗವನ್ನು ನೀಡಬೇಕು. ಕನಿಷ್ಟ ಮೂರು ತಿಂಗಳಿಗೆ ಪುಕ್ಕಟೆ ರೇಶನ್ ಒದಗಿಸಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.

ಒಡಿಶಾ ಕೃಷಕ್ ಸಭಾದ ಕಾರ್ಯಕರ್ತರು ತಳಮಟ್ಟದಲ್ಲಿ ಪರಿಹಾರ ಕಾರ್ಯಗಳಲ್ಲಿ ತೊಡಗಿದ್ದಾರೆ ಎಂದಿರುವ ಎಐಕೆಎಸ್ ಒಡಿಶ, ಪಶ್ಚಿಮ ಬಂಗಾಲ ಮತ್ತು ಆಂಧ್ರಪ್ರದೇಶದ ಹಾಗೂ ನೆರೆಯ ಬಾಂಗ್ಲಾದೇಶದ ಫೊನಿ ಸಂತ್ರಸ್ತರೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸಿದೆ.

# ಸುಪ್ರಿಂ ಕೋರ್ಟ್ ಮಾಜಿ ನೌಕರಳಿಗೆ ನ್ಯಾಯ ಸಿಗಬೇಕು– ಜನವಾದಿ ಮಹಿಳಾ ಸಂಘಟನೆಯ ಆಗ್ರಹ

ಸುಪ್ರಿಂ ಕೋರ್ಟಿನ "ಆಂತರಿಕ ಸಮಿತಿ" ತನ್ನ ಒಬ್ಬ ಮಾಜಿ ಮಹಿಳಾ ನೌಕರರು ಮಾಡಿದ ಲೈಂಗಿಕ ಕಿರುಕುಳದ ಆರೋಪದಲ್ಲಿ "ಹುರುಳಿಲ್ಲ" ಎಂದು ಕಂಡುಕೊಂಡಿರುವ ರೀತಿಗೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಆಳವಾದ ಆತಂಕವನ್ನು ವ್ಯಕ್ತಪಡಿಸಿದೆ.

ಈ ಮಾಜಿ ನೌಕರರು 28 ಪುಟಗಳ ಅಫಿಡವಿಟ್‌ನಲ್ಲಿ, ದಸ್ತಾವೇಜುಗಳು ಮತ್ತು ಒಂದು ವಿಡಿಯೋ ಮೂಲಕ ಭಾರತದ ಮುಖ್ಯ ನ್ಯಾಯಾಧೀಶರು(ಸಿಜೆಐ) ತನಗೆ ಅಕ್ಟೋಬರ್ 2018ರಲ್ಲಿ ಲೈಂಗಿಕ ಕಿರುಕುಳ ನೀಡಿದ್ದಾರೆ ಮತ್ತು ತಾನು, ತನ್ನ ಪತಿ ಮತ್ತು ಮೈದುನ ಪ್ರತೀಕಾರದ ಕ್ರಮಗಳನ್ನು ಎದುರಿಸಬೇಕಾಗಿ ಬಂದಿದೆ ಎಂಬ ಒಂದು ದೀರ್ಘವಾದ ದೂರನ್ನು ಕೊಟ್ಟಿದ್ದರು.

ಆಂತರಿಕ ಸಮಿತಿಯನ್ನು ರಚಿಸಿದ್ದೇ ಈ ಮಾಜಿ ನೌಕರರು ತನ್ನ ದೂರಿನ ಅಫಿಡವಿಟನ್ನು ಸುಪ್ರಿಂ ಕೋರ್ಟಿನ 22 ನ್ಯಾಯಾಧೀಶರುಗಳಿಗೆ ಕಳಿಸಿದಾಗ ನಡೆದ "ಅಭೂತಪೂರ್ವ" ಕೋರ್ಟ್ ವಿಚಾರಣೆಗೆ ಹಲವು ಕಡೆಗಳಿಂದ ಪ್ರತಿಭಟನೆಗಳು ನಡೆದ ಮೇಲೆ. ಮುಖ್ಯ ನ್ಯಾಯಾಧೀಶರು ಮತ್ತು ಇನ್ನಿಬ್ಬರು ನ್ಯಾಯಾಧೀಶರುಗಳು ನಡೆಸಿದ ವಿಚಾರಣೆಯಲ್ಲಿ ಮುಖ್ಯ ನ್ಯಾಯಾಧೀಶರು ಈ ದೂರು ನ್ಯಾಯಾಂಗದ ಸ್ವಾತಂತ್ರ್ಯದ ಮೇಲೆ ದಾಳಿ ನಡೆಸುವ ಒಂದು ಸಂಚು ಮತ್ತು ನ್ಯಾಯಾಂಗವನ್ನು ಅಸ್ಥಿರಗೊಳಿಸುವ ಒಂದು ಪಿತೂರಿಯ ಭಾಗ ಎಂದು ಟಿಪ್ಪಣಿ ಮಾಡಿ, ಈ ಕುರಿತು ಆದೇಶ ನೀಡುವುದನ್ನು ಉಳಿದಿಬ್ಬರು ನ್ಯಾಯಾಧೀಶರಿಗೆ ಬಿಟ್ಟರು ಎಂದು ವರದಿಯಾಗಿದೆ. ಈ ಆದೇಶ ಆರೋಪಗಳು "ವಿಚಾರಹೀನ ಮತ್ತು ಹಗರಣಕಾರಿ" ಎಂದು ಹೇಳಿತು. ಈ ಮಹಿಳೆಯನ್ನು ಈ ಕುರಿತು ಏನೂ ಕೇಳದೆಯೇ ಆಕೆಯನ್ನು ಖಂಡಿಸಲಾಯಿತು. ಯಾರೂ ತನ್ನ ಮೇಲಿನ ಮೊಕದ್ದಮೆಯಲ್ಲಿ ತಾನೇ ಒಬ್ಬ ನ್ಯಾಯಾಧೀಶರಾಗಲು ಸಾಧ್ಯವಿಲ್ಲ ಎಂಬ ಮೂಲನೀತಿಯನ್ನೇ ಉಲ್ಲಂಘಿಸಲಾಗಿದೆ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.

ದೂರುದಾರರ ಪಕ್ಷವನ್ನು ವಿಚಾರಿಸಿದ ಆಂತರಿಕ ಸಮಿತಿಯಲ್ಲಿ ಇಬ್ಬರು ಮಹಿಳಾ ನ್ಯಾಯಾಧೀಶರು ಇದ್ದು ಸುಪ್ರಿಂ ಕೋರ್ಟಿನ ಎರಡನೇ ಅತಿ ಸೇವಾಹಿರಿಯ ನ್ಯಾಯಾಧೀಶರು ಇದರ ಮುಖ್ಯಸ್ಥರಾಗಿದ್ದರು. 'ಕೆಲಸದ ಸ್ಥಳದಲ್ಲಿ ಮಹಿಳೆಗೆ ಲೈಂಗಿಕ ಕಿರುಕುಳ(ತಡೆ,ನಿಷೇಧ ಮತ್ತು ಪರಿಹಾರ) ಕಾಯ್ದೆ, 2013'( ಪೋಷ್ ಕಾಯ್ದೆ) ವಿಧಿಸಿರುವಂತೆ ಈ ಆಂತರಿಕ ಸಮಿತಿಯಲ್ಲಿ ಒಬ್ಬ ಹೊರಗಿನ ಸದಸ್ಯರು ಇರಲಿಲ್ಲ. ಸುಪ್ರಿಂ ಕೋರ್ಟಿನ ಒಬ್ಬ ಗೌರವಾರ್ಹ ಮಾಜಿ ಮಹಿಳಾ ನ್ಯಾಯಾಧೀಶರನ್ನು ಈ ಸಮಿತಿಯ ಸದಸ್ಯರಾಗಿ ಎಂದು ಕೇಳಲು ಸಾಧ್ಯವಿರಲಿಲ್ಲವೇ ಎಂದು ಎಐಡಿಡಬ್ಲ್ಯುಎ ಪ್ರಶ್ನಿಸಿದೆ. ಇದು ಈ ಕಾಯ್ದೆಯ ಭಾವನೆಗೆ ಮತ್ತು ಅದರ

ಪುಟ 7 ನೋಡಿ




ದೆಹಲಿಯಲ್ಲಿ ಮಹಿಳಾ ಸಂಘಟನೆಗಳ ಪ್ರತಿಭಟನೆ

## ಇದು ನ್ಯಾಯದ ನಿರಾಕರಣೆ–'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ

ಸುಪ್ರಿಂ ಕೋರ್ಟ್ ಈ ಕೇಸಿನಲ್ಲಿ ಅನುಸರಿಸಿರುವ ದಾರಿ ನ್ಯಾಯದ ನಿರಾಕರಣೆಯೇ ಆಗಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯ ಕೂಡ ವರ್ಣಿಸಿದೆ. ದೂರುದಾರಳಿಗೆ ಎಲ್ಲ ರೀತಿಯ ನೆರವನ್ನು ಒದಗಿಸಿ ಸಾಧ್ಯವಾದಷ್ಟು ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ವಿಚಾರಣೆ ನಡೆಸುವ ಬದಲು, ಮೂರು ದಿನಗಳ ನಂತರ ಆಕೆ ಮುಜುಗರ ಮತ್ತು ಬೆದರಿಕೆಯ ಭಾವನೆಯನ್ನು ವ್ಯಕ್ತಪಡಿಸಿ ವಿಚಾರಣೆಯಲ್ಲಿ ಹಾಜರಾಗುವುದಿಲ್ಲ ಎಂದು ಹೇಳಿದ ಮೇಲೂ ಆಕೆಯ ಗೈರುಹಾಜರಿಯಲ್ಲಿ ವಿಚಾರಣೆಯನ್ನು ಮುಂದುವರೆಸಲಾಯಿತು. ನಾಲ್ಕನೆಯ ದಿನ ಮುಖ್ಯ ನ್ಯಾಯಾಧೀಶರನ್ನು ಎಲ್ಲ ಆರೋಪಗಳಿಂದ ಮುಕ್ತಗೊಳಿಸಲಾಗಿದೆ ಎಂದು ಘೋಷಿಸಲಾಯಿತು. ಈ ರೀತಿಯ ಗೈರುಹಾಜರಿಯಲ್ಲಿ ವಿಚಾರಣೆ ನಡೆಸುವ ವಿಧಾನಕ್ಕೆ ಸ್ವತಃ ನ್ಯಾಯಾಲಯಗಳೇ ಆಕ್ಷೇಪ ವ್ಯಕ್ತಪಡಿಸಿವೆ ಎಂಬುದನ್ನು ಸಂಪಾದಕೀಯ ನೆನಪಿಸಿದೆ.

ಪುಟ 7 ನೋಡಿ

ಸಂಪಾದಕೀಯ

# ಗಡ್ಡ ಬಿಟ್ಟವರೆಲ್ಲ ಆತಂಕವಾದಿಗಳಾ?

ನಮ್ಮ ಯುವಕರ ಕೇಶವಿನ್ಯಾಸಗಳು ಮೇಲಿಂದ ಮೇಲೆ ಬದಲಾಗುತ್ತಿರುತ್ತವೆ. ಗಡ್ಡ ಬಿಡುವುದು ಒಂದು ಪ್ರಮುಖ ಫ್ಯಾಶನ್ ಆಗಿಬಿಟ್ಟಿದೆ. ತಲೆಕೂದಲನ್ನು ಚಿತ್ರ ವಿಚಿತ್ರವಾಗಿ ಕತ್ತರಿಸಿ ಕೊಳ್ಳುವುದಲ್ಲದೆ ಸಾಕಷ್ಟು ಉದ್ದವಾಗಿ ಗಡ್ಡ ಬಿಡುವುದು ನಮ್ಮ ಯುವಕರಿಗೆ ಒಂದು ಹವ್ಯಾಸ ಆಗಿದೆ. ಇದಕ್ಕಾಗಿ ನಮ್ಮ ಹುಡುಗರು ಸಾಕಷ್ಟು ಹಣವನ್ನು, ಸಾಕಷ್ಟು ಸಮಯವನ್ನು ವ್ಯಯ ಮಾಡುತ್ತಾರೆ. ಇದರಿಂದಾಗಿ ನಮ್ಮ ಹುಡುಗರು ಸುಂದರವಾಗಿ ಕಾಣುತ್ತಾರೆ. ಆಕರ್ಷಕವಾಗಿ ಕಾಣುತ್ತಾರೆ. ಆದರೆ ಅವರು ಬೆಳೆಸುತ್ತಿರುವ ಗಡ್ಡ ಯಾವುದರೂ ಒಂದು ದಿನ ಅವರನ್ನು ಸಂಕಷ್ಟಕ್ಕೆ ಒಳಪಡಿಸಿದರೆ ಆಶ್ಚರ್ಯವೇನಿಲ್ಲ. ಮೊನ್ನೆ ಮೇ 6 ರಂದು ಸಂಜೆ 7 ಗಂಟೆ ಸುಮಾರಿಗೆ ಕೆಂಪೇಗೌಡ ಮೆಟ್ರೋ ನಿಲ್ದಾಣದಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಕಂಡು ಬಂದ ಒಬ್ಬ ಗಡ್ಡಧಾರಿ ವ್ಯಕ್ತಿ ಜನರ ಆತಂಕಕ್ಕೆ ಕಾರಣನಾದ ಘಟನೆ ನಡೆಯಿತು. ಆತ ಗಂಗನಹಳ್ಳಿಯ ರಿಯಾಜ್ ಅಹ್ಮದ್ ಕಳೆದ ಮೂವತ್ತು ವರ್ಷಗಳಿಂದ ಮೆಜೆಸ್ಟಿಕ್ ನಲ್ಲಿ ತಳ್ಳುವ ಗಾಡಿ ಇಟ್ಟುಕೊಂಡು ವಾಚ್ ರಿಪೇರಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಆತನ ಬಳಿ ಬಿಬಿಎಂಪಿ ನೀಡಿರುವ ಲೈಸೆನ್ಸ್ ಕೂಡ ಇದೆ. ಅಂದು ಸಂಜೆ ಮನೆಗೆ ಹೋಗಲು ಮೆಟ್ರೋ ನಿಲ್ದಾಣಕ್ಕೆ ಹೋಗಿದ್ದ. ತಪಾಸಣೆ ನಡೆಸುತ್ತಿದ ಸಿಬ್ಬಂದಿ ಜೇಬಿನಲ್ಲಿದ್ದ ವಸ್ತುಗಳನ್ನು ಹೊರಗೆ ತೆಗೆಯುವಂತೆ ಹೇಳಿದ್ದರು. ಕರವಸ್ತ್ರವನ್ನು ತೋರಿಸಿ ತನ್ನ ಪಾಡಿಗೆ ಮನೆಗೆ ತಲುಪಿದನು. ಮರುದಿನ ಬೆಳಗ್ಗೆ ಪಕ್ಕದ ಮನೆಯ ಸೈಫುಲ್ಲಾ ನೀವು ಭಯೋತ್ಪಾದಕರಂತೆ. ಈ ಸುದ್ದಿ ವಾಹಿನಿಯಲ್ಲಿ ಫೋಟೋ ಸಹಿತ ಪ್ರಸಾರವಾಗುತ್ತಿದೆ ಎಂದು ವಿಡಿಯೋ ತೋರಿಸಿದ್ದರು. ಅದನ್ನು ನೋಡಿ ಗಾಬರಿಯಾದ ರಿಯಾಜ್ ತಾನೇ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದಾನೆ. ಹೆಚ್ಚಿನ ಅನಾಹುತ ನಡೆಯಲಿಲ್ಲ. ಆತ ಭಯೋತ್ಪಾದಕನಲ್ಲ ಎಂದು ಗೊತ್ತಾಗುತ್ತದೆ. ಗಡ್ಡ ಬಿಟ್ಟು ಓಡಾಡುವ ಎಲ್ಲರನ್ನು ಸಂಶಯದಿಂದ ನೋಡಿದರೆ ತಪ್ಪಾಗುತ್ತದೆ. ಕೆಲವರು ಇಂತಹ ಚಿತ್ರಗಳನ್ನು ಹಾಗೂ ಸುಳ್ಳು ಸುದ್ದಿಗಳನ್ನು ಸಾಮಾಜಿಕ ಜಾಲ ತಾಣಗಳಲ್ಲಿ ಹಾಕಿ ನಾಗರಿಕರಲ್ಲಿ ಭಯ ಹುಟ್ಟಿಸುತ್ತಾರೆ. ಅಂತಹ ಸುದ್ದಿಗಳಿಗೆ ಜನ ಕಿವಿಕೊಡಬಾರದು ಎಂದು ನಗರ ಪೊಲೀಸ್ ಕಮಿಷನರ್ ಸುನೀಲ್ ಕುಮಾರ್ ಎಚ್ಚರಿಕೆ ನೀಡಬೇಕಾಯಿತು. ಇಂದು ನಮ್ಮ ಸಮಾಜದಲ್ಲಿ ಸುದ್ದಿ ವಾಹಿನಿಗಳ ಹಾವಳಿ ಹದ್ದು ಮೀರುತ್ತಿದೆ. ಅವರಿಗೆ ಸುದ್ದಿಯೊಂದು ಸಿಕ್ಕರೆ ಸಾಕು ಅದರ ಸತ್ಯ ಸತ್ಯತೆ ಯನ್ನು ಪರಿ ಶೀಲನೆ ಮಾಡುವ ಗೋಜಿಗೆ ಹೋಗುವುದಿಲ್ಲ. ಹೀಗಾಗಿ ಗಡ್ಡ ಬಿಟ್ಟವರಲ್ಲ ಆತಂಕವಾದಿಗಳೆಂದು ಬಿಂಬಿಸಲು ಅವರು ಹೇಸುವುದಿಲ್ಲ. ಸಮಾಜದಲ್ಲಿ ಈ ದ್ವೇಷವನ್ನು ಬೆಳೆಸುವ ಪ್ರವೃತಿಯುಳ್ಳವರು ವಿಶೇಷವಾಗಿ ಈ ರೀತಿಯಲ್ಲಿ ಸಮಾಜಿಕ ಜಾಲತಾಣಗಳನ್ನು ಸುದ್ದಿ ವಾಹಿನಿಗಳನ್ನು ಬಳಸುತ್ತಿದ್ದಾರೆ. ಎಲ್ಲಾ ಮುಸಲ್ಮಾನರು ಆತಂಕವಾದಿಗಳೆಂದು ಬಿಂಬಿಸುವ ದಷ್ಟ ಪ್ರವೃತ್ತಿಯುಳ್ಳವರು ಇದರ ಭಾಗವಾಗಿದ್ದಾರೆ. ಇದರ ಪರಿಣಾಮವಾಗಿ ಮತೀಯ ಅಸ್ಮಿತ ಹೆಚ್ಚು ಆಕ್ರಮಣಕಾರಿಯಾಗುತ್ತಿದೆ. ಮತ ಧರ್ಮಗಳ ನಡುವೆ ಬೆಳೆಸಲಾಗುತ್ತಿರುವ ಈ ದ್ವೇಷ ಶಾಂತಿ ಸೌಹಾರ್ದತೆಯನ್ನು ನಾಶ ಮಾಡುತ್ತದೆ ಹಿಂದೂ ಮುಸ್ಲಿಂ ಎಂಬ ಭೇದವಿಲ್ಲದೆ ಗಡ್ಡ ಬಿಟ್ಟುಕೊಂಡು ಓಡಾಡುವ ಯುವಕರಿಗೆ ಇದರಿಂದ ಅನಾಹುತ ಆಗುವುದನ್ನು ತಳ್ಳಿಹಾಕಲಾಗದು. ಅನಾಹುತ ಅರ್ಥವಾಗುವ ಹೊತ್ತಿಗೆ ಕಾಲ ಮಿಂಚಿ ಹೋಗಬಹುದು.

# ಕನ್ನಡ ಭಾಷೆ ಹಾಗೂ ಅಂಗನವಾಡಿಗಳ ಮೇಲೆ ರಾಜ್ಯ ಸರಕಾರದ ಧಾಳಿ

ರಾಜ್ಯದ ಜನತೆಯ ಒತ್ತಾಯ ಹಾಗೂ ಪ್ರತಿಭಟನೆಗಳ ನಡುವೆಯು ರಾಜ್ಯ ಸರಕಾರ ತನ್ನ ಕನ್ನಡ ಹಾಗೂ ಬಡವರ ವಿರೋಧಿ ನೀತಿಗಳನ್ನು ಜಾರಿಗೆ ತರಲು ಮುಂದಾಗಿದೆ.

2018–19 ರ ರಾಜ್ಯ ಬಜೆಟ್ ನಲ್ಲಿ ಘೋಷಿಸಿದಂತೆ ಜೂನ್ ಮೊದಲವಾರದಿಂದ ಈ ವರ್ಷದ ಶೈಕ್ಷಣಿಕ ವರ್ಷದ ಆರಂಭದಿಂದಲೇ ಪ್ರಾಯೋಗಿಕವಾಗಿ ಇಂಗ್ಲೀಷ್ ಮಾದ್ಯಮದ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ರಾಮನಗರ ಜಿಲ್ಲೆಯಲ್ಲಿ ಆರಂಭಿಸಲು ಉದ್ದೇಶಿಸಿರುವುದು ತೀವ್ರ ಖಂಡನೀಯವಾಗಿದೆ.

ಅದಾಗಲೇ ಸರಕಾರವೇ ಕನ್ನಡದ ಮೇಲೆ, ಕನ್ನಡಿಗರ ಮೇಲೆ ಹಾಗೂ ಭಾಷಾವಾರು ಪ್ರಾಂತ ರಚನೆಯ ಘನ ಉದ್ದೇಶದ ಮೇಲೆ ನಡೆಸುತ್ತಿರುವ ಗಂಭೀರ ಧಾಳಿ ಇದಾಗಿದೆಯೆಂದು ಅದನ್ನು ತಕ್ಷಣವೇ ತಡೆಯ ಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸಿದೆ.



ಕೇಂದ್ರ ಮತ್ತು ರಾಜ್ಯ ಸರಕಾರಗಳು ಜಾರಿಗೆತರುತ್ತಿರುವ ಲೂಟಿಕೋರ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ಜಾಗತೀಕರಣ, ಉದಾರೀಕರಣದ ನೀತಿಗಳು ಎಲ್ಲೆಲ್ಲೂ ಇಂಗ್ಲೀಷ್ ಭಾಷೆ ಅನಿವಾರ್ಯವೆಂಬ ಹುಸಿ ಭಾವನೆಯನ್ನು ಹುಟ್ಟು ಹಾಕಿದೆ. ಅಂತಹ ಭಾವನೆಯನ್ನು ಪುರಸ್ಕರಿಸಲು ಸಿಪಿಐ(ಎಂ) ಇಂಗ್ಲೀಷ್ ಭಾಷೆಯನ್ನು ಒಂದು ಭಾಷೆಯಾಗಿ ಒಂದನೇ ತರಗತಿಯಿಂದ ಪರಿಣಾಮಕಾರಿಯಾಗಿ ಕನ್ನಡ ಮಾದ್ಯಮ ಶಾಲೆಗಳಲ್ಲಿಯೇ ಕಲಿಸಲು ಅಗತ್ಯ ಕ್ರಮಗಳನ್ನು ವಹಿಸಿದಲ್ಲಿ, ಕನ್ನಡ ಶಾಲೆಗಳಿಗೆ ಹೆಚ್ಚಿನ ಮಕ್ಕಳನ್ನು ಸೆಳೆದು ಹಾಜರಾತಿಯನ್ನು ಹೆಚ್ಚಿಸಲು ಸಾದ್ಯವಿದೆಯೆಂದು ಅದಾಗಲೇ ಸಿಪಿಐ(ಎಂ) ಒತ್ತಾಯಿಸಿದೆ.

ಇದು ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆಯುವ ಕರ್ನಾಟಕದ ಜನತೆಯ ಹಕ್ಕುಗಳ ಮೇಲೆ ಮತ್ತು ರಾಷ್ಟ್ರ ಭಾಷೆಗಳಲ್ಲೊಂದಾದ ಕನ್ನಡದ ಮೇಲೆ ಬಹುರಾಷ್ಟ್ರೀಯ ಸಂಸ್ಥೆಗಳು ನಡೆಸುತ್ತಿರುವ ದೌರ್ಜನ್ಯದ ಮುಂದುವರೆದ ಭಾಗವಾಗಿದೆ.

ಅದೇ ರೀತಿ, ಮಾತೃಭಾಷೆಯಲ್ಲಿ ಆಗ ತಾನೆ ಬೆರಗಿನಿಂದಹೊರ ಜಗತ್ತನ್ನು ನೋಡುವ, ಯೋಚಿಸುವ ಎಳೆಯ ಮಗುವಿನ ಮೇಲೆ ತನ್ನದಲ್ಲದ ಮತ್ತು ತನ್ನ ಪರಿಸರದಲ್ಲಿಲ್ಲದ ಪರಕೀಯ ಭಾಷೆಯಲ್ಲಿ ವಿಷಯವನ್ನು ಗ್ರಹಿಸುವಂತೆ ಒತ್ತಡ ಹೇರುವುದು ಆ ಮಗುವಿನ ಮಾನಸಿಕ ಪರಿಸರದ ವಿಕಾಸದ ಮೇಲೆ ಅಹಿತಕರ ಪರಿಣಾಮ ಬೀರುತ್ತದೆಂಬುದು ಜಗತ್ತಿನ ಹಲವು ಅಧ್ಯಯನಗಳು ಹ್ ೀ ಳ್ ು ತ್ತಿ ರ್ ು ವ ಾ ಗ್ ಸರಕಾರದ ಈ ನಡೆ ಸಮರ್ಪಕವಾಗಿಲ್ಲ.



ಈ ಮೂಲಕ ಒಂದೆಡೆ ಕನ್ನಡ ಭಾಷೆಯ ಮೇಲೆ ಧಾಳಿನಡೆಸಿರುವಾಗಲೇ ಇನ್ನೊಂದೆಡೆ ಸದರಿ ಶಾಲೆಗಳಲ್ಲಿ 3 ವರ್ಷ 10 ತಿಂಗಳ ಮಕ್ಕಳಿಗೆ LKG ಹಾಗೂ UKG ಶಿಕ್ಷಣವನ್ನು ನೀಡಲು ಕ್ರಮವಹಿಸಿದೆ.

ಅಂಗನವಾಡಿಗೆ ಸೇರಬೇಕಾದ ಈ ವಯಸ್ಸಿನ ಮಕ್ಕಳನ್ನು ಶಾಲೆಗೆ ಕರೆಯಲಾಗುತ್ತದೆ. ಇದರಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಫಲಾನುಭವಿಯಾಗುವ ಹಕ್ಕನ್ನು ರಾಜ್ಯದ ಸುಮಾರು 17 ಲಕ್ಷ ಮಕ್ಕಳು ಕಳೆದುಕೊಳ್ಳ ಬೇಕಾಗುತ್ತದೆ.

ಫಲಾನುಭವಿಗಳೇ ಇಲ್ಲವಾದಾಗ ಯೋಜನೆಯ ಅಗತ್ಯವೆ ಇರುವುದಿಲ್ಲ. ಈ ಮೂಲಕ ಯೋಜನೆಯನ್ನು ಕಳಚಿಹಾಕುವ ಮತ್ತು ರಾಜ್ಯದಲ್ಲಿರುವ 67 ಸಾವಿರ ಅಂಗನವಾಡಿ ಕೇಂದ್ರಗಳನ್ನು ಮುಚ್ಚಿಹಾಕುವ ಅಲ್ಲಿ ಕಾರ್ಯ ನಿರ್ವಹಿಸುವ ಸುಮಾರು 1.35 ಲಕ್ಷ ಉದ್ಯೋಗಿಗಳ ಉದ್ಯೋಗ ಕಳೆಯುವ ಸಂಚು ಇದರಲ್ಲಡಗಿದೆ.

ಮಗು ಈ ಅವಧಿಯಲ್ಲೇ ಅದು ಶೇ 40 ರಷ್ಟು ದೈಹಿಕ ಹಾಗೂ ಶೇ 80 ರಷ್ಟು ಮಾನಸಿಕ ಬೆಳವಣಿಗೆಯನ್ನು ಸಾದಿಸಲಿದೆ ಎಂಬುದು ವೇದ್ಯವಾಗಿದೆ.

ಬಹುತೇಕ ಬಡವರಿರುವ ಈ ರಾಜ್ಯದಲ್ಲಿನ ಮಕ್ಕಳು ಅಪೌಷ್ಠಿಕತೆಯಿಂದ ಬಳಲುವುದು ವೇದ್ಯವಾಗಿರುವಾಗ ಪೌಷ್ಠಿಕ ಆಹಾರ ನೀಡಿಕೆಯ ಮೂಲವಾಗಿರುವ ಸಮಗ್ರ ಶಿಶು ಅಭಿವೃದ್ದಿ ಯೋಜನೆಯನ್ನು ಕಳಚಿ ಹಾಕುವ ಈ ನಿಲುಮೆ ಅಪೌಷ್ಠಿಕತೆಯ ಸಾವುಗಳನ್ನು ಹೆಚ್ಚಿಸಲಷ್ಟೇ ನೆರವಾಗಲಿದೆ.

ಬಾಲ್ಯದಲ್ಲಿನ ಅಪೌಷ್ಠಿಕತೆಯು ಮಗುವಿನ ಮುಂದಣ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯ ಮೇಲೆ ಬೀರಲಿರುವ ದುಷ್ಪರಿಣಾಮ ತಡೆಯುವ ಉದ್ದೇಶದಿಂದಲೆ ಈ ಯೋಜನೆ ಜಾರಿಗೆ ಬಂದಿದೆ.

ಆದ್ದರಿಂದ ಈ ಎಲ್ಲಾ ಜನವಿರೋಧಿ ನೀತಿಯನ್ನು ಕೈ ಬಿಡುವಂತೆ ಬಲವಾದ ಪ್ರತಿಭಟನೆ ನಡೆಸ ಬೇಕಾಗಿದೆ.

■



# ಪಕ್ಕಲಡ್ಕ ದಲ್ಲಿ ಭಗತ್ ಸಿಂಗ್ ಭವನ ಉದ್ಘಾಟನೆ

ಪಕ್ಕಲಡ್ಕ ಯುವಕ ಮಂಡಲ (ರಿ) ಇದರ 65 ನೇ ವರ್ಷದ ಸವಿನೆನಪಿನಲ್ಲಿ ನಿರ್ಮಾಣಗೊಂಡ ಭಗತ್ ಸಿಂಗ್ ಭವನವನ್ನು ಸಿಪಿಐಎಂ ಪಕ್ಷದ ಜಿಲ್ಲಾಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ ಯಾದವ ಶೆಟ್ಟಿ ಯವರು ಉದ್ಘಾಟಿಸಿದರು.

ನಂತರ ಉದ್ಘಾಟನಾ ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಾ ಭಗತ್ ಸಿಂಗ್ ದೇಶದ ಏಳಿಗೆಗಾಗಿ ಬ್ರಿಟೀಷರ ಜೊತೆ ಸೆಣಸಾಡಿ ಮಡಿದ ಅಪ್ರತಿಮ ಹೋರಾಟಗಾರ. ಭಗತ್ ಸಿಂಗ್ ಬ್ರಿಟೀಷರನ್ನು ದೇಶದಿಂದ ಓಡಿಸೋದರ ಜೊತೆಗೆ ಅನ್ಯಾಯದ ಬುನಾದಿಯ ಮೇಲೆ ರಚಿತವಾದ ಶೋಷಣೆಯ ವ್ಯವಸ್ಥೆಯನ್ನು ಸರಿಪಡಿಸಬೇಕೆಂಬುದು ಕೂಡಾ ಅವರ ಕನಸಾಗಿತ್ತು, ಇಂದು ಭಗತ್ ಸಿಂಗರ ಅದೇ ಆದರ್ಶ, ಕನಸನ್ನು ಹೊತ್ತಂತಹ ಪಕ್ಕಲಡ್ಕ ಯುವಕ ಮಂಡಲವು ಕಳೆದ 65 ವರುಷಗಳಿಂದ ಸಮಾನತೆಗಾಗಿ, ಸೌಹಾರ್ದತೆಗಾಗಿ, ಶೋಷಣೆ ಮುಕ್ತ ನವ ಸಮಾಜದ ನಿರ್ಮಾಣಕ್ಕಾಗಿ ತನ್ನ ನಿಸ್ವಾರ್ಥ ಸೇವೆಯನ್ನು ಮಾಡುತ್ತ ಬಂದಿರುವುದು ನಿಜಕ್ಕೂ ಶ್ಲಾಘನೀಯ. ಇಂದು ಭಗತ್ ಸಿಂಗರ ತ್ಯಾಗ, ಆದರ್ಶವನ್ನು ಮೈಗೂಡಿಸಿಕೊಂಡ ಯುವಕ ಮಂಡಲದ ಸದಸ್ಯರು ಭಗತ್ ಸಿಂಗ್ ಭವನವನ್ನು ನಿರ್ಮಿಸುವ ಮೂಲಕ ಇನ್ನಷ್ಟು ಜನಪರ ಸೇವೆಗೈಯಲು ಕಾರ್ಯಪ್ರವರ್ತರಾಗಿದ್ದಾರೆಂದರೆ ನಿಜವಾಗಿಯೂ ಹೆಮ್ಮೆಯ ವಿಚಾರ. ಇಂತಹ ಕನ್ನೋಟವನ್ನಿಟ್ಟುಕೊಂಡ ಪಕ್ಕಲಡ್ಕ ಯುವಕ ಮಂಡಲವು ಜಿಲ್ಲೆಯ ಇತರ ಸಂಘ ಸಂಸ್ಥೆಗಳಿಗೆ ಮಾದರಿಯಾಗಲಿ ಎಂದರು.

ಈ ವೇಳೆ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಿವೈಎಫ್ಐ ರಾಜ್ಯಾಧ್ಯಕ್ಷರಾದ ಮುನೀರ್ ಕಾಟಿಪಳ್ಳ ಭಗತ್ ಸಿಂಗ್ ಭಾವಚಿತ್ರವನ್ನು ಅನಾವರಣಗೊಳಿಸಿದರು.

ಈ ವೇಳೆ ಯುವ ಉದ್ಯಮಿ ಸುಶಾಂತ್ ಭಂಡಾರಿ, ವಿಜಯ ಬಜಾಲ್, ಸದಾಶಿವ ದಾಸ್, ಮನೋಜ್‌ಮಾಣೈ, ರಾಮಚಂದ್ರ ಆಳ್ವ, ರಾಜೇಶ್ ನಾಯ್ಕ್, ಸಜಿತಾ ಕೃಷ್ಣನ್, ಬಾಲಕೃಷ್ಣ ಶೆಟ್ಟಿ, ದಯಾನಂದ ಶೆಟ್ಟಿ, ಕಟ್ಟಡ ಸಮಿತಿ ಕಾರ್ಯದರ್ಶಿ ಕಮಲಾಕ್ಷಶೆಟ್ಟಿ ಉಪಸ್ಥಿತರಿದ್ದರು.

ಯುವಕ ಮಂಡಲದ ಸಹಕಾರ್ಯದರ್ಶಿ ಸಂತೋಷ್ ಬಜಾಲ್ ಸ್ವಾಗತಿಸಿ, ಪ್ರಜ್ವಲ್ ವಂದಿಸಿದರು, ದೀಪಕ್ ಬಜಾಲ್ ವರದಿ ಮಂಡಿಸಿ ಕಾರ್ಯದರ್ಶಿ ನಾಗರಾಜ್ ಬಜಾಲ್ ಕಾರ್ಯಕ್ರಮ ನಿರೂಪಿಸಿದರು..

ಈ ವೇಳೆ ವೇದಿಕೆಯಲ್ಲಿ ರಂಗ ನಿರ್ದೇಶಕ ವಿದ್ದು ಉಚ್ಚಿಲ್ ಹಾಗೂ ಇಂಜಿನಿಯರ್ ವಿಜಯ ಬಜಾಲ್ ಅವರನ್ನು ಸನ್ಮಾನಿಸಲಾಯಿತು. ಸಭಾ ಕಾರ್ಯಕ್ರಮದ ನಂತರ ಯುವಕ ಮಂಡಲದ ಕಾರ್ಯಕರ್ತರಿಂದಲೇ ಕೋರ್ದಬ್ಬು ತನ್ನಿಮಾನಿಗ ನಾಟಕ ಹಾಗೂ ನೃತ್ಯ ಕಾರ್ಯಕ್ರಮಗಳನ್ನು ನೀಡಲಾಯಿತು.

**ನಾಗರಾಜ್**





# ಪಂಜಿಮೊಗರು ಶಾಲೆಯಲ್ಲಿ ಚಿಣ್ಣರಮೇಳ

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪಂಜಿಮೊಗರು ಇಲ್ಲಿ ಮೇ 1 ರಿಂದ 4 ರವರೆಗೆ ಶಾಲಾ ಮಕ್ಕಳ ಬೇಸಗೆ ರಜಾ ಶಿಬಿರ ಚಿಣ್ಣರ ಮೇಳ ಯಶಸ್ವಿಯಾಗಿ ನಡೆಯಿತು.

ಭಗತ್ ಸಿಂಗ್ ಸ್ಮಾರಕಟ್ರಸ್ಟ್, ಡಿವೈಎಫ್ಐ ಪಂಜಿಮೊಗರು ಘಟಕ ವತಿಯಿಂದ ಶಿಬಿರವನ್ನು ಆಯೋಜಿಸಲಾಗಿತ್ತು ಸ್ಥಳೀಯ ಉದ್ಯಮಿ ಕ್ಲೆವರ್ ಡಿಸೋಜ ಕೂಳೂರು, ಶಿಬಿರವನ್ನು ಉದ್ಘಾಟಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಗಣ್ಯರಾದ ಪಿ.ಸಿ ಸುಕುಮಾರ್ ಮಾಜಿ ಕಾರ್ಪೊರೇಟರ್ ದಯಾನಂದ ಶೆಟ್ಟಿ, ಎಸ್.ಎಫ್.ಐ ಮುಖಂಡರಾದ ವಿಕಾಸ್ ಕುತ್ತಾರ್, ಶಾಲಾ ಶಿಕ್ಷಕಿ ಶ್ರೀಮತಿ ಶೋಭಾ, ಶ್ರೀಮತಿ ಸೌಮ್ಯ, ಡಿವೈಎಫ್ಐ ಮುಖಂಡರಾದ ಚರಣ್ ಶೆಟ್ಟಿ ಉಪಸ್ಥಿತರಿದ್ದರು.

ಶಿಬಿರದಲ್ಲಿ ವ್ಯಕ್ತಿತ್ವ ವಿಕಸನ, ಚಿತ್ರಕಲೆ, ಕ್ರಾಫ್ಟ್, ಹಾಡು, ಮಿಮಿಕ್ರಿ, ಪೆನ್ಸಿಲ್ ಆರ್ಟ್, ಹಾವು-ನಾವು ಹಾವುಗಳ ಪರಿಚಯದ ವಿಶೇಷ ಕಾರ್ಯಕ್ರಮ, ಗೋಡೆ ಪತ್ರಿಕೆ, ಪರಿಸರ ಅದ್ಯಯನ ಮುಂತಾದ ತರಬೇತಿಗಳನ್ನು ನೀಡಲಾಯಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಕಲಾವಿದರಾದ ಜಿ ಕಂದನ್, ಪ್ರೇಮ್‌ನಾಥ್ ಮರ್ಣೆ, ಮೈಮ್‌ರಾಮ್‌ದಾಸ್, ತಸ್ಲೀಮಾ ರಂಗಸ್ವರೂಪ, ಶ್ರೀಮತಿ ವಿಲ್ಮಾ, ಶ್ರೀಮತಿ ವೀಣಾ, ನಿತಿನ್ ಸುವರ್ಣ, ಉರಗತಜ್ಞರಾದ ಸ್ನೇಕ್‌ಜಾಯ್, ಸ್ನೇಕ್ ಪಾಪು, ಗಂಗೇಶ್ ಬೋಳಾರ್, ಸಂಯೋಜಕರಾದ ಸಂತೋಷ್ ಡಿಸೋಜ, ಹನುಮಂತ, ವಾಣಿ ಅರುಣ್, ಶರಣ್‌ದೀಪ್ ಉಪಸ್ಥಿತರಿದ್ದರು.

# ಹಸಿವು ತಾಳಲಾರದೆ ಮಣ್ಣು ತಿಂದ ಇಬ್ಬರು ಮಕ್ಕಳ ಸಾವು





ಕ್ಷಣ-ಕ್ಷಣದ ಸುದ್ದಿ, ಸುದ್ದಿಯಷ್ಟೇ ಅಲ್ಲ, ಸಮಗ್ರ ಸುದ್ದಿ, ಹೀಗೆ ಭರಾಟೆಯ ಸುದ್ದಿ ಮಾಧ್ಯಮದ ಆರ್ಭಟದ ಜೊತೆಗೆ ಸೆಕೆಂಡಿಗೆ ಲೆಕ್ಕಕ್ಕೆ ನಿಲುಕದಂತಹ ಸುದ್ದಿಗಳು ಅಂತರ್ಜಾಲ ಮಾಧ್ಯಮ, ಸಾಮಾಜಿಕ ಜಾಲತಾಣದಲ್ಲಿ ಏರುತ್ತಲೇ ಇರುತ್ತದೆ. ಇದರ ನಡುವೆ ಒಂದು ಸುದ್ದಿ ಹಾಗೆ ಬಂದು ಹೀಗೆ ಮರೆಯಾದದ್ದು ಒಂದು ವಿಚಿತ್ರ ಸುದ್ದಿ.

ಕರ್ನಾಟಕ ಗಡಿಭಾಗದ ಆಂಧ್ರದಲ್ಲಿ ಬಾಗೇಪಲ್ಲಿ ವಾಸದ ದಂಪತಿಯ ಇಬ್ಬರು ಮಕ್ಕಳು ಹಸಿವು ತಾಳಲಾರದೆ ಮಣ್ಣು ತಿಂದು ಆಸುನೀಗಿದರೆಂದು ಒಂದು ಭೀಕರ ಸುದ್ದಿ ನೋಡಲು ಸಾಧ್ಯವಾಯಿತು.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ನಿವಾಸಿಗಳಾದ ಮಹೇಶ್ ಹಾಗೂ ನಾಗಮಣಿ ಎಂಬ ದಂಪತಿಗೆ ಸೇರಿದ 6 ಜನ ಮಕ್ಕಳಲ್ಲಿ ಆರು ತಿಂಗಳ ಹಿಂದೆ ಅವಿನಾಶ್ (3 ವರ್ಷ) ಹಾಗೂ ಇತ್ತೀಚಿಗೆ ಮಗಳು ವೆನ್ನೆಲಾಳ (4 ವರ್ಷ) ಮಗುವು ಹಸಿವನ್ನು ತಾಳಲಾರದೆ ಮಣ್ಣು ತಿಂದು ಸಾವನ್ನಪ್ಪಿರುವ ಘಟನೆ ಆಂಧ್ರದ ಗಡಿಭಾಗ ಕದಿರಿಯ ಕುಮ್ಮಾರವಂಡಲಪಲ್ಲೆ ಗ್ರಾಮದಲ್ಲಿ ನಡೆದಿದ್ದು ಮೇ 5ರಂದು ಬೆಳಕಿಗೆ ಬಂದಿದೆ.

ಕೂಲಿ ಅರಸಿ ಕಳೆದ 10 ವರ್ಷಗಳ ಹಿಂದೆ ಆಂಧ್ರಪ್ರದೇಶಕ್ಕೆ ವಲಸೆ ಹೋಗಿದ್ದ ಮಹೇಶ್ ಕುಟುಂಬ ಕೂಲಿ ಕೆಲಸದಲ್ಲೇ ಜೀವನ ಸಾಗಿಸುತ್ತಿದ್ದರು. ಕಲ್ಲು ಒಡೆಯುವ ಕೆಲಸ ನಿರ್ವಹಿಸುತ್ತಿದ್ದ ಕುಟುಂಬವು ಕಳೆದ ಮೂರು ವರ್ಷಗಳಿಂದ ಕುಮ್ಮಾರವಂಡರಪಲ್ಲೆಯಲ್ಲಿ ಬಂಡೆಯ ಮೇಲೆ ಜೋಪಡಿಯಲ್ಲಿಯೇ ಸಂಸಾರ ನಡೆಸುತ್ತಿದ್ದರು.

ಆಟವಾಡುವ ವಯಸ್ಸಿನ ಮಕ್ಕಳು ಮಣ್ಣು ತಿಂದು ಸಾವನ್ನಪ್ಪಿದ್ದರು. ಬಡತನ, ಹಸಿವು, ಆರ್ಥಿಕ ಸಂಕಷ್ಟ, ಅಧಿಕ ಸಂತಾನ ಎಂಬ ಸುದ್ದಿಯ ಜೊತೆಯಲ್ಲಿಯೇ ಆಸುನೀಗಿದ ಮಕ್ಕಳ ತಂದೆ-ತಾಯಿ ಮದ್ಯವ್ಯಸನಿಗಳು ಎಂಬ ಅಂಶ ತಿಳಿದು ಬಂದಿದೆ.

ಸಾವಿನ ಸುತ್ತ ವಿವಿಧ ವ್ಯಾಖ್ಯಾನಗಳನ್ನು ದಾಖಲಿಸಬಹುದು, ಆದರೆ ಈ ಘಟನೆಯಲ್ಲಿ ಬಡತನ ಹಾಗೂ ಆರ್ಥಿಕ ಸಂಕಷ್ಟ ಎಂಬುದು ವಾಸ್ತವವಾದದ್ದು ಎಂಬುದು ಸತ್ಯಸಂಗತಿ.

ಕೂಲಿಯನ್ನೇ ನಂಬಿಕೊಂಡು ಬದುಕುವ ಕುಟುಂಬಕ್ಕೆ ಒಪ್ಪೊತ್ತಿನ ಊಟಕ್ಕೂ ಹೋರಾಟ ನಡೆಸುವ ಇವತ್ತಿನ ಸಂದರ್ಭದಲ್ಲೂ ಒಂದು ದಿನ ಕೂಲಿ ಇಲ್ಲದಿದ್ದರೆ ಉಪವಾಸವೇ ಗತಿ. ಬೆಳೆಯುವ ಮಕ್ಕಳಿಗೆ ಪೌಷ್ಠಿಕತ್ವದ ಆಹಾರವೂ ದೊರೆಯದಿದ್ದಾಗ ನರಳುವ ಸ್ಥಿತಿ ಶೋಚನೀಯವಾಗಿರುತ್ತದೆ.

ಲೋಕಸಭಾ ಚುನಾವಣೆಯ ಮಹಾಸಮರ ಹಾಗೂ ಆಧುನಿಕತೆಯೆಡೆಗೆ ಭಾರತ ಎಂಬ ದೇಶದಲ್ಲಿ ಹಸಿವು ಹಾಗೂ ಬಡತನದ ಕಾರಣಕ್ಕಾಗಿ ಸಾವು ಸಂಭವಿಸುತ್ತಿರುವ ಘಟನೆಗಳು ಇತ್ತೀಚಿಗೆ ಹೆಚ್ಚಾಗುತ್ತಿರುವುದು ಖೇದಕರವಾದ ಸಂಗತಿಯಾಗಿದೆ.

**-ವಿನೋದ ಶ್ರೀರಾಂಪುರ**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅದಿ ನಿಯಮದಡಿಯಲ್ಲಿ ಕೆಲಸ ಕೊಟ್ಟು ವಲಸೆ ತಡೆಗಟ್ಟಲು ಒತ್ತಾಯಿಸಿ ದಿನಾಂಕ 6-5-2019 ರಂದು ಶಹಾಪುರ ತಾಲೂಕಿನ ಹೊಸಕೇರ ಗ್ರಾಂ.ಪಂ. ಮುಂದೆ ಪ್ರತಿಭಟನೆ ಮಾಡಿ ಕೂಲಿಕಾರರು ಮನವಿ ಪತ್ರ ಸಲ್ಲಿಸಿದರು.



# ಮೀನುಗಾರರ ನಾಪತ್ತೆ ಪ್ರಕರಣ – ನ್ಯಾಯಾಂಗ ತನಿಖೆಗೆ ಸಿಪಿಐ(ಎಂ) ಒತ್ತಾಯ



ಬಾಲಕೃಷ್ಣ ಶೆಟ್ಟಿ

ಡಿಸೆಂಬರ್ 13, 2018 ರಿಂದ ಮೀನುಗಾರಿಕೆ ನಡೆಸುತ್ತಿದ್ದ ಸುವರ್ಣ ತ್ರಿಭುಜ ಎಂಬ ಬೋಟು ನಾಪತ್ತೆಯಾಗಿದ್ದು ಅದರಲ್ಲಿದ್ದ 7 ಜನ ಕೆಲಸಗಾರರು ಕಾಣೆಯಾಗಿದ್ದಾರೆ. ಈ ಲೇಖನ ಬರೆಯುವವರೆಗೂ ಕಾಣೆಯಾದ ಮೀನುಗಾರರ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ ಹಾಗೂ ಮರಣ ಹೊಂದಿರಬಹುದೆಂದು ಬಾವಿಸಲಾಗಿದೆ.

ಮೇ 3 ರಂದು ಮಹಾರಾಷ್ಟ್ರದ ರತ್ನಗಿರಿ ಬಳಿಯ ಮಾನ್ವರ್ ಎಂಬಲ್ಲಿ ಸಮುದ್ರದ ಆಳದಲ್ಲಿ ಬೋಟಿನ ಅವಶೇಷಗಳು ಪತ್ತೆಯಾಗಿದ್ದು ಐಎನ್ಎಸ್ ಕೊಚ್ಚಿನ್ ಎಂಬ ನೌಕಾ ಪಡೆಯ ಹಡಗು ಡಿಕ್ಕಿ ಹೊಡೆದುದರ ಫಲವಾಗಿ ಬೋಟು ಮುಳುಗಿ ಮೀನುಗಾರರು ನಾಪತ್ತೆಯಾಗಿದ್ದಾರೆ ಎಂಬ ಸಂಶಯ ಉಂಟಾಗಿದ್ದು ಈ ಕುರಿತು ನ್ಯಾಯಾಂಗ ತನಿಖೆ ನಡೆಯಬೇಕೆಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಆಗ್ರಹಿಸಿದೆ.

**ನ್ಯಾಯಾಂಗ ತನಿಖೆ ಏಕೆ?**

ಕರಾವಳಿಯ ಮೀನು ತಿನ್ನಲು ರುಚಿ. ಆದರೆ ಆಳ ಸಮುದ್ರದಿಂದ ರಾಶಿಗಟ್ಟಲೆ ಮೀನು ದಡಕ್ಕೆ ತರಲು ಕೆಲಸಗಾರರು ಜೀವನ್ಮರಣದ ಹೋರಾಟ ನಡೆಸಬೇಕಾಗಿದೆ ಎಂಬುದು ಬಹುಶಃ ಅನೇಕರಿಗೆ ತಿಳಿದಿರಲಿಕ್ಕಿಲ್ಲ. ಕರಾವಳಿ ಜಿಲ್ಲೆಗಳ ಆರ್ಥಿಕತೆಯಲ್ಲಿ ಮೀನುಗಾರಿಕೆ ಪ್ರಮುಖ ಪಾತ್ರವಹಿಸುತ್ತದೆ. ಉಡುಪಿ ಜಿಲ್ಲೆ ಒಂದರಲ್ಲೇ ಕನಿಷ್ಠ 1 ಲಕ್ಷ ಜನರು ನೇರವಾಗಿ ಮೀನುಗಾರಿಕಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ರುಚಿ ರುಚಿಯಾದ ಮೀನಿನ ಖಾದ್ಯದ ಹಿಂದೆ ಹಲವಾರು ಮೀನುಗಾರರ ಅದರಲ್ಲೂ ಕಾರ್ಮಿಕರ ತ್ಯಾಗವೂ ಇದೆ ಎಂದರೆ ತಪ್ಪಾಗಲಾರದು. ಒಳನಾಡಿನ ಮೀನುಗಾರಿಕೆಯಲ್ಲಿ ಜೀವ ನಷ್ಟವಾಗುವ ಭಯವಿಲ್ಲ. ಆದರೆ ಸಮುದ್ರದಲ್ಲಿ ಬಲೆ ಬೀಸಿ ಮೀನು ಹಿಡಿಯುವಾಗ ಮೀನುಗಾರರು ಜೀವವನ್ನು ಕಳೆದುಕೊಳ್ಳುವ ಸಂದರ್ಭಗಳು ಇವೆ. ಪ್ರತಿ ವರ್ಷ ಮಲ್ಪೆ ಬಂದರಿನಿಂದ ಹೊರಟ ಬೋಟುಗಳಲ್ಲಿ ಸರಾಸರಿ 10–12 ಮೀನುಗಾರರು ಜೀವವನ್ನು ಕಳೆದುಕೊಳ್ಳುತ್ತಾರೆ ಎಂದು ಅಂದಾಜಿಸಲಾಗಿದೆ. ಬೋಟು ಮುಳುಗಿ ಸಾಯುವುದು ತೀರಾ ಕಡಿಮೆ. ಬದಲಾಗಿ ಬಲೆ ಬೀಸಿದಾಗ ಅದನ್ನು ಎಳೆಯುವ ಸಂದರ್ಭದಲ್ಲಿ, ಇನ್ನಿತರ ಅಕಸ್ಮಿಕ ಕಾರಣಗಳಿಗಾಗಿ ಮರಣ ಹೊಂದುವವರ ಸಂಖ್ಯೆ ಜಾಸ್ತಿ.

**ಸುವರ್ಣ ತ್ರಿಭುಜ ಬೋಟಿನ ಕಥೆ :**

2018 ರ ಡಿಸೆಂಬರ 13 ರಂದು ಉಡುಪಿ ಮಲ್ಪೆ ಬಂದರಿನಿಂದ ಹೊರಟು ನಾಪತ್ತೆಯಾಗಿರುವ ಸುವರ್ಣ ತ್ರಿಭುಜ ಬೋಟಿನ ಕಥೆ ದಾರುಣವಾಗಿದೆ. ಮಲ್ಪೆಯ ಇಬ್ಬರು ಹಾಗೂ ಉತ್ತರ ಕನ್ನಡ ಜಿಲ್ಲೆಯ ಐದು ಜನರು ಈ ಬೋಟಿನಲ್ಲಿ ಆಳ ಸಮುದ್ರದಲ್ಲಿ ಮೀನು ಹಿಡಿಯಲು ತೆರಳಿದ್ದರು. ಬೋಟು ಮಾಲಕರಾದ ಉಡುಪಿಯ ಬಡಾ ನಿಡಿಯೂರು ಗ್ರಾಮದ ಚಂದ್ರಶೇಖರ ಕೋಟ್ಯಾನ್ ಸ್ವತಃ ಬೋಟಿನಲ್ಲಿ ತೆರಳಿದ್ದರು. ಬೋಟಿನ ಮಾಲಕ ಸಾಮಾನ್ಯವಾಗಿ ಮಧ್ಯಮ ವರ್ಗದವರಾಗಿದ್ದು, ಕೆಲಸಗಾರರು ಬಡಜನ ವಿಭಾಗಕ್ಕೆ ಸೇರಿದವರು.

ಆಳ ಸಮುದ್ರದಲ್ಲಿ ಮೀನುಗಾರಿಕೆಗೆ ತೆರಳುವ ಬೋಟಿನವರು 8–10 ದಿನಕ್ಕೆ ಬೇಕಾಗುವಷ್ಟು ಆಹಾರ ಧಾನ್ಯಗಳನ್ನು ಕೊಂಡೊಯ್ಯುತ್ತಾರೆ. ಅಲ್ಲೇ ಅಡುಗೆ ಮಾಡಿ ಊಟ ಮಾಡಿ ನಿದ್ದೆ ಮಾಡುವುದರ ಜತೆಯಲ್ಲಿ ಬಲೆ ಬೀಸಿ ಮೀನು ಹಿಡಿಯುತ್ತಾರೆ. ಹಿಡಿದ ಮೀನುಗಳನ್ನು ಬೋಟಿನಲ್ಲೇ ಇರುವ ಶೀತಲೀಕರಣ ಯಂತ್ರ (Cold Storage) ದಲ್ಲಿ ಹಾಕುತ್ತಾರೆ. 8–10 ದಿನಗಳಲ್ಲಿ ಬಂದರಿಗೆ ವಾಪಸ್ಸು ಬಂದು ಮಾರಾಟಗಾರರ ಮೂಲಕ ಜನರ ಕೈ ಸೇರುತ್ತದೆ. ಇಂತಹ 2000 ಬೋಟುಗಳು ಮಲ್ಪೆಯ ಬಂದರಿನಲ್ಲಿವೆ. ಒಂದೊಂದು ಬೋಟ್‌ನಲ್ಲಿ 8 ರಿಂದ 10 ಜನ ಕೆಲಸ ಮಾಡುತ್ತಿದ್ದು ಒಟ್ಟು ಸುಮಾರು 16,000 ದಿಂದ 20,000 ಮೀನುಗಾರರು ಈ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ.

ಇವರಲ್ಲದೆ, ದಿನನಿತ್ಯ ಮೀನುಗಾರಿಕೆ ಮಾಡುವ ಬೋಟುಗಳೂ ಇವೆ.

**ಐಎನ್ಎಸ್ ಕೊಚ್ಚಿನ್ ಡಿಕ್ಕಿ?:**

ಡಿಸೆಂಬರ್ 13 ರಿಂದ ಸಂಪರ್ಕ ಕಳೆದು ಕೊಂಡಿರುವ ಸುವರ್ಣ ತ್ರಿಭುಜ ಬೋಟಿಗೆ ನೌಕಾ ಪಡೆಯ ಯುದ್ಧ ನೌಕೆ 'ಐಎನ್ಎಸ್ ಕೊಚ್ಚಿನ್' ಡಿಕ್ಕಿ ಹೊಡೆದಿದೆ ಎಂಬ ಅನುಮಾನ ಡಿಸೆಂಬರ್ ತಿಂಗಳಲ್ಲಿಯು ಇತ್ತು. ಆದರೆ ಕೇಂದ್ರ ಸರ್ಕಾರವಾಗಲೀ, ರಕ್ಷಣಾ ಸಚಿವಾಲಯವಾಗಲೀ ಈ ಸಂಶಯವನ್ನು ಅಲ್ಲಗಳೆಯಲೂ ಇಲ್ಲ ಅಥವಾ ಒಪ್ಪಿಕೊಳ್ಳಲೂ ಇಲ್ಲ. ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ಮಾರ್ಚ್ ತಿಂಗಳಲ್ಲಿ ಚುನಾವಣಾ ನಿಮಿತ್ತ ಉಡುಪಿಗೆ ಆಗಮಿಸಿದ್ದು ಮೀನುಗಾರರನ್ನು ಭೇಟಿಯಾಗಿದ್ದರು. ಆದರೆ ಯಾವುದೇ ಮಾಹಿತಿಯನ್ನು ನೀಡದೆ, ಶೋಧ ಕಾರ್ಯ ಮುಂದುವರಿದಿದೆ ಎಂದಷ್ಟೆ ಹೇಳಿಕೆ ನೀಡಿದ್ದರು.

ವಿವಿಧ ಸಂಘಟನೆಗಳಿಗೆ ಸೇರಿದ ಸುಮಾರು 10,000 ಕ್ಕೂ ಮಿಕ್ಕಿ ಮೀನುಗಾರರು ½ ದಿನ ರಾಷ್ಟ್ರೀಯ ಹೆದ್ದಾರಿ ತಡೆ ನಡೆಸಿ ಪ್ರತಿಭಟನೆಯನ್ನು ಸೂಚಿಸಿದರು. ವಿವಿಧ ಹಂತದ ಪ್ರತಿಭಟನೆಗಳನ್ನು ವಿವಿಧ ಸಂಘಟನೆಗಳು ನಡೆಸಿದ್ದವು.

**ಉಡುಪಿಯ ಬಿಜೆಪಿ ಶಾಸಕರಿಗೆ ಬೋಟಿನ ಅವಶೇಷಗಳು ಪತ್ತೆ:**

ಚುನಾವಣೆ ಮುಗಿದ ನಂತರ ಎಪ್ರಿಲ್ 27 ರಂದು ಉಡುಪಿಯ ಬಿಜೆಪಿ ಶಾಸಕ ರಘುಪತಿ ಭಟ ರವರು ಬೋಟು ಮೂಲಕ ಚಂದ್ರಶೇಖರ ಕೊಟ್ಯಾನ್ ಅವರ ಸಹೋದರ ಹಾಗೂ ಇನ್ನಿತರರೊಂದಿಗೆ ಬೋಟು ಪತ್ತೆಗಾಗಿ ಕರಾವಳಿ ಕಾವಲು ಪಡೆಯ ನೌಕೆಯಲ್ಲಿ ಪ್ರಯಾಣ ನಡೆಸಿದ್ದಾರೆ.

ಮೇ 3 ರಂದು ವಾಪಸು ಬಂದಿರುವ ರಘುಪತಿ ಭಟ್‌ರವರು ಪತ್ರಿಕಾ ಗೋಷ್ಠಿ ನಡೆಸಿ ಮಹಾರಾಷ್ಟ್ರ ಕರಾವಳಿಯ 35 ಕಿ.ಮೀ. ದೂರದಲ್ಲಿರುವ ಮಾನ್ವಾರ್ ಎಂಬಲ್ಲಿ ಸೋನಾರ್ ತಂತ್ರಜ್ಞಾನದ ಮೂಲಕ ಸುವರ್ಣ ತ್ರಿಭುಜ ಬೋಟಿನ ಅವಶೇಷಗಳು ಪತ್ತೆಯಾಗಿವೆ ಎಂದು ಹೇಳಿಕೆ ಕೊಟ್ಟಿದ್ದಾರೆ.

ಅಂದರೆ ಡಿಸೆಂಬರ್ 13 ರಿಂದ ನಾಪತ್ತೆಯಾಗಿದ್ದ ಬೋಟು ಸುಮಾರು 4 ತಿಂಗಳ ನಂತರ ಅದರ ಅವಶೇಷಗಳು ಕೇವಲ 3 ದಿನದ ಹುಡುಕಾಟದಲ್ಲಿ ಬಿಜೆಪಿ ಶಾಸಕರಿಗೆ ದೊರಕಿದ್ದು ಹೇಗೆ? ಖಿಸೆಂಬರ್ 13 ರ ಆಸುಪಾಸಿನಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿರುವ ನೌಕಾ ಪಡೆಯ ನೌಕೆ ಡಿಕ್ಕಿ ಹೊಡೆದಿದ್ದು ಅಥವಾ ಶತ್ರು ಕಡೆಯವರು ಎಂದು ಬಾವಿಸಿ ಧಾಳಿ ನಡೆಸಿರಬಹುದೆಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಇದು ಚುನಾವಣೆಗೆ ಸಾಕಷ್ಟು ಮೊದಲೇ ಕೇಂದ್ರ ಸರ್ಕಾರಕ್ಕೆ ತಿಳಿದಿತ್ತು. ಇದರಲ್ಲಿ 7 ಜನ ಮೀನುಗಾರರ ಪ್ರಶ್ನೆ ಅಡಗಿರುವುದರಿಂದ ಆ ಸಮುದಾಯ ಹೆಚ್ಚಾಗಿ ಬಿಜೆಪಿ ಬೆಂಬಲಿಗರಾಗಿರುವುದರಿಂದ ಚುನಾವಣೆಯಲ್ಲಿ ತಮಗೆ ಧಕ್ಕೆ ಆಗುತ್ತದೆ ಎಂಬ ಭಾವನೆಯಿಂದ ಕೇಂದ್ರ ಸರ್ಕಾರ ಅದನ್ನು ಬಹಿರಂಗ ಪಡಿಸದೆ ದ್ರೋಹ ಬಗೆದಿದೆ. ಉಡುಪಿಯ ಮಾಜಿ ಸಚಿವ ಪ್ರಮೋದ ಮಧ್ವರಾಜ್‌ರವರು ಚುನಾವಣೆಗೆ ಮೊದಲೇ ಈ ಸಂಶಯವನ್ನು ವ್ಯಕ್ತ ಪಡಿಸಿದ್ದಾರೆ.

ಈ ಎಲ್ಲಾ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕೆಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಆಗ್ರಹಿಸಿದೆ. ಅದೇ ಸಂದರ್ಭದಲ್ಲಿ ಕಾಣೆಯಾದ ಮೀನುಗಾರರ ಕುಟುಂಬಕ್ಕೆ ಗರಿಷ್ಠ ಪರಿಹಾರ ನೀಡಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ. ●

# ಫೇಸ್‌ಬುಕ್‌ನಲ್ಲಿ ಸರಕಾರಿ ಶಿಕ್ಷಕನ ರಾಜಕೀಯ ಸೇವೆಯಿಂದ ವಜಾಗೊಳಿಸಲು – ಎಸ್‌ಎಫ್‌ಐ ಆಗ್ರಹ

ಲಿಂಗಸ್ಗೂರು ತಾಲೂಕಿನ ನಿಲೋಗಲ್ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕನೋರ್ವ ಸಾಮಾಜಿಕ ಜಾಲತಾಣದಲ್ಲಿ ಸರ್ಕಾರವನ್ನು ನಿಂದಿಸುವ ಹಾಗೂ ಹಿಂದುತ್ವ ಪ್ರತಿಪಾದಿಸುವ, ಕೋಮುದ್ವೇಷ ಬಿತ್ತುವ ಪೋಸ್ಟರ್‌ಗಳನ್ನು ಹಾಕುತ್ತಿದ್ದು, ಕೂಡಲೇ ಈ ಸಂವಿಧಾನ ಶಿಕ್ಷಕನನ್ನು ಸೇವೆಯಿಂದ ವಜಾಗೊಳಿಸಬೇಕೆಂದು ಎಂದು ಎಸ್‌ಎಫ್‌ಐ ಜಿಲ್ಲಾ ಸಮಿತಿ ಆಗ್ರಹಿಸುತ್ತದೆ.

ನಿಲೋಗಲ್ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ರವಿ ಗುರಪ್ಪ ಬೀಳಗಿ ಇವರು ಕನ್ನಡ ವಿಷಯವನ್ನು ಬೋಧಿಸುತ್ತಾರೆ. ಈ ಭಾರಿಯ ಶಾಲೆಯ ಕಳಪೆ ಫಲಿತಾಂಶಕ್ಕೆ ಇವರು ಕಾರಣೀಭೂತರಾಗಿರುತ್ತಾರೆ. ಅಲ್ಲದೆ ಇವರು ಬೋಧಿಸುವ ಮಾತೃಭಾಷೆ ಕನ್ನಡ ವಿಷಯದಲ್ಲಿಯೂ ಕೂಡ ಸುಮಾರು 5ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನುತೀರ್ಣ ಆಗಿರುವುದು ಇವರ ಕರ್ತವ್ಯ ನಿರ್ಲಕ್ಷ್ಯತೆಯನ್ನು ಎದ್ದು ತೋರಿಸುತ್ತದೆ. ಈ ಎಲ್ಲಾ ಅಂಶಗಳು ಗಮನಿಸಬೇಕಾದ ವಿಷಯವಾಗಿದೆ.

ರವಿ ಬೀಳಗಿ ಇವರು ಸರಕಾರದ ವೇತನವನ್ನು ಪಡೆದು ಮಕ್ಕಳಿಗೆ ಪಾಠವನ್ನು ಮಾಡುವದನ್ನು ಬಿಟ್ಟು ಸರ್ಕಾರದ ವಿರುದ್ಧವೇ ಕರ್ತವ್ಯದ ಸಮಯದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಕಾಲಹರಣ ಮಾಡುತ್ತಾ ಕರ್ತವ್ಯ ಲೋಪವೆಸಗಿರುತ್ತಾರೆ. ರಾಜಕೀಯ ಮತ್ತು ಒಂದು ಧರ್ಮಕ್ಕೆ ಸಂಬಂಧಿಸಿದ ಹಾಗೂ ಇನ್ನೊಂದು ಧರ್ಮವನ್ನು ನಿಂದಿಸುವ ನಿಟ್ಟಿನಲ್ಲಿ ಅನೇಕ ವಿಷಯ ಮತ್ತು ಪೋಸ್ಟರ್ ಗಳನ್ನು ದಿನನಿತ್ಯವು ಸಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಾ ತಾನು ಸರ್ಕಾರ ನೌಕರನೆಂಬುದನ್ನು ಮರೆತು ಒಂದು ಪಕ್ಷದ ಕಾರ್ಯಕರ್ತನಂತೆ ನಡೆದುಕೊಳ್ಳಯತ್ತಿದ್ದಾರೆ. ಅಲ್ಲದೆ ಪಾಠಗಳನ್ನು ಬೋಧಿಸುವ ಸಮಯದಲ್ಲೂ ವಿದ್ಯಾರ್ಥಿಗಳಿಗೆ ಒಂದು ಧರ್ಮ ಮತ್ತು ಪಕ್ಷಕ್ಕೆ ಸಂಬಂಧಿಸಿದ ವಿಚಾರಗಳನ್ನು ಹೆಚ್ಚಾಗಿ ಬೋಧನೆ ಮಾಡುತ್ತಾ ವಿದ್ಯಾರ್ಥಿಗಳ ಮಧ್ಯೆ ವಿಷಬೀಜ ಬಿತ್ತಿ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯವನ್ನು ಹಾಳು ಮಾಡುವಂತ ಪ್ರಯತ್ನ ನಿರಂತರವಾಗಿ ಮಾಡುತ್ತಿದ್ದಾರೆ. ಆದ್ದರಿಂದ ಮತೀಯವಾದಿ ಮತ್ತು ಅದಕ್ಷ ಹಾಗೂ ಕರ್ತವ್ಯಭ್ರಷ್ಟ ಇಂತ ಶಿಕ್ಷಕ ರವಿ ಗುರಪ್ಪ ಬೀಳಗಿ ಇವರ ಮೇಲೆ ಸರ್ಕಾರಿ ನೌಕರರರ ದುರ್ನಡತೆ ಹಾಗೂ ನಿಯಮಾವಳಿ ಗಳ ಉಲಂಘನೆಗೆ ಸಂಬಂಧಿಸಿದ ಕಾನೂನಿನ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಈ ಕೂಡಲೇ ಇವರನ್ನು ಕರ್ತವ್ಯದಿಂದ ವಜಾಗೊಳಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತ ಭವಿಷ್ಯಕ್ಕೆ ಅನುಕೂಲ ಮಾಡಿಕೊಡಬೇಕೇಂದು ಈ ಮೂಲಕ ತಿಳಿಸುತ್ತೇವೆ. ಒಂದು ವೇಳೆ ಇವರ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವಲ್ಲಿ ನಿರ್ಲಕ್ಷ್ಯ ವಹಿಸಿದ್ದಲ್ಲಿ ಎಸ್‌ಎಫ್‌ಐ ರಾಯಚೂರು ಜಿಲ್ಲಾ ಸಮಿತಿ ಎಚ್ಚರಿಸುತ್ತದೆ.




ತಾಲೂಕಾಧ್ಯಕ್ಷ ರಮೇಶ್ ವೀರಾಪೂರು, ಜಿಲ್ಲಾಧ್ಯಕ್ಷ ಶಿವಕುಮಾರ್ ಮ್ಯಾಗಳಮನಿ ಲಿಂಗರಾಜ್ ಕಂದಗಲ್, ಭೀಮನಗೌಡ ಸುಂಕೇಶ್ವರಾಳ, ಮಲ್ಲಿಕಾರ್ಜುನ್ ಕಡೇಚೂರು, ಲಿಂಗಣ್ಣ ಮಕಾಶಿ ಆಗ್ರಹಿಸಿದ್ದಾರೆ. ●




ಪ್ರೊ. ರಾಜೇಂದ್ರ ಚೆನ್ನಿ

# ಪ್ರಜಾಪ್ರಭುತ್ವದ ಸಂಕಷ್ಟದ ಕಾಲದಲ್ಲಿ ಬಾಬಾಸಾಹೇಬರನ್ನು ನೆನೆಯುತ್ತಾ...

**ವಸಾಹತುಶಾಹಿಯಿಂದ ಸೀಮಿತವಾದರೂ ಸರಿ, ಅನೇಕ ಸಾಮಾಜಿಕ ಬದಲಾವಣೆಗಳು ಆರಂಭವಾಗಿದ್ದವು. ಬಹುಬೇಗನೇ ಸ್ವಾಯತ್ತತೆ ಹಾಗೂ ಸ್ವಾತಂತ್ರ್ಯಕ್ಕಾಗಿ ಹೋರಾಟಗಳು ಶುರುವಾದ ಮೇಲೆ ಅಸಂಖ್ಯಾತವಾದ ಪ್ರಯತ್ನಗಳ ಮೂಲಕ ಪ್ರಜಾಪ್ರಭುತ್ವ, ಸಮಾನತೆಗಳ ಒಲವುಗಳನ್ನು ಸಮಾಜದಲ್ಲಿ ಬಿತ್ತುವ ಪ್ರಯತ್ನಗಳು ಆರಂಭವಾದವು. ಇದು ಅತ್ಯಂತ ವಿಶಾಲವಾದ ಹಾಗೂ ಸಂಕೀರ್ಣವಾದ ವಿದ್ಯಮಾನವಾಗಿತ್ತು. ಆದರೆ ಬೆಳೆಯುತ್ತಿರುವ ಈ ಒಲವುಗಳನ್ನು ಗಮನಿಸಿದ ಸಂಪ್ರದಾಯದ ಶಕ್ತಿಗಳು ಪ್ರಜಾಪ್ರಭುತ್ವ–ವಿರೋಧಿ ಚಿಂತನೆಗಳನ್ನು, ಸಂಸ್ಥೆಗಳನ್ನು ಬೆಳೆಸತೊಡಗಿದವು. ಹಿಂದೂ ಮಹಾಸಭಾ ಮತ್ತು ಆರ್.ಎಸ್.ಎಸ್. ಇವುಗಳಲ್ಲಿ ಪ್ರಮುಖವಾಗಿದ್ದವು. ಇವುಗಳು ಮೂಲತಃ ಅಸಮಾನತೆಗಳನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿದ್ದವು.. .. .. ಹೇಗೆ ಪ್ರಜಾಪ್ರಭುತ್ವವನ್ನು ಕಟ್ಟುವುದು ಸುದೀರ್ಘವಾದ, ಬಹುಮುಖಿ ಪ್ರಯತ್ನಗಳ, ಏಳುಬೀಳುಗಳ ಸಮಾಜದ ಹಲವಾರು ವರ್ಗಗಳ ಶ್ರಮದಿಂದ ಸಾಧ್ಯವಾಗುತ್ತದೆಯೋ, ಹಾಗೆಯೆ ಅದರ ಅವನತಿಯೂ ಕ್ರಮೇಣವಾಗಿ ಅನೇಕ ಸಂಕೀರ್ಣ ಸಂಗತಿಗಳಿಂದಾಗಿ ನಡೆಯುತ್ತದೆ.**

ಭಾರತದ ಪ್ರಜಾಪ್ರಭುತ್ವವು ತೀವ್ರವಾದ ಸಂಕಷ್ಟದಲ್ಲಿದೆಯೆನ್ನುವುದರ ಬಗ್ಗೆ ಈಗ ಯಾವ ಪ್ರಜ್ಞಾವಂತರಿಗೂ ಸಂಶಯವಿಲ್ಲ. ಇದನ್ನು ಲೋಕಸಭಾ ಚುನಾವಣೆ ಅಥವಾ ಪಕ್ಷ ರಾಜಕಾರಣದ ಹಿನ್ನೆಲೆಯಲ್ಲಿ ಹೇಳುತ್ತಿಲ್ಲ. ಏಕೆಂದರೆ ಯಾವುದೇ ಪ್ರಜಾಪ್ರಭುತ್ವವು ಹಾಗೆ ರಾತ್ರೋರಾತ್ರಿ ಸಂಕಷ್ಟದಲ್ಲಿ ಬೀಳುವುದಿಲ್ಲ. ಹೇಗೆ ಪ್ರಜಾಪ್ರಭುತ್ವವನ್ನು ಕಟ್ಟುವುದು ಸುದೀರ್ಘವಾದ, ಬಹುಮುಖಿ ಪ್ರಯತ್ನಗಳ, ಏಳುಬೀಳುಗಳ ಸಮಾಜದ ಹಲವಾರು ವರ್ಗಗಳ ಶ್ರಮದಿಂದ ಸಾಧ್ಯವಾಗುತ್ತದೆಯೋ, ಹಾಗೆಯೆ ಅದರ ಅವನತಿಯೂ ಕ್ರಮೇಣವಾಗಿ ಅನೇಕ ಸಂಕೀರ್ಣ ಸಂಗತಿಗಳಿಂದಾಗಿ ನಡೆಯುತ್ತದೆ.


ನಾವು ನೋಡುತ್ತಿರುವ ಇಂದಿನ ಪರಿಸ್ಥಿತಿಗೂ ಒಂದು ಚರಿತ್ರೆಯೇ ಇದೆ. ಅದೇನೆಂದರೆ ಬುದ್ಧನ ಸಂಘದಲ್ಲಿ ಮತ್ತು ಈ ದೇಶದ ಅಸಂಖ್ಯ ಬುಡಕಟ್ಟುಗಳಲ್ಲಿ (ಇವು ಬುದ್ಧನಿಗೆ ಮಾದರಿಯೂ ಆಗಿದ್ದವು) ಮಾತ್ರ ಪ್ರಜಾಪ್ರಭುತ್ವದ ಮೂಲರಚನೆಯನ್ನು ನಮ್ಮ ಇತಿಹಾಸದಲ್ಲಿ ಕಾಣಬಹುದಾಗಿದೆ. ಇದನ್ನು ಹೊರತುಪಡಿಸಿದರೆ ಅಲ್ಲಲ್ಲಿ ಉದಾರವಾದಿ ಚಿಂತನೆಯ ಕೆಲವು ದೊರೆಗಳು, ಆಡಳಿತಗಾರರು ಪ್ರಜಾಪ್ರಭುತ್ವವಾದಿ ರೀತಿಯಲ್ಲಿ ನಡೆದುಕೊಂಡ ಉದಾಹರಣೆಗಳಿವೆಯಷ್ಟೆ. ಇವುಗಳು ಜಥಭಿಜಠಿಣುಠಿಟಿ ಗಳು ಮಾತ್ರ. ಇಲ್ಲದಿದ್ದರೆ ಭಾರತೀಯ ಸಮಾಜದ ಮೂಲರಚನೆಯು ಅಸಮಾನತೆ, ಶ್ರೇಣೀಕರಣ ಹಾಗೂ ಹಿಂಸೆಯನ್ನು ಅವಲಂಬಿಸಿದೆ. ವರ್ಣವ್ಯವಸ್ಥೆ, ಜಾತಿವ್ಯವಸ್ಥೆ ಹಾಗೂ ಅಸ್ಪೃಶ್ಯತೆಯಿದ್ದ ಸಮಾಜವು ಪ್ರಜಾಪ್ರಭುತ್ವದ ಯಾವುದೇ ಮೌಲ್ಯಗಳನ್ನು ಹೊಂದಿತ್ತು ಎನ್ನುವುದು ಹಾಸ್ಯಾಸ್ಪದ. ನಾವೆಲ್ಲಾ ಕೊಂಡಾಡುವ ಬಹುಮುಖತೆ, ಸಹಿಷ್ಣುತೆ ಇವುಗಳೆಲ್ಲ ಕೇವಲ ಭ್ರಮೆಗಳೇ? ಖಂಡಿತ ಅಲ್ಲ. ಧರ್ಮ ಹಾಗೂ ನಡವಳಿಕೆಗಳ ಸೀಮಿತವಾದ ವಲಯದಲ್ಲಿ ಪರಸ್ಪರ ಸಹಿಷ್ಣುತೆ ಇತ್ತು. ಆದರೆ ಇದು ಬಹುಪಾಲು ಕೆಳವರ್ಗಗಳಲ್ಲಿ ಇತ್ತು ಮತ್ತು ಇದರಿಂದಾಗಿ ಸಮಾಜದ ಮೂಲರಚನೆಗಳು ಅಂದರೆ ಆರ್ಥಿಕ ಹಾಗೂ ಉತ್ಪಾದನಾ ಸಂಬಂಧಗಳು ಬದಲಾಗಲಿಲ್ಲ. ಹೀಗಾಗಿಯೇ ಭಕ್ತಿ ಪರಂಪರೆಗಳು ಅಲ್ಪಾಯುಶಿಗಳಾಗಿದ್ದವು. ಅಥವಾ ಬಹುಬೇಗ ಪ್ರಭುತ್ವ ಹಾಗೂ ಪುರೋಹಿತಶಾಹಿಗಳ ಕಬಂಧಬಾಹುಗಳಲ್ಲಿ ಸಿಕ್ಕುಹೋದವು. ಒಂದು ನಾಗರೀಕತೆಯು ಜಾತಿ ವ್ಯವಸ್ಥೆಯನ್ನು ಪಾಲಿಸುತ್ತದೆಯೆಂದರೆ ಅದು ಎಂದೂ ಸಮಾನತೆ ಹಾಗೂ ಪ್ರಜಾಪ್ರಭುತ್ವವನ್ನು ಒಪ್ಪುವುದಿಲ್ಲವೆಂದೇ ಅರ್ಥ. ಆದ್ದರಿಂದಲೇ ನಾನು ಬಾಬಾ ಸಾಹೇಬರ ಹಿಂದೂ/ಭಾರತೀಯ ಸಮಾಜದ ವ್ಯಾಖ್ಯಾನವನ್ನು ಒಪ್ಪಿಕೊಳ್ಳುತ್ತೇನೆ.

ಬಾಬಾ ಸಾಹೇಬರ ಪ್ರಬಲವಾದ ತರ್ಕವನ್ನು ಇತ್ತೀಚೆಗೆ ದಲಿತರು ಕೂಡ ಮರೆಮಾಡುತ್ತಿದ್ದಾರೆ. ತಮ್ಮ 'ಮೂಕನಾಯಕ' ಪತ್ರಿಕೆಯಲ್ಲಿ ಈ ಸಮಾಜವನ್ನು "ಬಹುಮಹಡಿಗಳಿರುವ ಆದರೆ ಮೆಟ್ಟಿಲುಗಳೇ ಇಲ್ಲದ ಗೋಪುರವೆಂದು" ಅದ್ಭುತವಾದ ರೂಪಕದಲ್ಲಿ ವಿವರಿಸಿದ ಬಾಬಾ ಸಾಹೇಬರು ಈ ವ್ಯಾಖ್ಯಾನವನ್ನು ಬಿಟ್ಟುಕೊಡಲಿಲ್ಲವೆಂದು ನನ್ನ ಭಾವನೆ. ಇದೊಂದು closed society. ಇದರಲ್ಲಿ ಬದಲಾವಣೆಗಳು ಸಾಧ್ಯವೇ ಇಲ್ಲ. ಹಾಗಿದ್ದರೆ ನಿರಂತರವಾಗಿ ದಲಿತರ ಹಕ್ಕುಗಳಿಗಾಗಿ ಸಂರಕ್ಷಣೆಗಾಗಿ ಬಾಬಾಸಾಹೇಬರು ಹೋರಾಡಿದ್ದು ಯಾವುದರ ಅಧಾರದ ಮೇಲೆ. ಪಶ್ಚಿಮದ ಪ್ರಜಾಪ್ರಭುತ್ವವನ್ನು ವಸಾಹತುಶಾಹಿಯ ಮೂಲಕ ಅಳವಡಿಸಬಹುದೇ ಎನ್ನುವ ಪ್ರಯತ್ನವು ಅದಾಗಿತ್ತೇ? ಕೋಲಂಬಿಯಾ ವಿಶ್ವವಿದ್ಯಾಲಯದಲ್ಲಿ ಅವರ ಗುರುಗಳಾಗಿದ್ದ John Dewy ಪ್ರಕಾಂಡ ರಾಜಕೀಯ ಚಿಂತಕರಾಗಿದ್ದರು. ಮನುಷ್ಯನ ವಿವೇಕದಲ್ಲಿ, ವೈಚಾರಿಕತೆಯಲ್ಲಿ (reason)ನಲ್ಲಿ ನಂಬಿಕೆ ಇದ್ದ ಅವರು, ಮನುಷ್ಯರು ಪ್ರಜಾಪ್ರಭುತ್ವದಲ್ಲಿ ವೈಚಾರಿಕವಾದ ಅಭಿಪ್ರಾಯ ಹಾಗೂ ಆಯ್ಕೆಗಳನ್ನು ಮಾಡಬಲ್ಲರು ಎಂದು ನಂಬಿದ್ದರು. ಆದ್ದರಿಂದಲೇ ಶಿಕ್ಷಣದ ಬಗ್ಗೆ ಅಪಾರವಾದ ಶ್ರದ್ಧೆ ಹೊಂದಿದ್ದರು. ಇವು ಬಾಬಾಸಾಹೇಬರ ಚಿಂತನೆಯ ಮೂಲ ಆಧಾರಗಳೂ ಆದವು.

ಸಮಸ್ಯೆಯೆಂದರೆ ಯುರೋಪು ಹಾಗೂ ಅಮೇರಿಕದ ಚಾರಿತ್ರಿಕ ಬೆಳವಣಿಗೆಗಳೇ ಭಿನ್ನವಾಗಿದ್ದವು. ಅಸಮಾನತೆ, ಅಂಧಶ್ರದ್ಧೆ ಹಾಗೂ ಜನಾಂಗೀಯವಾದಗಳು ಪ್ರಬಲವಾಗಿದ್ದರೂ ಕ್ರಮೇಣವಾಗಿ ಪ್ರಜಾಪ್ರಭುತ್ವವಾದದ ಕಡೆಗೆ ಆ ಸಮಾಜಗಳು ಮುಖ ಮಾಡಿದವು. ಇಂದು ಯೂರೋಪಿನ ವಿದ್ವಾಂಸರು ಆಧುನಿಕತೆ, ವಿಚಾರವಾದಗಳನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಅವರಿಗೆ reason ಅನ್ನು ನಂಬಿದ್ದ ಜ್ಞಾನಪರ್ವವೆನ್ನುವ ಚಳುವಳಿಯೇ ಇಂದು ಎಲ್ಲಾ ಕೆಡುಕಿನ ಮೂಲವಾಗಿ ಕಾಣುತ್ತಿದೆ. ಅವರನ್ನು ಅನುಕರಿಸುತ್ತಾ ನಮ್ಮ ವಿಶ್ವವಿದ್ಯಾನಿಲಯದ ವಿದ್ವಾಂಸರೂ ಅದನ್ನೆ ಹೇಳುತ್ತಿದ್ದಾರೆ. ಆದರೆ ಜಾತೀಯತೆ, ಅಸ್ಪೃಶ್ಯತೆಯೇ ಮೂಲ ಲಕ್ಷಣಗಳಾದ ಭಾರತೀಯ ಸಮಾಜದಲ್ಲಿ ಆಧುನಿಕತೆ ಹಾಗೂ ವೈಚಾರಿಕತೆಗಳು ಮಹಾನ್ ಕೊಡುಗೆಗಳೇ ಆಗಿದ್ದವು. ಏಕೆಂದರೆ ಇದು ನಮಗೆ ಕೇವಲ ಯೂರೋಪು ಕೇಂದ್ರಿತ ಚಿಂತನೆಯಾಗಿರಲಿಲ್ಲ. ನಮ್ಮ ಭಕ್ತಿಪಂಥದ ಅನೇಕ ಸಂತರು, ವೈಚಾರಿಕರು ಬಹಳ ಹಿಂದಿನಿಂದಲೇ ನಮ್ಮ ಸಮಾಜದ ಅಸಮಾನತೆ ಹಾಗೂ ಮೌಢ್ಯಗಳನ್ನು ವೈಚಾರಿಕತೆಯಿಂದಲೇ ವಿರೋಧಿಸಿದ್ದರು. ಇದು ಮಾತ್ರವಲ್ಲ. ವಸಾಹತುಶಾಹಿಯಿಂದ ಸೀಮಿತವಾದರೂ ಸರಿ, ಅನೇಕ ಸಾಮಾಜಿಕ ಬದಲಾವಣೆಗಳು ಆರಂಭವಾಗಿದ್ದವು. ಬಹುಬೇಗನೇ ಸ್ವಾಯತ್ತತೆ ಹಾಗೂ ಸ್ವಾತಂತ್ರ್ಯಕ್ಕಾಗಿ ಹೋರಾಟಗಳು ಶುರುವಾದ ಮೇಲೆ ಅಸಂಖ್ಯಾತವಾದ ಪ್ರಯತ್ನಗಳ ಮೂಲಕ ಪ್ರಜಾಪ್ರಭುತ್ವ, ಸಮಾನತೆಗಳ ಒಲವುಗಳನ್ನು ಸಮಾಜದಲ್ಲಿ ಬಿತ್ತುವ ಪ್ರಯತ್ನಗಳು ಆರಂಭವಾದವು. ಇದು ಅತ್ಯಂತ ವಿಶಾಲವಾದ ಹಾಗೂ ಸಂಕೀರ್ಣವಾದ ವಿದ್ಯಮಾನವಾಗಿತ್ತು. ಆದರೆ ಬೆಳೆಯುತ್ತಿರುವ ಈ ಒಲವುಗಳನ್ನು ಗಮನಿಸಿದ ಸಂಪ್ರದಾಯದ ಶಕ್ತಿಗಳು ಪ್ರಜಾಪ್ರಭುತ್ವ–ವಿರೋಧಿ ಚಿಂತನೆಗಳನ್ನು, ಸಂಸ್ಥೆಗಳನ್ನು ಬೆಳೆಸತೊಡಗಿದವು. ಹಿಂದೂ ಮಹಾಸಭಾ ಮತ್ತು ಆರ್.ಎಸ್.ಎಸ್. ಇವುಗಳಲ್ಲಿ ಪ್ರಮುಖವಾಗಿದ್ದವು. ಇವುಗಳು ಮೂಲತಃ ಅಸಮಾನತೆಗಳನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿದ್ದವು. ಸ್ವಾತಂತ್ರ್ಯದ ನಂತರ ನಮ್ಮಲ್ಲಿ ಅನುಷ್ಠಾನಕ್ಕೆ ಬಂದ ಪ್ರಜಾಪ್ರಭುತ್ವವಾದ ವ್ಯವಸ್ಥೆಯು ಸಮರ್ಪಕವಾಗಿತ್ತು ಎಂದು ಯಾವ ದಡ್ಡನೂ ಹೇಳಲಾರ. ಆದರೆ ಅದರ ತಳಪಾಯಗಳು ಉಳಿದುಕೊಂಡು ಬಂದವು. ಇಷ್ಟಾದರೂ ಬಾಬಾಸಾಹೇಬರು ತಮ್ಮ ವೃತ್ತಿಯ ಕೊನೆಯ ಕೆಲವು ಭಾಷಣಗಳಲ್ಲಿ ಪ್ರಜಾಪ್ರಭುತ್ವವಾದಿ ಸಂಸ್ಕೃತಿಯು ಇಲ್ಲದಿರುವುದನ್ನು ಖಚಿತವಾಗಿ ಚರ್ಚಿಸಿದ್ದರು. ಆ ಭಾಷಣಗಳಲ್ಲಿ ಅವರು ಪ್ರತಿಪಾದಿಸುತ್ತಿರುವುದು ಅಹಿಂಸೆಯ ಮೂಲಕ ಸಾಮಾಜಿಕ ಬದಲಾವಣೆ, ಪ್ರಾಮಾಣಿಕವಾಗಿ ಸಮಾನತೆ, ಸಹೋದರತ್ವವನ್ನು ನಂಬುವುದು ಹಾಗೂ ಸಾಮುದಾಯಿಕವಾಗಿ, ವೈಚಾರಿಕವಾಗಿ ಸಮರ್ಪಕವಾದ ಆಯ್ಕೆಗಳನ್ನು ಮಾಡುವುದು – ಇವೇ ಮುಂತಾದ ಮೌಲ್ಯಗಳನ್ನು ಅವರು ಪ್ರಜಾಪ್ರಭುತ್ವವಾದಿ ಸಂಸ್ಕೃತಿಯ ಲಕ್ಷಣಗಳೆಂದು ಕರೆದಿದ್ದರು. ಇದೇ ಹೊತ್ತಿಗೆ ಆರ್ಥಿಕ ಸಮಾನತೆ ಇಲ್ಲದೆ ರಾಜಕೀಯ ಸಮಾನತೆಯಿರುವುದು ಅಸಾಧ್ಯವೆಂದು ಹೇಳಿದ್ದರು.

ಇಂದಿನ ಸಂಕಷ್ಟದ ಕಾಲದಲ್ಲಿ ಕಾಣುತ್ತಿರುವುದೆಂದರೆ ವಸಾಹತುಶಾಹಿಯ ಪ್ರವೇಶದಿಂದ ಶುರುವಾಗಿ ಸ್ವಾತಂತ್ರ್ಯ ನಂತರದ ಕೆಲವು ಕಾಲ ಕೊನೇ ಪಕ್ಷ ಒಂದು ಹಂದರವಾಗಿ ಉಳಿದಿದ್ದ ಪ್ರಜಾಪ್ರಭುತ್ವವು ಪ್ರಬಲವಾದ ಆಕ್ರಮಣಕ್ಕೆ ಗುರಿಯಾಗುತ್ತಿದೆ. ಅಲ್ಲದೆ ಭಾರತೀಯ ನಾಗರೀಕತೆಯ ಶಾಪಗಳಂತಿರುವ ಅಸಮಾನತೆಗಳು ಮತ್ತೆ ಗಟ್ಟಿಗೊಳ್ಳುತ್ತಿವೆ. ಒಂದು ಕಡೆ ಇದು ಅಲ್ಪಸಂಖ್ಯಾತರ ಮೇಲಿನ ದ್ವೇಷದ ರೂಪದಲ್ಲಿ ಕಂಡುಬರುತ್ತಿದೆ. ಮೋದಿಯವರು ಮತ್ತೆ ಪ್ರಧಾನಿಯಾದರೆ ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡುವುದು ಖಚಿತವೆಂದು ಅವರ ಹಿಂಬಾಲಕರು ನಂಬಿದ್ದಾರೆ. ಇತ್ತೀಚಿನ ಚುನಾವಣಾ ಭಾಷಣದಲ್ಲಿ ಅವರು ನೇರವಾಗಿ "ನನಗಿಂತ ಪ್ರಬಲರಾದವರು ಯಾರಿದ್ದಾರೆ" ಎಂದು ಹೇಳಿದ್ದಾರೆ. ನೆಪಮಾತ್ರಕ್ಕೂ ಪಕ್ಷದ ಇತರ ನಾಯಕರ ಹೆಸರನ್ನು ಪ್ರಸ್ತಾಪ ಮಾಡುತ್ತಿಲ್ಲ. ಚುನಾವಣಾ ಆಯೋಗದ ಮಾರ್ಗದರ್ಶನವನ್ನು ಮೀರಿ ಧರ್ಮ ಹಾಗೂ ಸೈನ್ಯದ ಹೆಸರಿನಲ್ಲಿ ಪ್ರಚೋದಕವಾಗಿ ಮಾತನಾಡಿದ್ದಾರೆ. ಇದೆಲ್ಲಕ್ಕಿಂತ ಭೀಕರವೆಂದರೆ ಅಣ್ವಸ್ತ್ರಗಳನ್ನು ದೀಪಾವಳಿ ಪಟಾಕಿಗಳು ಎನ್ನುವಂತೆ ಅಂದರೆ ಭಾರತವು ಯಾವ ಎಗ್ಗಿಲ್ಲದೆ ಅವುಗಳನ್ನು ಪ್ರಯೋಗಿಸಬಲ್ಲದು ಎನ್ನುವ ಹಾಗೆ ಮಾತನಾಡಿದ್ದಾರೆ. ಈ ಮಾತುಗಳ ಹಿಂದಿನ ಅಸೂಕ್ಷ್ಮತೆಯೂ ಅಪ್ರಬುದ್ಧತೆಯೂ ಆಘಾತಕಾರಿಯಾಗಿದೆ. ಅಣ್ವಸ್ತ್ರಗಳ ಬಗ್ಗೆ ಹಗುರವಾಗಿ ಮಾತನಾಡುವವರು "Black Rain" ಎನ್ನುವ ಕೃತಿಯನ್ನು ಓದಬೇಕು. ಹಿರೋಶಿಮ ನಾಗಸಾಕಿ ನಗರಗಳ ಮೇಲೆ ಬಾಂಬ್ ಸ್ಫೋಟವಾದ ಮೇಲೆ ಅಲ್ಲಿ ನಡೆದ ಅನಾಹುತಗಳ ವರ್ಣನೆಯನ್ನು ಓದಿದರೆ ಅಣುಶಕ್ತಿಯೇ ಬೇಡವೆನ್ನಿಸುತ್ತದೆ. ಆದರೆ ನಮ್ಮ ರಾಜಕಾರಣಿಗಳು ಮಾತ್ರ ಅಸಂಖ್ಯಾತ ಮನುಷ್ಯರು ಜೀವಂತ ನರಕದಲ್ಲಿ ಬೆಂದುಹೋಗಿದ್ದು ಗೊತ್ತಿದ್ದೂ ಇಷ್ಟು ಹಗುರವಾಗಿ ಮಾತನಾಡುತ್ತಾರೆ.

ಈ ವರ್ಷದ ಜ್ಞಾನಪೀಠ ಪ್ರಶಸ್ತಿ ವಿಜೇತ ಅಮಿತಾವ್ ಘೋಷ್ ಅವರು ಭಾರತವು ಪೋಖ್ರಾನ್ ನಲ್ಲಿ ನಡೆಸಿದ ಅಣ್ವಸ್ತ್ರ ಪ್ರಯೋಗದ ಬಗ್ಗೆ "Count Down" ಎನ್ನುವ ಪುಸ್ತಕವನ್ನು ಬರೆದಿದ್ದಾರೆ. ಆಗ ಅಧಿಕಾರದಲ್ಲಿದ್ದ ಬಿ.ಜೆ.ಪಿ ಯ ಹಲವು ಹಿಂಬಾಲಕರು ಆ ಪ್ರಯೋಗ ನಡೆದ ಸ್ಥಳದಿಂದ ಮರಳನ್ನು ಪ್ರಸಾದವೆನ್ನುವಂತೆ ದೇಶದಲ್ಲಿ ಎಲ್ಲಾ ಕಡೆಗೂ ಹಂಚಬೇಕು ಎಂದು ಆಗ್ರಹಿಸಿದ್ದರು! ಅಲ್ಲದೆ ಅದನ್ನು "ಹಿಂದೂ ಬಾಂಬ್" ಎಂದು ಕರೆದು ಅದು ಪುರುಷತ್ವದ ಸಂಕೇತವೆನ್ನುವ ಹಾಗೆ ಕೊಂಡಾಡಿದ್ದರು. ಅದಾದ ಕೆಲವೇ ದಿನಗಳಲ್ಲಿ ನಮ್ಮ ನೆರೆರಾಷ್ಟ್ರವು ತನ್ನ ಅಣ್ವಸ್ತ್ರ ಕ್ಷಮತೆಯನ್ನು ತೋರಿಸಿತು. ಇಂಥ ಮರುಳರು ಹಾಗೂ ದುರುಳರು ತಮ್ಮ ಕೈಯಲ್ಲಿ ಅಣ್ವಸ್ತ್ರದ ಸ್ವಿಚ್ ಇದೆ ಎನ್ನುವುದು (ಅಮೇರಿಕಾ ಹಾಗೂ ಕೋರಿಯಾದ ಅಧ್ಯಕ್ಷರು ಹೀಗೆ ಹೇಳಿದ್ದರು) ಮನುಷ್ಯಕುಲದ ಅಂತ್ಯವು ದೂರವಿಲ್ಲವೆನ್ನುವುದರ ಸೂಚನೆಯಾಗಿದೆ. ಪ್ರಜಾಪ್ರಭುತ್ವವಾದಿ ದೇಶವು ಮಿಲಿಟರಿಸ್ಟ್ ದೇಶವಾಗಲು ಸಾಧ್ಯವಿಲ್ಲ. ಆದ್ದರಿಂದಲೇ ಈಗ ನಡೆಯುತ್ತಿರುವ ಪ್ರಯತ್ನವೆಂದರೆ ಒಬ್ಬ ಸರ್ವಾಧಿಕಾರಿಯನ್ನು ಅಧಿಕಾರಕ್ಕೆ ತರುವುದು. ಸರ್ವಾಧಿಕಾರಿ ರಾಷ್ಟ್ರವು ಮಿಲಿಟರಿಸ್ಟ್ ರಾಷ್ಟ್ರವಾಗಿರುವುದು ಅನಿವಾರ್ಯ. ಈಗ ನಾವು ದೇವರೇ ಕಾಪಾಡಬೇಕು ಎನ್ನುವುದರ ಬದಲಾಗಿ ಅಂಬಾನಿ, ಅದಾನಿ ಕಾಪಾಡಬೇಕು ಎಂದು ಪ್ರಾರ್ಥಿಸಬೇಕಿದೆ! ಏಕೆಂದರೆ ಅಂತರ್ ರಾಷ್ಟ್ರೀಯ ಬಂಡವಾಳಶಾಹಿಯು ತನ್ನ ವ್ಯಾಪಾರಕ್ಕೆ ಅನಾನುಕೂಲವಾಗುವುದರಿಂದ ಅಣ್ವಸ್ತ್ರ ಯುದ್ಧಗಳನ್ನು ನಿಲ್ಲಿಸಬಯಸುತ್ತದೆ. (ಆದರೆ ಆಯುಧಗಳ ಉತ್ಪಾದನೆಯನ್ನು ಹೆಚ್ಚಿಸುತ್ತಲೇ ಇರುತ್ತದೆ). ಅಣ್ವಸ್ತ್ರಗಳಿಂದ ದೀಪಾವಳಿ ಆಚರಿಸದೇ ಇರುವಂತೆ ಬಂಡವಾಳಶಾಹಿಗಳು ಪಾಠಹೇಳಿಕೊಡಬೇಕಾದದ್ದು ಪ್ರಜಾಪ್ರಭುತ್ವದ ಅಂತಿಮ ಸೋಲಿನ ಲಕ್ಷಣವೂ ಅಲ್ಲವೆ? ●





ಕೃಪೆ: ಪಿ. ಮಹಮ್ಮದ್, ವಾ. ಭಾರತಿ

# ಗಾಝಾದ ಮೇಲೆ ಮತ್ತೊಂದು ಇಸ್ರೇಲಿ ದಾಳಿ

**ಕಳೆದ ವರ್ಷ ಮಾರ್ಚ್ 30 ರಿಂದ ಪ್ರತಿ ಶುಕ್ರವಾರ ಗಾಝಾ ಮತ್ತು ಇಸ್ರೇಲಿನ ನಡುವಿನ ಗಡಿಯಲ್ಲಿ ಸಾವಿರಾರು ಜನ ನೆರೆದು ಪ್ರತಿಭಟನೆ ನಡೆಸುತ್ತಿದ್ದಾರೆ. "ಮಹಾ ಮರಳು ನಡಿಗೆ" ಎಂದು ಹೆಸರಿಸಿದ ಅದು ನಡೆದದ್ದು ನಕ್ಬ ವಾರ್ಷಿಕದ ಆಚರಣೆಯ ಸಂದರ್ಭದಲ್ಲಿ. 1948ರಲ್ಲಿ ಇಸ್ರೇಲ್ ದೇಶವನ್ನು ಸ್ಥಾಪಿಸಲಿಕ್ಕಾಗಿ ಪ್ಯಾಲೆಸ್ತೀನಿ ಜನಗಳನ್ನು ಅವರ ಮನೆಗಳಿಂದ ಹೊಡೆದೋಡಿಸಿದ ಘಟನೆಯ ನೆನಪಿನ ಆಚರಣೆಯಿದು. ಕಳೆದ ವರ್ಷ ಈ ಶುಕ್ರವಾರದ ಪ್ರತಿಭಟನೆಗಳಲ್ಲಿ ಭಾಗವಹಿಸಿದ 195 ಪ್ಯಾಲೆಸ್ತೀನಿಯರನ್ನು ಸಾಯಿಸಲಾಗಿದೆ. ಮೇ 3 ರಂದು ಮತ್ತೆ 25 ಮಂದಿ ಬಲಿಯಾಗಿದ್ದಾರೆ. ಇದರಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರೂ, ಮಕ್ಕಳೂ ಸೇರಿದ್ದಾರೆ. ಇಂದು, ವಿಶೇಷವಾಗಿ ಅಮೆರಿಕವು ಇಸ್ರೇಲಿ ನೆರವಿನೊಂದಿಗೆ ಪಶ್ಚಿಮ ಏಶ್ಯದಲ್ಲಿ ತನ್ನ ಯಜಮಾನಿಕೆಯನ್ನು ಸ್ಥಾಪಿಸುವ ಆಕ್ರಮಣಕಾರಿ ಪ್ರಯತ್ನವನ್ನು ಹೆಚ್ಚಿಸಿರುವ ಸಂದರ್ಭದಲ್ಲಿ, ಪ್ಯಾಲೆಸ್ತೀನಿ ಜನತೆಯೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸುವುದು ಅಗತ್ಯವಾಗಿದೆ.**



**ಪ್ರಕಾಶ ಕಾರಟ್**




ಇಸ್ರೇಲಿ ಸಶಸ್ತ್ರ ಪಡೆಗಳಿಂದ ಗಾಝಾದ ಮೇಲೆ ವೈಮಾನಿಕ ಬಾಂಬುದಾಳಿ ಈ ಅಗಲ ಕಿರಿದಾದ ಭೂಪಟ್ಟಿಯಲ್ಲಿ ಬಂಧಿಗಳಂತಾಗಿರುವ 20 ಲಕ್ಷ ಪ್ಯಾಲೆಸ್ತೀನೀ ಜನಗಳ ಮೇಲಿನ ಇಸ್ರೇಲಿ ದಾಳಿಗಳಲ್ಲಿ ತೀರಾ ಇತ್ತೀಚಿನದ್ದು. ಇದು ಮೇ 3ರಂದು ಗಾಝಾಕ್ಕೆ ದಿಗ್ಬಂಧನ ಮತ್ತು ಮುತ್ತಿಗೆಯ ಇಸ್ರೇಲಿ ಧೋರಣೆಗಳ ವಿರುದ್ಧ ಪ್ರತಿಭಟಿಸಲು ಗಡಿಗಳಲ್ಲಿ ಪ್ಯಾಲೆಸ್ತೀನಿಯನ್ನರು ಸೇರಿದ್ದಾಗ ನಡೆದ ತಿಕ್ಕಾಟದ ನಂತರ ಭುಗಿಲೆದ್ದಿತು.

ಮಹಿಳೆಯರು, ಮತ್ತು ಮಕ್ಕಳು ಸೇರಿದಂತೆ ಒಟ್ಟು 25 ಪ್ಯಾಲೆಸ್ತೀನಿಯನ್ನರು ಮತ್ತು ನಾಲ್ವರು ಇಸ್ರೇಲಿಗಳು ವೈಮಾನಿಕ ಬಾಂಬುದಾಳಿಗಳಲ್ಲಿ ಮತ್ತು ಅದಕ್ಕೆ ಪ್ರತೀಕಾರವಾಗಿ ಇಸ್ರೇಲ್ ಒಳಕ್ಕೆ ರಾಕೆಟ್ ದಾಳಿಗಳಲ್ಲಿ ಕೊಲೆಯಾದರು.

ಬಲಪಂಥೀಯ ನೆತನ್ಯಾಹು ಸರಕಾರ ಪಶ್ಚಿಮ ತಟ ಮತ್ತು ಜೆರುಸಲೇಮ್‌ನಲ್ಲಿ ಕಾನೂನುಬಾಹಿರ ವಸತಿಗಳನ್ನು ಕಟ್ಟುವುದನ್ನು ಹೆಚ್ಚಿಸಿದ ಹಿನ್ನೆಲೆಯಲ್ಲಿ ಸರಕುಗಳ ಹರಿವಿಗೆ ಕಟ್ಟುಪಾಡುಗಳು ಮತ್ತು ಗಾಝಾದ ಮುತ್ತಿಗೆ ಮುಂದುವರೆಯುತ್ತಿದೆ.

ನೆತನ್ಯಾಹು ಪುನರಾಯ್ಕೆ ಮತ್ತು ಇಸ್ರೇಲಿನ ಆಕ್ರಮಣಕಾರಿ ಧೋರಣೆಗಳಿಗೆ ಅಮೆರಿಕನ್ ಅಧ್ಯಕ್ಷ ಟ್ರಂಪ್ ನೇರ ಬೆಂಬಲ ಇಸ್ರೇಲಿ ಬಲಪಂಥೀಯ ಶಕ್ತಿಗಳಲ್ಲಿ ಹೆಚ್ಚಿನ ಹುಮ್ಮಸ್ಸು ತುಂಬಿದೆ. ಅವು ಪ್ಯಾಲೆಸ್ತೀನಿ ಜನಗಳ ಮೇಲೆ ತಮ್ಮ ದಾಳಿಗಳನ್ನು ಹೆಚ್ಚಿಸುತ್ತಿವೆ ಹಾಗೂ ಆಕ್ರಮಿತ ಪ್ರದೇಶಗಳಲ್ಲಿ ತಮ್ಮ ಹಿಡಿತವನ್ನು ಬಿಗಿಗೊಳಿಸುತ್ತಿವೆ.

ಅಧ್ಯಕ್ಷ ಟ್ರಂಪ್ ವಿಶ್ವಸಂಸ್ಥೆಯ ನಿರ್ಣಯಗಳನ್ನು ಉಲ್ಲಂಘಿಸಿ ಜೆರುಸಲೇಮ್ ಇಸ್ರೇಲಿನ ರಾಜಧಾನಿಯೆಂದು ಮಾನ್ಯತೆ ನೀಡಿದ್ದಾರೆ. ಗೋಲನ್ ಬೆಟ್ಟಗಳು ಇಸ್ರೇಲಿ ಪ್ರದೇಶ ಎಂದೂ ಮಾನ್ಯತೆ ನೀಡಿದ್ದಾರೆ. ಈ ಪ್ರದೇಶವನ್ನು 1967ರ ಯುದ್ಧದ ನಂತರ ಸಿರಿಯಾದಿಂದ ಕಿತ್ತುಕೊಂಡು ಇಸ್ರೇಲ್ ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡಿದೆ. ಟ್ರಂಪ್ ವಿಶ್ವಸಂಸ್ಥೆಯ ನಿರಾಶ್ರಿತರ ನೆರವಿನ ಸಂಸ್ಥೆ ಪ್ಯಾಲೆಸ್ತೀನಿ ನಿರಾಶ್ರಿತ ಶಿಬಿರಗಳಿಗೆ ಒದಗಿಸುವ ನಿಧಿಗಳನ್ನು ಕೂಡ ಕಡಿತ ಮಾಡಿದ್ದಾರೆ.



**ಮೇ 3ರ ಇಸ್ರೇಲಿ ವೈಮಾನಿಕ ದಾಳಿಯ ನಂತರ ಗಾಜಾಪಟ್ಟಿಯಲ್ಲಿ.......**

ಇಂತಹ ಒಂದು ಸನ್ನಿವೇಶದಲ್ಲಿ, ಗಾಝಾದ ಜನತೆಯ ಪ್ರತಿರೋಧ ಇಸ್ರೇಲಿಗೆ ಅಸಹನೀಯ ಎಂದನಿಸುತ್ತಿದೆ. ಕಳೆದ ವರ್ಷ ಮಾರ್ಚ್ 30ರಿಂದ ಪ್ರತಿ ಶುಕ್ರವಾರ ಗಾಝಾ ಮತ್ತು ಇಸ್ರೇಲಿನ ನಡುವಿನ ಗಡಿಯಲ್ಲಿ ಸಾವಿರಾರು ಜನ ನೆರೆದು ಪ್ರತಿಭಟನೆ ನಡೆಸುತ್ತಿದ್ದಾರೆ. "ಮಹಾ ಮರಳು ನಡಿಗೆ" ಎಂದು ಹೆಸರಿಸಿದ ಅದು ನಡೆದದ್ದು ನಕ್ಬ ವಾರ್ಷಿಕದ ಆಚರಣೆಯ ಸಂದರ್ಭದಲ್ಲಿ. 1948ರಲ್ಲಿ ಇಸ್ರೇಲ್ ದೇಶವನ್ನು ಸ್ಥಾಪಿಸಲಿಕ್ಕಾಗಿ ಪ್ಯಾಲೆಸ್ತೀನಿ ಜನಗಳನ್ನು ಅವರ ಮನೆಗಳಿಂದ ಹೊಡೆದೋಡಿಸಿದ ಘಟನೆಯ ನೆನಪಿನ ಆಚರಣೆಯಿದು. ಕಳೆದ ವರ್ಷ ಈ ಶುಕ್ರವಾರದ ಪ್ರತಿಭಟನೆಗಳಲ್ಲಿ ಭಾಗವಹಿಸಿದ 195 ಪ್ಯಾಲೆಸ್ತೀನಿಯರನ್ನು ಸಾಯಿಸ ಲಾಗಿದೆ. ಇದರಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರೂ, ಮಕ್ಕಳೂ ಸೇರಿದ್ದಾರೆ.

ಇಂದು, ವಿಶೇಷವಾಗಿ ಅಮೆರಿಕವು ಇಸ್ರೇಲಿ ನೆರವಿನೊಂದಿಗೆ ಪಶ್ಚಿಮ ಏಶ್ಯದಲ್ಲಿ ತನ್ನ ಯಜಮಾನಿಕೆಯನ್ನು ಸ್ಥಾಪಿಸುವ ಆಕ್ರಮಣಕಾರಿ ಪ್ರಯತ್ನವನ್ನು ಹೆಚ್ಚಿಸಿರುವ ಸಂದರ್ಭದಲ್ಲಿ, ಪ್ಯಾಲೆಸ್ತೀನಿ ಜನತೆಯೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸುವುದು ಅಗತ್ಯವಾಗಿದೆ.

ಈ ಘಟ್ಟದಲ್ಲಿ, ಅವರ ಪ್ರಧಾನ ಗುರಿ ಇರಾನ್. ಪರಮಾಣ ತಂತ್ರಜ್ಞಾನದ ಕುರಿತಾದ ಇರಾನಿನೊಂದಿಗಿನ ಒಪ್ಪಂದವನ್ನು ಅಮೆರಿಕಾ ಹರಿದು ಹಾಕಿದೆ. ನಂತರ, ಇರಾನಿನ ಮೇಲೆ ವ್ಯಾಪಕ ನಿರ್ಬಂಧಗಳನ್ನು ಹೇರಿದೆ. ಇದರಲ್ಲಿ ಇರಾನಿನ ತೈಲ ರಫ್ತಿನ ಕತ್ತು ಹಿಸುಕುವ ಕ್ರಮಗಳೂ ಸೇರಿವೆ. ಕಳೆದ ವಾರ, ಅಧ್ಯಕ್ಷ ಟ್ರಂಪ್ ಇರಾನನ್ನು ಬೆದರಿಸಲು ತನ್ನ ಸೆಂಟ್ರಲ್ ಕಮಾಂಡ್ ಮಿಲಿಟರಿ ನೆಲೆಗೆ ಅಮೆರಿಕನ್ ನೌಕಾಪಡೆಯ ಯುದ್ಧಹಡಗು ಅಬ್ರಹಾಂ ಲಿಂಕನ್ ಕ್ಯಾರಿಯರ್ ಗುಂಪನ್ನು ಮತ್ತು ಒಂದು ಬಾಂಬರ್ ಪಡೆಯನ್ನು ಕಳಿಸಿದ್ದಾರೆ. ಇರಾನ್ ಸಿರಿಯಾದ ಅಸ್ಸಾದ್ ಸರಕಾರ, ಲೆಬನಾನ್‌ನ ಹಿಝುಬೊಲ್ಲ ಮತ್ತು ಗಾಝಾದ ಹಮಸ್‌ಗೆ ನೆರವಾದುದಕ್ಕಾಗಿ ಅದರ ಮೇಲೆ ಗುರಿಯಿಡಲಾಗಿದೆ.

ಪಶ್ಚಿಮ ಏಶ್ಯದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ಕುತಂತ್ರಗಳು ಮತ್ತು ಇಸ್ರೇಲಿಗೆ ಅದರ ಬೆಂಬಲ ಈ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಗೆ ಬೆದರಿಕೆಯೊಡ್ಡಿದೆ. ಜಗತ್ತಿನಾದ್ಯಂತ ಎಲ್ಲ ಪ್ರಗತಿಪರ ಶಕ್ತಿಗಳು ಈ ಅಮೆರಿಕನ್ ಸಾಮ್ರಾಜ್ಯಶಾಹಿ ಕುತಂತ್ರಗಳನ್ನು ಪ್ರತಿಭಟಿಸಬೇಕಾಗಿದೆ. ●

# ಸುಪ್ರಿಂ ಕೋರ್ಟ್ ಮಾಜಿ ನೌಕರಳಿಗೆ ನ್ಯಾಯ ಸಿಗಬೇಕು

ಪುಟ 2 ರಿಂದ

ವಿಧಿಗಳಿಗೆ ಅನುಗುಣವಾಗಿದ್ದು, ಈ ವಿಚಾರಣೆಗೆ ನಿಷ್ಪಕ್ಷಪಾತತೆಯ ಮೆರುಗನ್ನು ಕೊಡುತ್ತಿತ್ತು. ಮಹಿಳಾ ದೂರುದಾರರನ್ನು ಹೇಳಿಕೆ ನೀಡುವಂತೆ ಕೇಳಲಾಯಿತು. ಮೂರು ವಿಚಾರಣೆಗಳ ನಂತರ, ವಿಚಾರಣೆಯಲ್ಲಿನ ವಾತಾವರಣ ಸಹಾನುಭೂತಿಹೀನವಾಗಿತ್ತು, ಬೆದರಿಸುವಂತದ್ದಾಗಿತ್ತು ಎಂದು ಆಕೆ ಹೇಳಿದ್ದಾರೆ. ತನ್ನೊಂದಿಗೆ ತನ್ನ ವಕೀಲರು ಅಥವ ಒಬ್ಬರು ಬೆಂಬಲಿಗ ವ್ಯಕ್ತಿ ಇರಲು ಅವಕಾಶ ಕೊಡಬೇಕು ಎಂಬ ಆಕೆಯ ಕೋರಿಕೆಯನ್ನು ತಿರಸ್ಕರಿಸಲಾಯಿತು.

ಒಬ್ಬ ಸಾಮಾನ್ಯ ಮಾಜಿ ನೌಕರಳು ಮತ್ತು ಸುಪ್ರಿಂ ಕೋರ್ಟಿನ ನ್ಯಾಯಾಧೀಶರ ಸ್ಥಾನಮಾನದಲ್ಲಿನ ಅಗಾಧ ಅಂತರದಿಂದಾಗಿ ಆಕೆ ಸುಪ್ರಿಂ ಕೋರ್ಟಿನ ನ್ಯಾಯಾಧೀಶರ ಒಂದು ತನಿಖೆಯನ್ನು ಎದುರಿಸಬೇಕು ಎಂದು ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಅರಿಯಲು ಈ ನ್ಯಾಯಾಧೀಶರುಗಳು ಖಂಡಿತವಾಗಿಯೂ ವಿಫಲರಾಗಿದ್ದಾರೆ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ. ತನಿಖಾ ಕಲಾಪಗಳ ವೀಡಿಯೋ ಚಿತ್ರಣ ಮಾಡಬೇಕು ಎಂಬ ಆಕೆಯ ಕೋರಿಕೆಯನ್ನು ಕೂಡ ತಿರಸ್ಕರಿಸಲಾಯಿತು. ಅಂತಿಮವಾಗಿ, ಮುಖ್ಯ ನ್ಯಾಯಾಧೀಶರನ್ನು ದೋಷಮುಕ್ತಗೊಳಿಸಿದ ವರದಿಯ ಒಂದು ಪ್ರತಿಯನ್ನು ಕೂಡ ದೂರುದಾರರಿಗೆ ಕೊಡಲಾಗಿಲ್ಲ, ಆದರೆ ಮುಖ್ಯ ನ್ಯಾಯಾಧೀಶರಿಗೆ ಒಂದು ಪ್ರತಿಯನ್ನು ಕೊಡಲಾಗಿದೆ.

ಈ ಮಹಿಳೆಗೆ ವಕೀಲರು ಅಥವ ಬೆಂಬಲ ವ್ಯಕ್ತಿಯೊಂದಿಗೆ ಹಾಜರಾಗಲು ಅವಕಾಶ ಕೊಡದೇ ಇರುವುದು ಅನ್ಯಾಯ ಎಂದು ತಾನು ಭಾವಿಸಿರುವುದಾಗಿ ಹೇಳಿರುವ ಎಐಡಿಡಬ್ಲ್ಯುಎ, ಆಕೆಗೆ ವರದಿಯ ಒಂದು ಪ್ರತಿಯನ್ನು ಕೊಡದಿರುವುದು ಕೂಡ ಇಲ್ಲಿ ಒಂದು ನ್ಯಾಯಯುತ ವಿಧಾನವನ್ನು ಅನುಸರಿಸದಿರುವುದನ್ನು ತೋರಿಸುತ್ತದೆ ಎಂದು ಅಭಿಪ್ರಾಯ ಪಟ್ಟಿದೆ. ಏಕೆಂದರೆ ಆ ಮಹಿಳೆಗೆ ಈ ವರದಿಯನ್ನು ಪರೀಕ್ಷಿಸಲು, ಈ ವರದಿ ಆಕೆಯ ವಿರುದ್ಧ ಏಕೆ ಹೋಗಿದೆ, ಆಕೆ ನೀಡಿದ ಎಲ್ಲ ಸಾಮಗ್ರಿಗಳನ್ನು ಪರೀಕ್ಷಿಸಲಾಗಿದೆಯೇ ಅಥವ ಆಕೆ ನೀಡಬಯಸಿದ ಸಾಕ್ಷ್ಯವನ್ನು ಗಮನಿಸಲಾಗಿದೆಯೇ ಎಂದು ತಿಳಿಯಲು ಆಕೆಗೆ ಅವಕಾಶವೇ ಇಲ್ಲದಂತಾಗಿದೆ.

ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದ ಗಂಭೀರ ಆರೋಪಗಳು ಇರುವಲ್ಲಿ ವಿಶಾಖಾ ತೀರ್ಪನ್ನು ಮತ್ತು ಪೋಷ್ ಕಾಯ್ದೆಯನ್ನು ಸುಪ್ರಿಂ ಕೋರ್ಟಿನ ನ್ಯಾಯಾಧೀಶರಿಗೆ ಸಂಬಂಧಪಟ್ಟಂತೆಯೂ ಅಕ್ಷರಶಃ ಮತ್ತು ಮನಸಾರೆ ಅನುಸರಿಸಬೇಕು ಹಾಗೂ ಒಬ್ಬ ವ್ಯಕ್ತಿ ಎಷ್ಟೇ ಬಲಿಷ್ಟನಾಗಿದ್ದರೂ ಕಾನೂನಿಗೆ ಮೀರಿದವನಲ್ಲ ಎಂಬುದನ್ನು ಖಾತ್ರಿಪಡಿಸುವ ಒಂದು "ನ್ಯಾಯಯುತ ವಿಧಾನ"ವನ್ನು ಅನುಸರಿಸಬೇಕು. ಅಲ್ಲದೆ, "ಆಂತರಿಕ ಸಮಿತಿ"ಗೆ ಸಂಬಂಧಪಟ್ಟಂತೆ ವಿಧಿಸಿರುವ ವಿಧಾನವನ್ನು ಸುಪ್ರಿಂ ಕೋರ್ಟ್ ಪರೀಕ್ಷಿಸಬೇಕು. ಇಂತಹ ಸಂದರ್ಭಗಳಲ್ಲಿ "ನ್ಯಾಯಯುತ ವಿಧಾನ" ವನ್ನು ಖಾತರಿ ಪಡಿಸಲು ತಿದ್ದುಪಡಿಗಳನ್ನು ಮಾಡಬೇಕು. ಇತರ ನ್ಯಾಯಾಧೀಶರುಗಳಷ್ಟೇ ಅಲ್ಲ, ಮುಖ್ಯ ನ್ಯಾಯಾಧೀಶರ ವಿರುದ್ಧವೂ ಒಂದು ವಿಚಾರಣೆಯನ್ನು ಹೇಗೆ ನಡೆಸಬೇಕು ಎಂಬ ಅಂಶವನ್ನು ಹೇಳಲಾಗಿಲ್ಲ. ಅದು ಕೂಡ ತಿದ್ದುಪಡಿಗಳಲ್ಲಿ ಸೇರಬೇಕು ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.

ಈ ಮಾಜಿ ನೌಕರಳ ನ್ಯಾಯದ ಹುಡುಕಾಟದಲ್ಲಿ ತಾನು ಆಕೆಯ ಬೆಂಬಲಕ್ಕೆ ನಿಲ್ಲುವುದಾಗಿ ಹೇಳಿರುವ ಎಐಡಿಡಬ್ಲ್ಯುಎ, ಲೈಂಗಿಕ ಕಿರುಕುಳದ ಆರೋಪಗಳ ಒಂದು ಮುಕ್ತ ಮತ್ತು ನ್ಯಾಯಯುತ ತನಿಖೆಯನ್ನು ಆಗ್ರಹಿಸಿ ಹಾಗೂ ಸಂತ್ರಸ್ತಳಿಗೆ ನ್ಯಾಯ ಸಿಗಬೇಕು ಎಂದು ದೇಶಾದ್ಯಂತ ಇತರ ಮಹಿಳಾ ಸಂಘಟನೆಗಳೊಂದಿಗೆ ಜಂಟಿಯಾಗಿ ಪ್ರತಿಭಟನೆಗಳನ್ನು ನಡೆಸಬೇಕು ಎಂದು ತನ್ನ ಘಟಕಗಳಿಗೆ ಕರೆ ನೀಡಿದೆ. ●

## ಇದು ನ್ಯಾಯದ ನಿರಾಕರಣೆ

ಪುಟ 2 ರಿಂದ

ಸುಪ್ರಿಂ ಕೋರ್ಟಿನ ಒಬ್ಬ ಪ್ರಮುಖ ನ್ಯಾಯಾಧೀಶರೂ ಆಗಿರುವ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಕೂಡ ದೂರುದಾರರು ಮುಂದಿಟ್ಟ ಕುಂದುಕೊರತೆಗಳನ್ನು ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ವಿಚಾರಣಾ ಸಮಿತಿಯ ಮುಖ್ಯಸ್ಥರಾದ ನ್ಯಾಯಮೂರ್ತಿ ಬೋಬ್ಡೆಯವರಿಗೆ ಪತ್ರ ಬರೆದು ಸೂಚಿಸಿದರು. ಆದರೆ ಅವರ ಅಭಿಪ್ರಾಯಕ್ಕೂ ಗಮನ ಕೊಡಲಿಲ್ಲ. ದೂರುದಾರರ ಗೈರುಹಾಜರಿಯಲ್ಲಿ ಈ ತನಿಖೆಯನ್ನು ನಿರ್ವಹಿಸುವ ಬಗ್ಗೆ ಎಚ್ಚರಿಕೆಯನ್ನೂ ಅವರು ನೀಡಿದರೆಂದು ವರದಿಯಾಗಿದೆ.

ಇವೆಲ್ಲ ಸುಪ್ರಿಂ ಕೋರ್ಟಿನ ಹಿರಿಯ ವಕೀಲರುಗಳು, ನ್ಯಾಯವಾದಿಗಳು, ಮಹಿಳಾ ಕಾರ್ಯಕರ್ತರು ಮತ್ತು ನಾಗರಿಕರನ್ನೂ ತೀವ್ರವಾಗಿ ಅಲುಗಾಡಿಸಿವೆ ಎಂದು ಹೇಳಿರುವ ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯ ಸುಪ್ರಿಂ ಕೋರ್ಟ್ ಮತ್ತು ಅದರ ಮುಖ್ಯ ನ್ಯಾಯಾಧೀಶರು ದೇಶದ ಈ ಸರ್ವೋಚ್ಚ ನ್ಯಾಯಾಲಯವು ಈಗ ಸಿಲುಕಿಕೊಂಡಿರುವ ಬಿಕ್ಕಟ್ಟುಗಳಿಂದ ಅದನ್ನು ಪಾರು ಮಾಡಲು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದು ಹೇಳಿದೆ. ●

# ತಿರಸ್ಕೃತ ಅರಣ್ಯ ಹಕ್ಕು ಅರ್ಜಿಗಳ ಮರು ಪರಿಶೀಲನೆ

ನಿತ್ಯಾನಂದಸ್ವಾಮಿ

ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಕಾಯ್ದೆ 2006 ರ ಅಡಿಯಲ್ಲಿ ಸಲ್ಲಿಕೆಯಾದ ಅರಣ್ಯವಾಸಿಗಳ ಮತ್ತು ಅರಣ್ಯ ಭೂಮಿ ಸಾಗುವಳಿದಾರರ ತಿರಸ್ಕೃತಗೊಂಡ ಅರ್ಜಿಗಳನ್ನು ಮರು ಪರಿಶೀಲನೆ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ. ಅರಣ್ಯ ಭೂಮಿ ಹಕ್ಕಿಗಾಗಿ ದೇಶದ ಸುಮಾರು 21 ರಾಜ್ಯಗಳಿಂದ ಒಟ್ಟು 42.19 ಲಕ್ಷ ಅರ್ಜಿಗಳು ಸ್ವೀಕೃತಗೊಂಡಿದ್ದವು. ಅವುಗಳಲ್ಲಿ ಸರಿಸುಮಾರು 40% ರಷ್ಟು, ಅದರೆ 18.89 ಲಕ್ಷ ಅರ್ಜಿಗಳನ್ನು ಅಂಗೀಕರಿಸಿ ಸಂಬಂಧಪಟ್ಟ ಕುಟುಂಬಗಳಿಗೆ ಜಮೀನು ಹಕ್ಕುಪತ್ರ ವಿತರಿಸಲಾಗಿವೆ. ಒಟ್ಟು 11.27 ಲಕ್ಷ ಅರ್ಜಿಗಳು ತಿರಸ್ಕೃತವಾಗಿವೆ. ಉಳಿದವು ಇತ್ಯರ್ಥಕ್ಕೆ ಬಾಕಿ ಇವೆ.

ಈ ನಡುವೆ, ಬೆಂಗಳೂರಿನ 'ವೈಲ್ಡ್ ಲೈಫ್ ಫಸ್ಟ್' ಎಂಬ ಸರ್ಕಾರೇತರ ಸಂಸ್ಥೆ, ಕೆಲವು ನಿವೃತ್ತ ಅರಣ್ಯಾಧಿಕಾರಿಗಳು ಮತ್ತು ಪರಿಸರವಾದಿಗಳು 2006 ರ ಅರಣ್ಯ ಹಕ್ಕುಗಳ ಕಾಯ್ದೆಯನ್ನೇ ರದ್ದು ಮಾಡಲು ಸುಪ್ರೀಂ ಕೋರ್ಟಿಗೆ ಕೋರಿಕೆ ಸಲ್ಲಿಸಿದ್ದರು. ಮೋದಿ ಸರ್ಕಾರ ಸುಪ್ರೀಂ ಕೋರ್ಟಿನ ಎದುರು ಕಾಯ್ದೆಯನ್ನು ಸಮರ್ಥಿಸಲು ಆಸಕ್ತಿವಹಿಸಲೇ ಇಲ್ಲ. ಆದಿವಾಸಿಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಹಕ್ಕುಗಳ ಪರವಾಗಿ ವಾದ ಮಂಡಿಸಲು ಸಮರ್ಥ ನ್ಯಾಯವಾದಿಗಳನ್ನು ಕಳುಹಿಸಲಿಲ್ಲ. ಪರಿಣಾಮವಾಗಿ, 2019, ಫೆಬ್ರವರಿ 13 ರಂದು ಸುಪ್ರೀಂಕೋರ್ಟ್ ಆದೇಶವನ್ನು ಹೊರಡಿಸಿ ಇದುವರೆಗೂ ಅರಣ್ಯ ಭೂಮಿ ಹಕ್ಕುಪತ್ರಗಳನ್ನು ಪಡೆಯದಿರುವ ಅರ್ಜಿದಾರರನ್ನು ಅವರು ಉಪಭೋಗ ಮಾಡುತ್ತಿದ್ದ ಅರಣ್ಯ ಭೂಮಿಯಿಂದ ತೆರವುಗೊಳಿಸಬೇಕೆಂದು ಆಜ್ಞಾಪಿಸಿತು. ಪ್ರಕರಣದ ಮುಂದಿನ ವಿಚಾರಣೆಯನ್ನು ಜುಲೈ 24 ಕ್ಕೆ ಮುಂದೂಡಿದ ನ್ಯಾಯಾಲಯವು ಅಷ್ಟರೊಳಗೆ ಅರ್ಜಿ ತಿರಸ್ಕೃತರಾದ ಎಲ್ಲರನ್ನೂ ಒಕ್ಕಲೆಬ್ಬಿಸಬೇಕೆಂದು ಸೂಚಿಸಿತು.

ಕೇಂದ್ರ ಬಿಜೆಪಿ ಸರ್ಕಾರದ ನಿರ್ಲಕ್ಷ ಮತ್ತು ನಿರಾಸಕ್ತಿಯಿಂದಾಗಿ ಲಕ್ಷಾಂತರ ಆದಿವಾಸಿ ಮತ್ತು ಇತರ ಬಡ ಕುಟುಂಬಗಳು ತಮ್ಮ ವಾಸದ ಮನೆಗಳನ್ನು ಹಾಗೂ ಸಾಗುವಳಿ ಭೂಮಿಯನ್ನು ಕಳೆದುಕೊಂಡು ಬೀದಿಪಾಲಾಗುವಂತಾಯಿತು. ದೇಶಾದ್ಯಂತ ವ್ಯಾಪಕ ಪ್ರತಿಭಟನೆಗಳು ಭುಗಿಲೇಳುವ ಆತಂಕ ಸೃಷ್ಟಿಯಾಯಿತು. ಸುಗ್ರೀವಾಜ್ಞೆಯ ಮೂಲಕ ಅರಣ್ಯವಾಸಿಗಳ ಹಕ್ಕುಗಳಿಗೆ ರಕ್ಷಣೆ ಒದಗಿಸಬೇಕೆಂಬ ಒತ್ತಾಯ ತೀವ್ರವಾಯಿತು. ಲೋಕಸಭಾ ಚುನಾವಣೆಯಲ್ಲಿ ಪ್ರತಿಕೂಲ ಪರಿಣಾಮ ಬೀರುವ ಸಧ್ಯತೆಯಿಂದ ಕಂಗೆಟ್ಟ ಕೇಂದ್ರ ಸರ್ಕಾರ ಈ ತೀರ್ಪನ್ನು ಪ್ರಶ್ನಿಸಿ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಮೂಲಕ ಮೇಲ್ಮನವಿ ಸಲ್ಲಿಸಿತು. ಸರ್ಕಾರದ ಮೇಲ್ಮನವಿಯನ್ನು ಪರಿಗಣಿಸಿ ಸುಪ್ರೀಂ ಕೋರ್ಟ್ ತನ್ನ ಈ ಮುಂಚಿನ ಆದೇಶಕ್ಕೆ ತಡೆ ನೀಡಿತು. ಕೋರ್ಟ್ ನಿರ್ದೇಶನದಂತೆ ಅರ್ಜಿಗಳನ್ನು ಮರು ಪರಿಶೀಲಿಸಲು ರಾಜ್ಯ ಸರ್ಕಾರ ಮುಂದಾಗಿದೆ.

**ಕರ್ನಾಟಕ ಸರ್ಕಾರದ ಕ್ರಮ**

ರಾಜ್ಯದ ಆದಿವಾಸಿಗಳಿಂದ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳಿಂದ ಒಟ್ಟು 2,84,625 ಕೇವಲ ಅರ್ಜಿಗಳು ಸ್ವೀಕೃತವಾಗಿವೆ. ಅವುಗಳಲ್ಲಿ 16,130 ಅರ್ಜಿಗಳು ಮಾತ್ರ ಪುರಸ್ಕೃತ ಗೊಂಡಿವೆ. 2,14,710 ಅರ್ಜಿಗಳು ತಿರಸ್ಕಾರ ಗೊಂಡಿದ್ದು 53,785 ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ. ಉತ್ತರ ಕನ್ನಡ (89167), ಶಿವಮೊಗ್ಗ (85,518), ಚಿಕ್ಕಮಗಳೂರು (24,659), ಬೆಳಗಾವಿ (17,424), ಬಾಗಲಕೋಟೆ (12,479), ದಾವಣಗೆರೆ (12,059), ಮತ್ತು ಮೈಸೂರು (7,275) ಜಿಲ್ಲೆಗಳಿಂದ ಅತಿ ಹೆಚ್ಚು ಅರ್ಜಿಗಳು ಸ್ವೀಕೃತವಾಗಿವೆ. ಬೀದರ್, ಕಲ್ಬುರ್ಗಿ, ಯಾದಗೀರ್, ಬಳ್ಳಾರಿ, ಹಾವೇರಿ, ಗದಗ, ಕೊಪ್ಪಳ, ರಾಯಚೂರು, ತುಮಕೂರು, ಚಿಕ್ಕಬಳ್ಳಾಪುರ, ರಾಮನಗರ, ಚಾಮರಾಜನಗರ, ಕೊಡಗು, ಹಾಸನ ಮೊದಲಾದ ಜಿಲ್ಲೆಗಳಿಂದಲೂ ಅರ್ಜಿಗಳು ಸ್ವೀಕೃತವಾಗಿವೆ.

ಇದೇ ಏಪ್ರಿಲ್ 30 ರಂದು ರಾಜ್ಯ ಮಟ್ಟದ ಮೇಲುಸ್ತುವಾರಿ ಸಮಿತಿ ಸಭೆ ನಡೆಸಿದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿ, ಸರ್ಕಾರ ಹೊರಡಿಸಿರುವ ಹೊಸ ಮಾರ್ಗಸೂಚಿ ಅನುಸರಿಸಿ ಎಲ್ಲಾ ತಿರಸ್ಕೃತ ಅರ್ಜಿಗಳನ್ನು ಪುನರ್ ಪರಿಶೀಲಿಸಬೇಕೆಂದು ಸೂಚಿಸಿದ್ದಾರೆ. ಜುಲೈ 24 ರಂದು ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಬೇಕಾಗಿದ್ದು ಜೂನ್ ಅಂತ್ಯದೊಳಗೆ ತಿರಸ್ಕೃತ ಅರ್ಜಿಗಳ ಮರುಪರಿಶೀಲನಾ ಮಧ್ಯಂತರ ವರದಿ ಸಲ್ಲಿಸಲು ತಿಳಿಸಲಾಗಿದೆ. ರಾಜ್ಯ ಸರ್ಕಾರಗಳು ಹೆಚ್ಚಿನ ಮುತುವರ್ಜಿ ಹಾಗೂ ವಿಶೇಷ ಆದ್ಯತೆ ಎಂದು ಪರಿಗಣಿಸಿ ತಿರಸ್ಕೃತ ಅರಣ್ಯವಾಸಿಗಳ ಅರ್ಜಿಗಳನ್ನು ಪುನರ್ ಪರಿಶೀಲಿಸಬೇಕೆಂದು ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯ ನಿರ್ದೇಶನ ನೀಡಿದೆ.

ಹಿಂದೆ ಅರ್ಜಿಗಳನ್ನು ಪರಿಶೀಲಿಸಿ ತಿರಸ್ಕರಿಸಿದ ಸಮಿತಿಗಳೇ ಪರಿಷ್ಕೃತ ಮಾರ್ಗಸೂಚಿ ಅನ್ವಯ ಪುನರ್ ಪರಿಶೀಲಿಸುವಂತೆ ನಿರ್ದೇಶಿಸಲಾಗಿದೆ. ಅರ್ಜಿಗಳನ್ನು ಮರು ಪರಿಶೀಲನೆ ಮಾಡುವಾಗ ಅರಣ್ಯ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದು ಹಕ್ಕಿಗೆ ಪರಿಗಣಿಸಬಹುದಾದ ಸಾಕ್ಷ್ಯಗಳ ಬಗ್ಗೆ ಮಾರ್ಗದರ್ಶನ ನೀಡುವರು. ಅರ್ಜಿದಾರರಿಗೆ ವೈಯಕ್ತಿಕವಾಗಿ ಲಿಖಿತ ನೋಟಿಸ್ ನೀಡಿ ಅಹವಾಲು ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು. ಅರ್ಜಿಗಳನ್ನು ಸಕಾರಣವಿಲ್ಲದೆ ತಿರಸ್ಕರಿಸುವಂತಿಲ್ಲ. ಗ್ರಾಮ, ಉಪ ವಿಭಾಗ ಮತ್ತು ಜಿಲ್ಲಾ ಮಟ್ಟದ ಸಮಿತಿಗಳು ಪುನರ್ ಪರಿಶೀಲಿಸಿದ ನಂತರ ಅರ್ಜಿಯನ್ನು ತಿರಸ್ಕರಿಸಿದ್ದರೂ ಪುನಃ ಅರ್ಜಿದಾರ ಅರಣ್ಯವಾಸಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ಇರುತ್ತದೆ. ಅಪೂರ್ಣ ಅರ್ಜಿಗಳ ಪುನರ್ ವಿಮರ್ಶೆಗಾಗಿ ಗ್ರಾಮ ಸಭೆಗೆ ಕಳುಹಿಸಬಹುದು. ಮಂಜೂರಿಗೆ ಸಂಬಂಧಿಸಿ ಕನಿಷ್ಠ ಎರಡು ಸಾಕ್ಷಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸುವುದು. ಅರ್ಜಿದಾರರು ಅರಣ್ಯ ಭೂಮಿಯಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸವಿದ್ದರೆ ವಿಶೇಷ ಜವಾಬ್ದಾರಿ ವಹಿಸಿ ಕ್ರಮ ಜರಗಿಸಬೇಕು. ಇಂತಹ ಸುಮಾರು 16 ಮಾರ್ಗಸೂಚಿಗಳನ್ನು ನೀಡಲಾಗಿದೆ.

ಅರಣ್ಯವಾಸಿಗಳ ಮತ್ತು ಅರಣ್ಯ ಭೂಮಿ ಸಾಗುವಳಿ ಮಾಡುತ್ತಿರುವ ಭೂರಹಿತರ ಹಿತ ರಕ್ಷಣೆಗಾಗಿ 2006ರಲ್ಲಿ ಅಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಈ ಅರಣ್ಯ ಹಕ್ಕು ಕಾಯ್ದೆ ತಂದಿತ್ತು. ಕಮ್ಯುನಿಸ್ಟ್ ಪಕ್ಷಗಳ ಒತ್ತಡ ಮತ್ತು ಎಡ ರೈತ ಕೃಷಿ ಕೂಲಿಕಾರರ ಸಂಘಟನೆಗಳ ಹೋರಾಟಗಳಿಂದ ಈ ಕಾಯ್ದೆ ಅಸ್ತಿತ್ವಕ್ಕೆ ಬಂದಿತ್ತು. ಈ ಕಾಯ್ದೆಯಲ್ಲಿ ಹಲವಾರು ಲೋಪದೋಷಗಳು ಉಳಿದುಕೊಂಡಿವೆ. 2012ರಲ್ಲಿ ಕಾಯ್ದೆಯನ್ನು ತಿದ್ದುಪಡಿ ಮಾಡಲಾಗಿದ್ದರೂ ದೋಷಗಳು ಉಳಿದುಕೊಂಡಿವೆ. ನಿರಂತರ ಸಂಘರ್ಷ ಮತ್ತು ಕಾನೂನು ಹೋರಾಟಗಳ ಮೂಲಕ ಈ ಕಾಯ್ದೆಯನ್ನು ಬಲಪಡಿಸಬೇಕಾಗಿದೆ.

**ಬಗರ್ ಹುಕುಂ ಸಾಗುವಳಿ ಗೊಂದಲ**

ಸುಪ್ರೀಂ ಕೋರ್ಟ್ ಈಗ ನೀಡಿರುವ ಆದೇಶಕ್ಕೂ ಬಗರ್ ಹುಕ್ಕುಂ ಸಾಗುವಳಿ ಸಕ್ರಮ ಮಾಡುವ ಪ್ರಕ್ರಿಯೆಗೂ ಯಾವುದೇ ಸಂಬಂಧವಿಲ್ಲ. ಅರಣ್ಯ



ವಾಸಿ/ಅರಣ್ಯ ಭೂಮಿ ಸಾಗುವಳಿದಾರರಿಗೆ ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಹಕ್ಕು ಪತ್ರ ನೀಡುವಂತೆಯೇ ಕಂದಾಯ ಭೂಮಿಯಲ್ಲಿ ಬಗರ್ ಹುಕ್ಕುಂ ಸಾಗುವಳಿ ಮಾಡುತ್ತಿರುವವರಿಗೆ ರಾಜ್ಯ ಸರ್ಕಾರ ಕಂದಾಯ ಕಾಯ್ದೆ ಅಡಿಯಲ್ಲಿ ಸಾಗುವಳಿ ಚೀಟಿ ವಿತರಿಸುತ್ತದೆ. ಅವರು ಅತಿಕ್ರಮಿಸಿ ಸಾಗುವಳಿ ಮಾಡುತ್ತಿರುವ ಭೂಮಿ ಅರಣ್ಯ ಭೂಮಿ ಆಗಿರುವುದಿಲ್ಲ, ಅದು ಕಂದಾಯ ಭೂಮಿ ಆಗಿರುತ್ತದೆ.

ಆದರೆ ಹಲವಾರು ಜಿಲ್ಲೆಗಳಲ್ಲಿ ಕಂದಾಯ ಮತ್ತು ಅರಣ್ಯ ಭೂಮಿಯ ಬಗ್ಗೆ ಗೊಂದಲ ಇದೆ. ಕಂದಾಯ ಭೂಮಿಯನ್ನು ಅರಣ್ಯ ಭೂಮಿಯೆಂದೂ, ಅರಣ್ಯ ಭೂಮಿಯನ್ನು ಕಂದಾಯ ಭೂಮಿಯೆಂದು ಈ ಎರಡು ಇಲಾಖೆಗಳು ಪರಸ್ಪರ ಕಿತ್ತಾಡುತ್ತಿರುತ್ತವೆ. ಈ ವಿವಾದವನ್ನು ಇತ್ಯರ್ಥಪಡಿಸುವ ಕೆಲಸ ಆರಂಭವಾಗಿದೆ. ಇದರಿಂದಾಗಿ ಕಂಗಾಲಾಗಿರುವ ಬಗರ್ ಹುಕ್ಕುಂ ಸಾಗುವಳಿದಾರರು ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿಯೂ ಅರ್ಜಿ ಹಾಕಿಕೊಂಡಿರುತ್ತಾರೆ.

ಪ್ರಸಕ್ತ ಅರ್ಜಿ ಮರು ಪರಿಶೀಲನಾ ಪ್ರಕ್ರಿಯೆಯಲ್ಲಿ ಎಲ್ಲಾ ಗೊಂದಲಗಳಿಗೂ ತೆರೆ ಬಿದ್ದರೆ ಒಳ್ಳೆಯದು. ಅರಣ್ಯ ಭೂಮಿಗಾಗಿ ಅರ್ಜಿ ಹಾಕಿದವರು ತಮ್ಮ ಬಳಿ ಇರುವ ಎಲ್ಲಾ ದಾಖಲೆಗಳನ್ನು ಸಜ್ಜುಗೊಳಿಸಿ ಅದರ ಪ್ರತಿಗಳನ್ನು ಪರಿಶೀಲನೆಗೆ ಒಪ್ಪಿಸಲು ತಯಾರಿಮಾಡಿಕೊಳ್ಳಬೇಕು. ಸಾಕ್ಷಿಗಳನ್ನು ಸಿದ್ದಪಡಿಸಿಕೊಳ್ಳಬೇಕು. ಸಂಬಂಧಪಟ್ಟ ಅರಣ್ಯ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿಗಳನ್ನು ಪಡೆಯಬೇಕು. ಅರಣ್ಯ ಭೂಮಿಯ ಹಕ್ಕುಗಳ ಕ್ಲೇಮಿನ ನಮೂನೆ – ಎ ಭರ್ತಿಮಾಡಿ ಅರ್ಜಿ ಸಲ್ಲಿಸದೆ ಇದ್ದವರು ಈಗಲಾದರೂ ಸಲ್ಲಿಸಿ ಸ್ವೀಕೃತಿ ಪಡೆಯಲು ಪ್ರಯತ್ನಿಸಬಹುದು. ಹೊಸ ಸರಳವಾದ ಮರು ಪರಿಶೀಲನಾ ಮಾರ್ಗಸೂಚಿಗಳನ್ನು ಅನ್ವಯ ಮಾಡಿದರೆ ಮಾತ್ರ ಬಡಪಾಯಿ ಅರಣ್ಯವಾಸಿಗಳಿಗೆ ನ್ಯಾಯ ಸಿಗಬಹುದು.

**ಭಾರತೀಯ ಅರಣ್ಯ ಕಾಯ್ದೆ – 2019 (ಕರಡು)**

2006ರ ಅರಣ್ಯ ಹಕ್ಕುಗಳ ಕಾಯ್ದೆಯನ್ನು ಬಲಪಡಿಸಿ ದೃಢವಾಗಿ ಜಾರಿಮಾಡುವತ್ತ ಇಚ್ಛಾ ಶಕ್ತಿಯನ್ನು ವ್ಯಕ್ತಪಡಿಸಲು ವಿಫಲವಾದ ಮೋದಿ ಸರ್ಕಾರ ಪಾರಂಪರಿಕ ಅರಣ್ಯವಾಸಿಗಳ ಹಿತಗಳನ್ನು ಕಡೆಗಣಿಸುವ, ದೇಶದ ಅರಣ್ಯ ಸಂಪತ್ತನ್ನು ಲೂಟಿಕೋರ ಕಾರ್ಪೊರೇಟ್ ಕಂಪೆನಿಗಳಿಗೆ ಹಸ್ತಾಂತರಿಸುವ ದುರುದ್ದೇಶದ ಭಾರತೀಯ ಅರಣ್ಯ ಕಾಯ್ದೆ 2019 ಅನ್ನು ತರಲು ಸದ್ದಿಲ್ಲದೆ ಕೆಲಸ ಮಾಡುತ್ತಿದೆ. ಭಾರತೀಯ ಅರಣ್ಯಗಳ ಕಾಯ್ದೆ ಮೂಲತಃ ಜಾರಿಗೆ ಬಂದದ್ದು 1927 ರಲ್ಲಿ. ಬ್ರಿಟಿಷ್ ಸರ್ಕಾರ ತನ್ನ ವಸಾಹತುಶಾಹಿ ಹಿತಕ್ಕಾಗಿ ತಂದಿರುವ ಇಂತಹ ಕಾಯ್ದೆಗಳನ್ನು ಬದಲಾಯಿಸುವುದು ಯಾವಾಗಲೋ ಆಗಬೇಕಾಗಿದ್ದ ಕೆಲಸ. ಮೋದಿ ಸರ್ಕಾರ ಜಾರಿಗೆ ತರಲು ಹೊರಟಿರುವ 2019 ರ ಭಾರತೀಯ ಅರಣ್ಯ ಕಾಯ್ದೆ ಸಹಜವಾಗಿ ಅದರ ನವ ಉದಾರವಾದಿ ಧೋರಣೆಯ ಭಾಗವಾಗಿದೆ. 2006 ರ ಅರಣ್ಯ ಹಕ್ಕುಗಳ ಕಾಯ್ದೆ ಮೋದಿ ಸರ್ಕಾರದ ನೀತಿಗೆ ತಡೆಯೊಡ್ಡುತ್ತಿರುವುದರಿಂದ ಅದನ್ನು ಹಂತ ಹಂತವಾಗಿ ನಿರರ್ಥಕಗೊಳಿಸುವುದು ಸರ್ಕಾರದ ಉದ್ದೇಶವಾಗಿದೆ. ಚುನಾವಣೆಗಳ ನಂತರ, ಮತ್ತೆ ಅದೇ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ ಇಂತಹ ಹಲವು ದೇಶವಿರೋಧಿ ಕಾನೂನುಗಳನ್ನು ನಾವು ಕಾಣಬೇಕಾಗಬಹುದು. ಲೋಕಸಭೆಯಲ್ಲಿ ಬಹುಮತ ಸಿಕ್ಕಿಬಿಟ್ಟರೆ ಯಾವುದೇ ಚರ್ಚೆ ಇಲ್ಲದೆ ಮಸೂದೆಗಳು ಕಾನೂನುಗಳಾಗಿ ಜಾರಿಯಾಗಲಿವೆ.

ಮಸೂದೆಯ ಕರಡನ್ನು ಈಗಾಗಲೇ ರಾಜ್ಯ ಸರ್ಕಾರಗಳ ಪರಿಶೀಲನೆ ಹಾಗೂ ಸಲಹೆಗಳಿಗಾಗಿ ಕಳುಹಿಸಿ ಕೊಡಲಾಗಿದೆ ಎನ್ನಲಾಗಿದೆ. ಇದೊಂದು ದಮನಕಾರಿ ಕಾಯ್ದೆಯಾಗಿ ಹೊರಬರುವ ಸಾಧ್ಯತೆ ಇದೆ. ಭಾರತದ ಅರಣ್ಯ ಪ್ರದೇಶದ ಆಡಳಿತಾತ್ಮಕ ನಿರ್ವಹಣೆಯ ಅಧಿಕಾರವನ್ನು ಅರಣ್ಯ ಇಲಾಖೆಯ ಆಡಳಿತಶಾಹಿಗೆ ನೀಡಲಿದೆ. ಮಸೂದೆಯಲ್ಲಿ ಪ್ರಸ್ತಾಪಿಸಲಾಗಿರುವ ಅತ್ಯಂತ ಆಕ್ಷೇಪಾರ್ಹ ಅಂಶವೆಂದರೆ ಅರಣ್ಯಾಧಿಕಾರಿಗಳಿಗೆ ಅರೆ–ನ್ಯಾಯಿಕ ಅಧಿಕಾರವನ್ನು ನೀಡುವುದು ಮತ್ತು ಅರಣ್ಯ ಕಾನೂನು ಉಲ್ಲಂಘನೆಯನ್ನು ತಡೆಗಟ್ಟಲು ಅರಣ್ಯಾಧಿಕಾರಿಗಳಿಗೆ ಬಂದೂಕನ್ನು ಬಳಸುವ ಅಧಿಕಾರವನ್ನು ಕೊಡುವುದು. ಅನುಮಾನಿತರ ಮೇಲೆ ಗುಂಡು ಹಾರಿಸುವ, ಶೋಧ ನಡೆಸುವ, ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕುವ ಮತ್ತು ಬಂಧನಕ್ಕೆ ಒಳಪಡಿಸುವ ಅಧಿಕಾರವನ್ನು ಅರಣ್ಯಾಧಿಕಾರಿಗಳಿಗೆ ನೀಡಲಾಗುವುದು. ಈ ಮಸೂದೆ ಕಾಯ್ದೆಯಾಗಿ ಬಂದರೆ ಅರಣ್ಯವಾಸಿಗಳು ವಸಾಹತುಶಾಹಿ ಕಾಲದಿಂದ ಅನುಭವಿಸುತ್ತಾ ಬಂದಿರುವ ದೌರ್ಜನ್ಯಗಳಿಗೆ ಪುನಃ ಬಲಿಯಾಗುವ ಪರಿಸ್ಥಿತಿ ಬಂದೊದಗಲಿದೆ. ಇಂತಹ ದಮನಕಾರಿ ಅಂಶಗಳು ಕಾನೂನಿನಲ್ಲಿ ಸೇರ್ಪಡೆಯಾಗದಂತೆ ತಡೆಯಲು ಆದಿವಾಸಿಗಳು, ಇತರ ಅರಣ್ಯವಾಸಿಗಳು ಮತ್ತು ಎಲ್ಲಾ ಪ್ರಜಾಪ್ರಭುತ್ವವಾದಿಗಳು ಒಟ್ಟಾಗಿ ಸಮರಶೀಲ ಹೋರಾಟ ನಡೆಸಲು ಸಜ್ಜಾಗಬೇಕಾಗಿದೆ. ●

**ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯವು 37 ಉದ್ಯಮಗಳಿಗೆ ಕರ್ನಾಟಕ ಸರ್ಕಾರ ಕನಿಷ್ಟ ನಿಗದಿಗೊಳಿಸಿರುವ ಕನಿಷ್ಟ ವೇತನ ಅಧಿಸೂಚನೆಗಳನ್ನು ಎತ್ತಿ ಹಿಡಿದಿದೆ. ಸರ್ಕಾರ ನಿಗದಿಗೊಳಿಸಿದ ಕನಿಷ್ಟ ಕೂಲಿಯ ಅಧಿಸೂಚನೆಗಳನ್ನು ಪ್ರಶ್ನಿಸಿದ ಮಾಲಿಕರು ಮತ್ತು ಮಾಲಿಕರ ಸಂಘಟನೆಗಳು ಒಟ್ಟಾರೆ 1700ಕ್ಕೂ ಹೆಚ್ಚು ಮೇಲ್ಮನವಿಯನ್ನು ಸಲ್ಲಿಸಿದ್ದವು. ಈ ಎಲ್ಲಾ ಮೇಲ್ಮನವಿಗಳನ್ನು ಒಟ್ಟಾರೆ ವಿಚಾರಣೆ ನಡೆಸಿದ ಘನ ನ್ಯಾಯಾಲಯವು ನೀಡಿರುವ ತೀರ್ಪಿನಲ್ಲಿ ಕನಿಷ್ಟ ವೇತನವನ್ನು ಆಯಾಯ ಅಧಿಸೂಚನೆಗಳ ಅನ್ವಯ ಬಾಕಿಯನ್ನು 6% ರಷ್ಟು ಬಡ್ಡಿ ಸಮೇತ 8 ವಾರಗಳಲ್ಲಿ ಕಾರ್ಮಿಕರಿಗೆ ನೀಡುವಂತೆ ಆದೇಶಿಸಿದೆ ದೇಶದ ಕಾರ್ಮಿಕ ಚಳುವಳಿ 2016 ರಲ್ಲೆ ಅಂದಿನ ಬೆಲೆ ಏರಿಕೆಯ ಅಧಾರದಲ್ಲಿ ಲೆಕ್ಕ ಹಾಕಿದಾಗ ಕನಿಷ್ಟ ವೇತನ ಮಾಸಿಕ ರೂ. 26,000 ಬಂದಿತ್ತು. 7ನೇ ವೇತನ ಆಯೋಗವು ಸರ್ಕಾರಿ ನೌಕರರಿಗೆ ರೂ. 18,000 ಮಾಸಿಕ ಕನಿಷ್ಟ ಕೂಲಿ ನಿಗದಿಗೆ ಮಾಡಿದೆ. ಕೇರಳದ ಕಮ್ಯುನಿಷ್ಟ್ ಸರ್ಕಾರ ರೂ. 18,000 ಕನಿಷ್ಟ ಕೂಲಿಯನ್ನು ನಿಗದಿಗೊಳಿಸಿದೆ. ರಾಜ್ಯದಲ್ಲಿ ಈ ಕನಿಷ್ಟ ಕೂಲಿಗಾಗಿ ಕಳೆದ ಎರಡು ದಶಕಗಳಿಂದ ಸಿಐಟಿಯು ನಡೆಸಿದ ಸಮರಧೀರ ಚಳುವಳಿಗಳು, ಲಾಠಿ ಪ್ರಹಾರ, ಪೋಲೀಸ್ ಕೇಸುಗಳು, ಜೈಲು ವಾಸ ಅನುಭವಿಸಿದ ಸಾವಿರಾರು ಜನರ ಶ್ರಮದ ಫಲ ಈ ಮುನ್ನಡೆ, ಬೆಲೆ ಏರಿಕೆ ನಿಲ್ಲುವುದಿಲ್ಲ ಹಾಗಾಗಿ ಕಾರ್ಮಿಕರ ಕನಿಷ್ಟ ವೇತನದ ಹೆಚ್ಚಳದ ಬೇಡಿಕೆ ಸಹ...**

# ಕನಿಷ್ಟ ವೇತನ ಹೆಚ್ಚಳ: ಭರವಸೆ ಮೂಡಿಸಿದ ಹೈಕೋರ್ಟ್ ತೀರ್ಪು

## ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಜೊತೆ ಒಂದು ಸಂದರ್ಶನ

ಸಂದರ್ಶನ: ಸೈಯದ್ ಮುಜೀಬ್ – ಕೆ. ಮಹಂತೇಶ್



**ದೇಶದಲ್ಲಿ ಕನಿಷ್ಟ ವೇತನಕ್ಕಾಗಿ ಮುಷ್ಕರಗಳು**

ಸಿಐಟಿಯು ಕಳೆದೆರಡು ದಶಕಗಳಿಂದ ನಡೆಸುತ್ತಿರುವ ನಿರಂತರ ಸಮರಧೀರ ಹೋರಾಟಗಳ ಪ್ರಭಾವವು ಈ ಕನಿಷ್ಟ ವೇತನದ ನಿಗದಿ ಹಿಂದಿದೆ ಎಂಬುದನ್ನು ಅಲ್ಲಗಳೆಯಲಾಗದು.

ಮಾರುಕಟ್ಟೆಗಳಲ್ಲಿ ಜೀವನವಶ್ಯಕ ಎಲ್ಲಾ ವಸ್ತುಗಳು, ಸೇವೆಗಳು, ಆಹಾರ, ಶಿಕ್ಷಣ, ಆರೋಗ್ಯ, ವಸತಿ, ಬದುಕನ್ನು ಸಂಕಟಮಯವಾಗಿಸುತ್ತಿರುವಾಗ ಸಣ್ಣದೊಂದು ಪರಿಹಾರ ನೀಡಬಹುದೇ? 3 ವರ್ಷಗಳ ನಂತರ ಬಂದಿರುವ ಈ ತೀರ್ಪಿನ ಈ ಕುರಿತು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕನಿಷ್ಟ ವೇತನ ಸಲಹಾ ಮಂಡಳಿಯಲ್ಲಿ ಕಾರ್ಮಿಕ ಪ್ರತಿನಿಧಿಯು ಆಗಿರುವ ಸಂಗಾತಿ ಮೀನಾಕ್ಷಿ ಸುಂದರಂ ಅವರೊಂದಿಗೆ ಒಂದು ಸಂದರ್ಶನ.

**ಪ್ರಶ್ನೆ: ಕನಿಷ್ಟ ವೇತನ ನಿಗದಿ ಕುರಿತು ಸಿಐಟಿಯು ನಡೆಸಿದ ಪ್ರಯತ್ನಗಳೇನು?**

**ಮೀನಾಕ್ಷಿ ಸುಂದರಂ:** ಕನಿಷ್ಟ ವೇತನ ನಿಗದಿಗೆ ಕರ್ನಾಟಕದಲ್ಲಿ ಸಿಐಟಿಯು ಕಳೆದೆರಡು ದಶಕಗಳಿಂದ ನಿರಂತರ ಹೋರಾಟ ನಡೆಸುತ್ತ ಬಂದಿದೆ. ತಾಲ್ಲೂಕು ಕೇಂದ್ರ ಧರಣಿ, ಜಿಲ್ಲಾ ಕೇಂದ್ರಗಳಲ್ಲಿ ಪಿಕೇಟಿಂಗ್, ಲಾಠಿಚಾರ್ಜ್, ಪೋಲೀಸ್ ಕೇಸ್‌ಗಳು ಬಂಧನ. ವಿದಾನಸೌಧ ಮುತ್ತಿಗೆ ಹೀಗೆ ಬೇರೆ–ಬೇರೆ ಸರ್ಕಾರಗಳ ಆಡಳಿತ ಸಂದರ್ಭದಲ್ಲಿ ನಿರಂತರಒತ್ತಡ ಚಳುವಳಿಯನ್ನು ಸಿಐಟಿಯು ನಡೆಸುತ್ತ ಬಂದಿದೆ. ಸಿಐಟಿಯು ಎಲ್ಲಾ ಶೆಡ್ಯೂಲ್‌ನಲ್ಲಿರುವ ಕೈಗಾರಿಕೆಗಳಿಗೆ ಒಂದು ಸಮಾನದ ಕನಿಷ್ಟ ವೇತನವನ್ನು ನಿಗದಿಗೊಳಿಸಬೇಕು ಹಕ್ಕೊತ್ತಾಯ ಮಂಡಿಸುತ್ತಾ ಬಂದಿದೆ. ಇದರ ನಂತರದಲ್ಲಿ ಸರ್ಕಾರ ಎಲ್ಲಾ ಕೈಗಾರಿಕೆಗಳಿಗೂ ಒಂದೆ ಅಧಿಸೂಚನೆ ಬದಲಾಗಿ ಒಂದೆ ರೂಪದ ಉದ್ಯಮವಾರು ಅಧಿಸೂಚನೆಗಳನ್ನು ತರಲು ಆರಂಭಿಸಿತು. ಇದರ ಭಾಗವಾಗಿ 37 ಕ್ಕೂ ಹೆಚ್ಚು ಕೈಗಾರಿಕೆಗಳಿಗೆ ಕನಿಷ್ಟ ವೇತನವನ್ನು ನಿಗದಿಗೊಳಿಸಿ ಕರಡು ಅಧಿಸೂಚನೆ ಹೊರಡಿಸಲಾಗಿತ್ತು.

**ಪ್ರಶ್ನೆ: ಸರ್ಕಾರವು ಕನಿಷ್ಟ ವೇತನದ ನಿಗದಿಯಲ್ಲಿ ಕ್ರಮಬದ್ದತೆ ಅನುಸರಿಸಿದೆಯೇ?**

**ಮೀನಾಕ್ಷಿ ಸುಂದರಂ:** ಕನಿಷ್ಟ ವೇತನ ಕಾಯ್ದೆ; 1948ರ ಅನ್ವಯ ಮಾಲಿಕರು ಕಾರ್ಮಿಕ ಹಾಗೂ ಸರ್ಕಾರದ ಪ್ರತಿನಿಧಿಗಳು ಒಳಗೊಂಡ ತ್ರೀಪಕ್ಷೀಯ ಕನಿಷ್ಟ ವೇತನ ಸಲಹಾ ಮಂಡಳಿಯಲ್ಲಿ ವಿಸ್ತೃತವಾಗಿ ಚರ್ಚಿಸಿ ಸರ್ಕಾರಕ್ಕೆ ಕನಿಷ್ಟ ವೇತನದ ನಿಗದಿ ಶಿಫಾರಸ್ಸುಗಳನ್ನು ನೀಡಲಾಗಿತ್ತು. ಈ ಶಿಫಾರಸ್ಸುಗಳ ಆಧಾರದಲ್ಲಿ ಸರ್ಕಾರವು ಕರಡು ಅಧಿಸೂಚನೆ ಹೊರಡಿಸಿತ್ತು. ಇದಕ್ಕೆ ಮಾಲಿಕರು, ಕಾರ್ಮಿಕರು ಸಂಘಗಳು ಹಾಗೂ ಸಾರ್ವಜನಿಕರಿಂದಲೂ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ಇದಾದ ನಂತರವೇ ಸರ್ಕಾರ ಕನಿಷ್ಟ ಕೂಲಿಯ ಅಂತಿಮ ಅಧಿಸೂಚನೆಯನ್ನು ಹೊರಡಿಸಿದೆ ಹಾಗಾಗಿ ಕನಿಷ್ಟ ಕೂಲಿಯ ನಿಗಧಿಯಲ್ಲಿ ಕ್ರಮ ಬದ್ದತೆಯನ್ನು ಅನುಸರಿಸಲಾಗಿದೆ. ಆದರೆ ಮಾಲಕರು ಈ ಪ್ರಶ್ನೆಯನ್ನು ನ್ಯಾಯಾಲಯದಲ್ಲಿ ಸಕ್ರಮ ಬದ್ದತೆ ಅನುಸರಿಸಿಲ್ಲ ಎಂದು ವಾದ ಮಂಡಿಸಿದ್ದರು. ಆದರೆ ಘನ ನ್ಯಾಯಾಲಯವು ಮಾಲಿಕರ ಈ ವಾದದಲ್ಲಿ ಹುರುಳಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಹಾಗಾಗಿ ಕನಿಷ್ಟ ಕೂಲಿ ನಿಗದಿಯಲ್ಲಿ ಕ್ರಮ ಬದ್ದ ಅನುಸರಿಸುವುದನ್ನುಇದು ಎತ್ತಿ ಹಿಡಿದಂತಾಗಿದೆ.

**ಪ್ರಶ್ನೆ: ಕನಿಷ್ಟ ವೇತನ ನಿಗಧಿಯಲ್ಲಿ ಕಾರ್ಮಿಕ ಪರ ವಾದ ಏನು?**

**ಮೀನಾಕ್ಷಿ ಸುಂದರಂ:** ಕರ್ನಾಟಕ ರಾಜ್ಯದಲ್ಲಿ ಕನಿಷ್ಟ ವೇತನದ ನಿಗದಿಯಲ್ಲಿ ಹಿಂದೆ ಅಂದು ಮಂಡಳಿಯಲ್ಲಿ ಸಿಐಟಿಯು ಪ್ರತಿನಿಧಿಸಿ ಸದಸ್ಯರಾಗಿದ್ದ ಸಂಗಾತಿ ಪ್ರಸನ್ನಕುಮಾರ್ ಈ ಪ್ರಕ್ರಿಯೆ ಆರಂಭವಾದಾಗ ಅವರು ಪ್ರಭಲವಾಗಿ ಕಾರ್ಮಿಕರಿಗೆ ಬದುಕಲು ಯೋಗ್ಯ ಕೂಲಿಯನ್ನು ಆಹಾರ ಸಾಮಾಗ್ರಿಗಳ ಬೆಲೆ ಏರಿಕೆ, ಶಿಕ್ಷಣ, ಆರೋಗ್ಯ ವೆಚ್ಚ, ವಸತಿ, ಬಟ್ಟೆ, ಆಧಾರಿತವಾಗಿ ಈಗಾಗಲೇ ಸ್ಥಾಪಿತವಾಗಿರುವ ಭಾರತೀಯ ಕಾರ್ಮಿಕ ಸಮ್ಮೇಳನ (ಐಎಲ್‌ಸಿ) ಶಿಫಾರಸ್ಸುಗಳು ಅನ್ವಯ ಹಾಗೂ ಸುಪ್ರೀಂಕೋರ್ಟ್‌ನ ಮಾರ್ಗದರ್ಶಿ ಸೂತ್ರಗಳ ಅನ್ವಯ ಕನಿಷ್ಟ ವೇತನ ನಿಗದಿಗೆ ಪ್ರಬಲವಾದ ವಾದ ಮಂಡಿಸಿದ್ದರು. ಅದೇ ವಾದವನ್ನೇ ನಾವು ಮತ್ತು ಇತರೆ ಕಾರ್ಮಿಕ ಪ್ರತಿನಿಧಿಗಳು ಸಭೆಯಲ್ಲಿ ಪ್ರತಿಪಾದಿಸಿದೆವು.



2016ರ ಏಪ್ರಿಲ್ ಸಾಲಿಗೆ 18000 ಕನಿಷ್ಟ ವೇತನ ಹಾಗೂ ಬೆಲೆ ಏರಿಕೆ ಸೂಚ್ಯಂಕ ಅಂಕ ಒಂದಕ್ಕೆ 5 ಪೈಸೆಯಂತೆ ತುಟ್ಟಿಭತ್ಯೆಯನ್ನು ನಿಗದಿಗೊಳಿಸುವಂತೆ ಕನಿಷ್ಟ ವೇತನ ಸಲಹಾ ಮಂಡಳಿಯಲ್ಲಿ ನಮ್ಮ ವಾದವನ್ನು ಮಂಡಿಸಿದ್ದೇವು. ಆದರೆ ಈ ಹಕ್ಕೊತ್ತಾಯವನ್ನು ಕನಿಷ್ಟ ವೇತನ ಸಲಹಾ ಮಂಡಳಿ ಸಂಪೂರ್ಣವಾಗಿ ಒಪ್ಪಲಿಲ್ಲ.

ಒಂದು ಕುಟುಂಬ ಎಂದರೆ 3 ಘಟಕಗಳು ಎಂಬುದನ್ನು ಬದಲಿಗೆ ವಯಸ್ಸಾದ ತಂದೆ–ತಾಯಿಯರನ್ನು ನೋಡಿ ಕೊಳ್ಳುವ ಹೊಣೆಗಾರಿಕೆಗೆ ಬಂದಿರುವ ಹಿನ್ನಲೆಯಲ್ಲಿ ಕುಟುಂಬ ಅಂದರೆ 3.5 ಘಟಕಗಳ ಕುಟುಂಬವಾಗಿ ಪರಿಗಣಿಸಬೇಕು ಎಂದು ವಾದ ಮಾಡಲಾಯಿತು. ಇದನ್ನು ಒಪ್ಪಿಲ್ಲ.

ದೀರ್ಘಕಾಲ ಕೆಲಸ ಮಾಡುವ ಕಾರ್ಮಿಕರ ಸೇವಾವಧಿ ಪರಿಗಣಿಸಿ ಕಾರ್ಮಿಕರಿಗೆ ಸೇವಾ ಹಿರಿತನವನ್ನು ನೀಡುವಂತೆಯೆ ಒತ್ತಾಯಿಸಲಾಗಿ ಅಧಿಸೂಚನೆಯಲ್ಲಿ ಅದನ್ನು ಒಳಗೊಳ್ಳಲಾಗಿತ್ತು.

**ಪ್ರಶ್ನೆ: ಕನಿಷ್ಟ ವೇತನ ಹೆಚ್ಚಳಕ್ಕೆ ವಿರೋಧಿಸುತ್ತಿರುವ ಮಾಲಿಕರ ವಾದ ಏನು?**

**ಮೀನಾಕ್ಷಿ ಸುಂದರಂ:** ಕನಿಷ್ಟ ವೇತನ ಹೆಚ್ಚಳ ಆಗಬಾರದು ಎಂಬುದು ಮಾಲಿಕರ ವಾದ. ಹಾಗೆ ಹೆಚ್ಚು ಕನಿಷ್ಟ ವೇತನವನ್ನು ನಿಗದಿಗೊಳಿಸಿದರೆ ಕೈಗಾರಿಕೆಗಳು ಕರ್ನಾಟಕವನ್ನು ಬಿಟ್ಟು ಹೋಗುತ್ತವೆ ಎಂಬುದು ಅವರ ಬೆದರಿಕೆಯ ಮಾತುಗಳು ಆದರೆ ಇದು ಸರಿಯಾದುದಲ್ಲ.

**ಪ್ರಶ್ನೆ: ಕನಿಷ್ಟ ವೇತನದ ಅಧಿಸೂಚನೆಗಳು ನ್ಯಾಯಾಲಯಕ್ಕೆ ಹೋಗಿದ್ದು ಏಕೆ?**

**ಮೀನಾಕ್ಷಿ ಸುಂದರಂ:** ಕನಿಷ್ಟ ವೇತನ ಸಲಹಾ ಮಂಡಳಿಯಲ್ಲಿರುವ ಮಾಲಿಕರ, ಕಾರ್ಮಿಕ, ಸರ್ಕಾರ ಪ್ರತಿನಿಧಿಗಳು, ಎಲ್ಲರಿಗೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳುವ ಅವಕಾಶ ನೀಡಿ ಸರಕಾರಕ್ಕೆ ಶಿಫಾರಸ್ಸು ಕಳುಹಿಸಲಾಗಿತ್ತು. ಸರ್ಕಾರ ತನ್ನ ಸಂವಿಧಾನ ಅಧಿಕಾರ ಚಲಾಯಿಸಿ ಕನಿಷ್ಟ ವೇತನ ಅಧಿಸೂಚನೆ ಹೊರಡಿಸಿದೆ. ಆದರೆ ಮಾಲಿಕರು ತಮಗೆ ಕನಿಷ್ಟ ವೇತನ ಸಲಹಾ ಮಂಡಳಿಯಲ್ಲಿ ಅವಕಾಶ ನೀಡಿಲ್ಲ. ಸಲಹಾ ಮಂಡಳಿಯ ರಚನೆ ಅಸಮಾನತೆ ಇದೆ. ಎಂಬ ಆಧಾರ ರಹಿತ ಹಾಗೂ ವಾಸ್ತವ ಅಲ್ಲದೆ ಪ್ರಶ್ನೆಗಳ ಜೊತೆಗೆ ವೇತನದ ಹೆಚ್ಚಳ ವಿಪರೀತವಾಗಿದೆ ಎಂಬ ಆಧಾರದಲ್ಲಿ, ರಾಜ್ಯದ ವಿವಿಧ ಉದ್ಯಮಗಳಿಗೆ ಸಂಬಂಧಿಸಿದ ಮಾಲೀಕರ, ಮಾಲಿಕರ ಸಂಘಟನೆ, ಸೇರಿ ಒಟ್ಟಾರೆ 1700ಕ್ಕೂ ಹೆಚ್ಚು ಮೇಲ್ಮನವಿಗಳನ್ನು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿ, ಕನಿಷ್ಟ ವೇತನದ ಅಧಿಸೂಚನೆಯನ್ನು ವಜಾಗೊಳಿಸಲು ಕೋರಿದ್ದವು. ಹಾಗಾಗಿ ಈ ವಿಚಾರ ಕೋರ್ಟ್‌ಗೆ ಕೊಂಡು ಹೋದವರು ಮಾಲೀಕರೆ. ಕುಟುಂಬವನ್ನು 3 ಘಟಕಗಳಾಗಿ ಪರಿಗಣಿಸಬಾರದು ಕಾರಣ ಕುಟುಂಬದಲ್ಲಿ ಗಂಡ–ಹೆಂಡತಿ ಇಬ್ಬರೂ ದುಡಿಯುತ್ತಾರೆ ಹಾಗಾಗಿ ಕುಟುಂಬವನ್ನು 2 ಘಟಕವಾಗಿ ಪರಿಗಣಿಸಬೇಕು ಎಂದು ಮಾಲಕರು ನ್ಯಾಯಾಲಯದಲ್ಲಿ ವಾದಿಸಿದರು



**ಪ್ರಶ್ನೆ: ಕೋರ್ಟ್ ನೀಡಿದ ತೀರ್ಪು ಏನು?**

**ಮೀನಾಕ್ಷಿ ಸುಂದರಂ:** ನ್ಯಾಯಾಲಯವು ತೀರ್ಪಿನಲ್ಲಿ ಮಾಲಿಕರ ವಾದಗಳಾದ ಸಲಹ ಮಂಡಳಿ ರಚನೆಯಲ್ಲಿ ಸಮಾನ ಸಂಖ್ಯೆಯಲ್ಲಿ ಮಾಲಿಕರ ಪ್ರತಿನಿಧಿಗಳು ಇಲ್ಲ, ಮಾಲಿಕ ಪ್ರತಿನಿಧಿಗಳ ವಾದಕ್ಕೆ ಅವಕಾಶ ನೀಡಿಲ್ಲ ಎಂಬ ಅಂಶಗಳನ್ನು ತಿರಸ್ಕರಿಸಿದೆ.

ಕುಟುಂಬದಲ್ಲಿ ಗಂಡ–ಹೆಂಡತಿ ಇಬ್ಬರು ದುಡಿಯುತ್ತಾರೆ ಅನ್ನುವ ಮಾಲಿಕರ ವಾದಕ್ಕೆ ಪ್ರತಿಯಾಗಿ ಕಾರ್ಮಿಕ ಸಂಘಗಳ ಪರ ವಾದ ಮಂಡಿಸಿದ ವಕೀಲರು ಮಹಿಳೆಗೆ ಬಹಳಷ್ಟು ಕೈಗಾರಿಕೆಗಳಲ್ಲಿ ಉದ್ಯೋಗಕ್ಕೆ ಅವಕಾಶವೇ ಇಲ್ಲ. ಹಾಗೂ ಸಮಾಜದಲ್ಲಿ ಬಹುತೇಕ ಸಮಸಂಖ್ಯೆಯಲ್ಲಿರುವ ಮಹಿಳೆಯರಲ್ಲಿ ವೇತನಗಳಿಸುತ್ತಿರುವ ಮಹಿಳೆಯರ ಸಂಖ್ಯೆ ಪರಿಗಣಿಸಿದರೆ ಎಲ್ಲಾ ಮಹಿಳೆಯರು ಉದ್ಯೋಗಿಗಳಾಗಿಲ್ಲ ಎಂಬುದು ಸಾಬಿತಾಗುತ್ತದೆ. ಅಲ್ಲದೆ ಮಹಿಳೆಯು ದೇಶದ ಪ್ರಜೆಯಾಗಿ ಸಂವಿಧಾನ ಬದ್ದ ಹಕ್ಕು ಉಳ್ಳವರಾಗಿ ಆಕೆಗೆ ಉದ್ಯೋಗಸ್ಥಳಾಗುವ ಹಕ್ಕನ್ನು ಗೌರವಿಸುವಂತೆ ಅವಕಾಶ ಇರಬೇಕೆಂಬ ವಾದ ಮೂಲಕ ಘನ ನ್ಯಾಯಾಲಕ್ಕೆ ಮನವರಿಕೆ ಮಾಡಲಾಗಿತ್ತು.

**ಕರ್ನಾಟಕ ಉಚ್ಚ ನಾಯಾಲಯದ ನ್ಯಾಯ ಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಅವರು ದಿನಾಂಕ 29–3–2019 ನೀಡಿದ ತೀರ್ಪಿನ ಪ್ರಮುಖ ಅಂಶಗಳು:**

1. ನಿರಂತರ 10 ವರ್ಷಗಳಿಂದ ಹೆಚ್ಚು ಸೇವೆ ಸಲ್ಲಿಸಿದವರಿಗೆ ಪ್ರತಿ ಒಂದು ವರ್ಷದ ಸೇವೆಗೆ ಕನಿಷ್ಟ ಕೂಲಿಯ 1% ಹೆಚ್ಚಳ ನೀಡಬೇಕು ಎಂಬ ಅಧಿಸೂಚನೆಯ ಭಾಗವನ್ನು ವಜಾಗೊಳಿಸಿದೆ.
2. ಈ ಕನಿಷ್ಟ ಕೂಲಿ ಅಧಿಸೂಚನೆಗಳಿಗಿಂತ ಹೆಚ್ಚು ಕೂಲಿಯನ್ನು ನೀಡುತ್ತಿರುವ ಕಡೆಗಳಲ್ಲಿ ಅದನ್ನು ಮುಂದುವರಿಸಬೇಕು ಹಾಗು ಕಡಿಮೆಗೊಳಿಸದಂತೆ ಸಹ ನಿರ್ದೇಶಿಸಿದೆ.
3. ಕನಿಷ್ಟ ವೇತನ ಪಾವತಿ ಕಾಯ್ದೆ–1948ರ ಕಾಲಂ 2 (ಇ) ವ್ಯಾಕ್ಯನದ ಒಳಗೆ ಬಾರದೆಇರುವ ಮೇಲ್ವಿಚಾರಣೆ (ಸೂಪರ್ ವೈಜರ್) ಸಿಬ್ಬಂದಿಯು ಕನಿಷ್ಟ ವೇತನ ಪಡೆಯಲು ಇರುವ ಹಕ್ಕು ನಂ. 2 ಎತ್ತಿ ಹಿಡಿದಿದೆ ಅಲ್ಲದೆ ಈ ಸಂಬಂಧದ ತಕರಾರು ಇತ್ಯರ್ಥಕ್ಕೂ ಅಗತ್ಯ ವ್ಯವಸ್ಥೆಗಳ ರೂಪಿಸಲು ನಿರ್ದೇಶಿಸಿದೆ.
4. ಈ ಹಿಂದೆ ಅಧಿಸೂಚನೆಗಳ 75% ರಷ್ಟು ಕನಿಷ್ಟ ವೇತನ ನೀಡುವಂತೆ ನೀಡಿದ್ದ ಮಧ್ಯಂತರ ಆದೇಶವನ್ನು ರದ್ದುಗೊಳಿಸಿದೆ.
5. ಕನಿಷ್ಟ ವೇತನದ ಅಧಿಸೂಚನೆಯಂತೆ ನೀಡಬೇಕಾದ ಬಾಕಿಯನ್ನು 6% ಬಡ್ಡಿಯೊಂದಿಗೆ 8 ವಾರಗಳಲ್ಲಿ ಕಾರ್ಮಿಕರಿಗೆ ನೀಡಲು ನಿರ್ದೇಶಿಸಿದೆ.

**ಪುಟ 14 ಕ್ಕೆ**



## ಸಿಐಟಿಯು ಸುವರ್ಣ ಮಹೋತ್ಸವ ಕುರಿತ ಲೇಖನ

# ವರ್ಗ ಐಕ್ಯತೆ ವರ್ಗ ಸಂಘರ್ಷದ ಮೂಲಕ ಸಾಮಾಜಿಕ ಪರಿವರ್ತನೆ ವರ್ಗ ಹೋರಾಟದಿಂದ ಮಾತ್ರ ಶೋಷಣೆಗೆ ಮುಕ್ತಿ

ಇದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) 1970 ರಲ್ಲಿ ಸ್ಥಾಪನೆಯಾದಾಗ ಹೊಂದಿದ್ದ ಕಣ್ಣೋಟ. ಇಂತಹ ಸಿಐಟಿಯು ತನ್ನ ಸುವರ್ಣ ಮಹೋತ್ಸವ ಆಚರಣೆಯನ್ನು ಇದೇ ಮೇ 30 ರ ತನ್ನ ಸ್ಥಾಪನಾ ದಿನದಿಂದ ವರ್ಷ ಪೂರ್ತಿ ಆಚರಿಸಲಿದೆ.

ಮೇಲ್ಕಂಡ ಕಣ್ಣೋಟ ಕುರಿತು ಸಿಐಟಿಯುವಿನ ಸಂವಿಧಾನವು ಹೀಗೆ ಸ್ಪಷ್ಟವಾಗಿ ಹೇಳಿದೆ **"ಕಾರ್ಮಿಕ ವರ್ಗದ ಮೇಲಿನ ಶೋಷಣೆ ಕೊನೆಗೊಳ್ಳಬೇಕಾದರೆ ಎಲ್ಲಾ ಉತ್ಪಾದನಾ ಸಲಕರಣೆಗಳು ವಿತರಣೆ ಮತ್ತು ವಿನಿಮಯವನ್ನು ಸಾಮಾಜೀಕರಣಗೊಳಿಸಿ ಸಮಾಜವಾದಿ ಪ್ರಭುತ್ವ ಸ್ಥಾಪನೆಯಿಂದ ಮಾತ್ರ ಸಾಧ್ಯ ಎಂದು ಸಿಐಟಿಯುವಿನ ನಂಬಿಕೆಯಾಗಿದೆ. ಸಮಾಜವಾದದ ಆದರ್ಶಗಳನ್ನು ಎತ್ತಿಹಿಡಿಯುತ್ತಾ ಎಲ್ಲಾ ಶೋಷಣೆಗಳಿಂದ ಸಮಾಜವನ್ನು ಸಂಪೂರ್ಣವಾಗಿ ವಿಮೋಚನೆಗೊಳಿಸಲು ಸಿಐಟಿಯು ಬದ್ಧವಾಗಿದೆ."**

**ಮುಂದುವರೆದು 'ಯಾವುದೇ ಸಾಮಾಜಿಕ ಬದಲಾವಣೆಯನ್ನು ವರ್ಗ ಹೋರಾಟವಿಲ್ಲದೆ ತರಲು ಸಾಧ್ಯವಿಲ್ಲ ಎಂಬ ತತ್ವಕ್ಕೆ ಸಿಐಟಿಯು ದೃಢವಾಗಿ ಬದ್ದವಾಗಿರುತ್ತದೆ ಮತ್ತು ವರ್ಗ ಶಾಮೀಲು ಪಥದಲ್ಲಿ ಕಾರ್ಮಿಕ ವರ್ಗವನ್ನು ಕರೆದೊಯ್ಯುವ ಎಲ್ಲಾ ಪ್ರಯತ್ನಗಳನ್ನು ಸಿಐಟಿಯು ನಿರಂತರವಾಗಿ ತಿರಸ್ಕರಿಸುತ್ತದೆ.'**

**ಇಂತಹ ಕಣ್ಣೋಟ ಕಾಲದ ಪರೀಕ್ಷೆ ಮೀರಿ ನಿಂತಿದೆ. ಐವತ್ತು ವರ್ಷದ ಅನುಭವ ಸಿಐಟಿಯುವನ್ನು ಮತ್ತಷ್ಟು ಬಲಪಡಿಸುವ ದೃಡವಾದ ಕಣ್ಣೋಟದೊಂದಿಗೆ ಸಂವಿಧಾನಾತ್ಮಕ ಗುರಿಗಳನ್ನು ಸಾಧಿಸುವತ್ತ ಗಟ್ಟಿಗೊಳಿಸಿ ಮುನ್ನಡೆಯಬೇಕಿದೆ. ದೇಶದ ಕಾರ್ಮಿಕ** ದುಡಿಯುವ ವರ್ಗ ತನ್ನ ಬದುಕು ಮತ್ತು ಕೆಲಸ ಮಾಡುವ ಪರಿಸ್ಥಿತಿಯಲ್ಲಿ ತೀವ್ರ ಧಾಳಿಯಿಂದಾಗಿ ಮತ್ತು ಅತೃಪ್ತಿಯಿಂದ ದೇಶದ ಕುದಿಯುತ್ತಿದ್ದಂಥ ಸಂಕ್ರಮಣ ಕಾಲದಲ್ಲಿ ಸಿಐಟಿಯು ಜನ್ಮತಾಳಿದೆ. ಫ್ಯಾಕ್ಟರಿಗಳನ್ನು ಮುಚ್ಚುವುದು, ಕೆಲಸ ಕಳೆದುಕೊಳ್ಳುವುದು, ಗುತ್ತಿಗಿಕರಣದ ಹೆಚ್ಚಳ, ಸಾಮೂಹಿಕ ಚೌಕಾಸಿ ಹಕ್ಕುಗಳ ನಿರಾಕರಣೆ, ಸಾಮಾಜಿಕ ಸೌಲಭ್ಯಗಳನ್ನು ನೀಡದಿರುವುದು ಮುಂತಾದವು ಮುಷ್ಕರ, ಹೋರಾಟ ಮತ್ತು ಆಸ್ಫೋಟಗಳಿಗೆ ಕಾರಣವಾದವು.ಇವುಗಳು ದೇಶದ ಎಲ್ಲ ಕ್ಷೇತ್ರದಲ್ಲೂ ಕಾಣಿಸಿಕೊಂಡವು. ವ್ಯಾಟ್ ಕಾರ್ಮಿಕರು, ಇದ್ದಲು ಕಾರ್ಮಿಕರು ಉಕ್ಕು ಕಾರ್ಖಾನೆಗಳ ಕಾರ್ಮಿಕರು, ಟೆಕ್ಸ್‌ಟೈಲ್ ಸಾರಿಗೆ ಹೀಗೆ ಸಾವಿರಾರು ಇತರ ಕೈಗಾರಿಕೆಗಳ ಕಾರ್ಮಿಕರೆಲ್ಲ ಹೋರಾಟದ ಹಾದಿ ಹಿಡಿದಿದ್ದರು. ಅಂದಿನ ಅಗತ್ಯ ಅಂದರೆ ಪ್ರತಿ ಕೈಗಾರಿಕಾ ಕ್ಷೇತ್ರದ ಎಲ್ಲ ಕಾರ್ಮಿಕರನ್ನು ಒಗ್ಗೂಡಿಸಿ ಐಕ್ಯ ಸಾಧಿಸುವುದಾಗಿತ್ತು. ವಿವಿಧ ಕ್ಷೇತ್ರದ ಕಾರ್ಮಿಕರ ಒಗ್ಗಟ್ಟನ್ನು ಸಾಧಿಸಿ, ಒಟ್ಟಾಗಿ ಈ ಎಲ್ಲ ಧಾಳಿಗಳ ವಿರುದ್ಧ ಹೋರಾಟ ಕಟ್ಟಬೇಕಿತ್ತು. ಅಂದಿನ ಸರಕಾರದ ನೀತಿಗಳ ವಿರುದ್ಧ, ಅದರ ಶೋಷಣೆಯ ಆಡಳಿತ ನೀತಿಗಳ ವಿರುದ್ಧ ಸಂಘರ್ಷಕ್ಕೆ ಇಳಿಯುವ ಅನಿವಾರ್ಯತೆ ಇತ್ತು. ಆಕಾಲಘಟ್ಟದ ಅನಿವಾರ್ಯ ಬೇಡಿಕೆ ಎಂದರೆ ದೇಶದ ಇಡೀ ಕಾರ್ಮಿಕ ಸಂಘಟನೆಗಳನ್ನು ಒಗ್ಗೂಡಿಸಿ ಈ ಧಾಳಿಗಳ ಮತ್ತು ಈ ಶೋಷಣೆಯ ಸರಕಾರಿ ನೀತಿಗಳ ವಿರುದ್ಧ ಒಂದು ಪ್ರಬಲ ವರ್ಗ ಸಮರವನ್ನು ಸಾರುವುದೇ ಆಗಿತ್ತು.

ಆದರೆ ಅಂದು ಪ್ರಬಲವಾಗಿದ್ದ ಎಡಪಂಥೀಯ ಕಾರ್ಮಿಕ ಸಂಘಟನೆಗಳ ನಾಯಕತ್ವ ಎಐಟಿಯುಸಿಯ ಕೈಯಲಿತ್ತು.ಎಐಟಿಯುಸಿ ವರ್ಗ ಸಮರದ ಬದಲಿಗೆ, "ಎರಡು ಕಂಭ" ಗಳ ನೀತಿ ಎಂಬ ವ್ಯಾಖ್ಯಾನದ ಅಡಿ, ವರ್ಗ ಶಾಮೀಲಿನ ದಾರಿ ಹಿಡಿದಿತ್ತು. ವರ್ಗ ಸಂಘರ್ಷ ಎಂಬ ಪರಿಕಲ್ಪನೆಯನ್ನೇ ಅಪಹಾಸ್ಯಕ್ಕೆ ಗುರಿ ಮಾಡಲಾಯಿತು. ವರ್ಗ ಐಕ್ಯತೆ ಮತ್ತು ವರ್ಗ ಸಂಘರ್ಷದ ಪರವಾಗಿದ್ದ ಎಐಟಿಯುಸಿಯ ಕೆಲವು ನಾಯಕರುಗಳ ಗುಂಪಿಗೆ ತೀವ್ರ ಕಿರುಕುಳ ನೀಡಲಾಯಿತು. ಅವರುಗಳನ್ನು ಬಲಿಪಶುಗಳನ್ನಾಗಿ ಮಾಡಿ, ಪ್ರಜಾತಂತ್ರಕ್ಕೆ ವಿರುದ್ಧವಾದ ಮತ್ತು ಅಮಾನತ್ತುಗಳ ಮೂಲಕ "ಅವರುಗಳನ್ನು ಸ್ಥಾನಗಳಿಂದ ಕಿತ್ತು ಹಾಕಲಾಯಿತು. ವರ್ಗ ಸಂಘರ್ಷವನ್ನು ಬೆಂಬಲಿಸಿದ ಸಂಘಟನೆಗಳಿಗೆ ಮಾನ್ಯತೆ ನಿರಾಕರಿಸಲಾಯಿತು. ಮತ್ತು ಈಗಾಗಲೇ ಸಂಯೋಜನೆಗೊಂಡಿದ್ದ ಸಂಘಗಳಿಗೆ ಮಾನ್ಯತೆ ನೀಡದೆ ಕಿತ್ತು ಹಾಕಲಾಯಿತು. ಸಂಘಟನೆಯನ್ನು ವರ್ಗಶಾಮೀಲು ಮತ್ತು ಆಳುವ ವರ್ಗದ ಜೊತೆಯ ಒಪ್ಪಂದಗಳ ಮಾರ್ಗದಿಂದ ಆಚೆ ತರಲು ಹತ್ತು ವರ್ಷಗಳ ಕಾಲ ನಡೆಸಿದ ಸತತ ಪ್ರಯತ್ನಗಳೆಲ್ಲ ವಿಫಲವಾದವು. "ಆಗ ದೇಶದ ಕಾರ್ಮಿಕ ಸಂಘಟನೆಗಳನ್ನು, ಸರಕಾರದ ಶೋಷಕ ನೀತಿಗಳ ವಿರುದ್ಧ ಐಕ್ಯ ಮತ್ಯದ ಹೋರಾಟದ ಮಾರ್ಗಕ್ಕೆ ತರಲು, ಒಂದು ನೂತನ ಕಾರ್ಮಿಕ ಸಂಘಟನೆಗಳ ಕೇಂದ್ರದ ಅಗತ್ಯ ಮತ್ತು ಬೇಡಿಕೆ ಸೃಷ್ಟಿಯಾಗಿತ್ತು. ಹೀಗಾಗಿಯೇ "ಐಕ್ಯತೆ ಮತ್ತು ಹೋರಾಟ" ಎನ್ನುವ ಆರ್ಭಟಿಸುವ ಘೋಷವಾಕ್ಯದೊಂದಿಗೆ "ಸಿಐಟಿಯು"ವಿನ ಉದಯವಾಯಿತು. ಇದರ ಮೊದಲ ಅಧ್ಯಕ್ಷರಾಗಿ ಬಿ.ಟಿ. ರಣದಿವೆ ಮೊದಲ ಮತ್ತು ಮೊದಲ ಪ್ರಧಾನ ಕಾರ್ಯದರ್ಶಿ ಆಗಿ ಪಿ.ರಾಮಮೂರ್ತಿ ಚುನಾಯಿತರಾದರು.

ಸಿಐಟಿಯು ಪ್ರಾರಂಭವಾದ ಕೆಲವೇ ದಿನಗಳಲ್ಲಿ ಅದನ್ನು ಪ್ರತ್ಯೇಕಿಸಿ, ಒಂಟಿಯಾಗಿಸುವ ಮತ್ತು ಅದರ "ಐಕ್ಯತೆ" ಪರಿಕಲ್ಪನೆಯನ್ನು ಪರಿಹಾಸ್ಯ ಮಾಡುವ ಎಲ್ಲ ಶಕ್ತಿಗಳಿಗೂ "ಸಿಐಟಿಯು" ತನ್ನ ಕಾರ್ಯಾಚರಣೆಯ ಮೂಲಕ ಸೂಕ್ತ ಉತ್ತರ ನೀಡಿತು.

- ಸಿಐಟಿಯು ಸ್ಥಾಪನೆ ಆದ ಕೆಲವೇ ಸಮಯದಲ್ಲಿ, ಕೇಂದ್ರ ಕಾರ್ಮಿಕ ಸಚಿವರ ಚಿತಾವಣೆ ಮೇರೆಗೆ, ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳ ಸಮಿತಿ (ಎನ್‌ಸಿಟಿಯು) ಯನ್ನು ಸರಕಾರದ ನೀತಿಗಳನ್ನು ಬೆಂಬಲಿಸಲೆಂದೇ ರಚಿಸಲಾಯಿತು. ಇದರಲ್ಲಿ ಐಎನ್‌ಟಿಯುಸಿ, ಎಐಟಿಯುಸಿ ಮತ್ತು ಹೆಚ್‌ಎಮ್‌ಎಸ್ ಸೇರ್ಪಡೆಯಾಗಿದ್ದವು. ಸಿಐಟಿಯುನ "ಕಾರ್ಯತತ್ಪರತೆಯಿಂದಾಗಿ, ಇತರ ಕಾರ್ಮಿಕ ಸಂಘಟನೆಗಳು ಮತ್ತು ಕೈಗಾರಿಕಾ ಕಾರ್ಮಿಕ ಒಕ್ಕೂಟಗಳನ್ನು ಒಗ್ಗೂಡಿಸಿ, ಯುಸಿಟಿಯು (ಕಾರ್ಮಿಕ ಸಂಘಟನೆಗಳ ಐಕ್ಯ ಸಮಿತಿ) ವನ್ನು ರಚಿಸಲಾಯಿತು. ಇದು ಮುಖ್ಯವಾಗಿ ಸರಕಾರದ ನೀತಿಗಳಾದ ವೇತನ ಸ್ಥಗಿತ, ಕಡ್ಡಾಯ ಠೇವಣಿ ಯೋಜನೆ ಇತ್ಯಾದಿಗಳ ವಿರುದ್ಧ ಹೋರಾಟವನ್ನು ನಿರ್ವಹಿಸಿತು.
- ಆಳುವ ವರ್ಗ ಮತ್ತು ಆಳುವ ರಾಜಕಾರಣ ತನ್ನ ಪ್ರತ್ಯೇಕಗೊಳಿಸುವ ಮತ್ತು ಸಂಘಟನೆಗಳನ್ನು ಒಂಟಿಯಾಗಿಸುವ ತಂತ್ರಗಳನ್ನು ಎನ್‌ಸಿಟಿಯು ಮೂಲಕ ಜಾರಿಗೊಳಿಸಲು ಯತ್ನಿಸಿತು. ಆದರೆ ಈ ಕ್ರಮಗಳು ಹೆಚ್ಚು ಕಾಲ ಮುಂದುವರೆಯಲಿಲ್ಲ. ಏಕೆಂದರೆ ಇದರ ವಿರುದ್ಧ ಸಿಐಟಿಯು ಕೈಗಾರಿಕೆಗಳಲ್ಲಿ ಮತ್ತು ಸೇವಾ ಸಂಸ್ಥೆಯಲ್ಲಿ ಇದ್ದ ಇತರ ಶಕ್ತಿಗಳನ್ನು ಒಗ್ಗೂಡಿಸಿ, ಹೋರಾಟಗಳನ್ನು ಸಂಯುಕ್ತವಾಗಿ ಮತ್ತು ಆಕ್ರಮಣಕಾರಿಯಾಗಿ ಯಶಸ್ವಿಯಾಗಿ ಯೋಜಿಸಿತ್ತು.
- ಕೇವಲ 3 ವರ್ಷಗಳಲ್ಲಿ ಎನ್‌ಸಿಟಿಯು ಛಿದ್ರವಾಯಿತು. ಮತ್ತು ಸಿಐಟಿಯುವಿನ ನಿರಂತರವಾದ, ಕಾರ್ಯಾಚರಣೆ ಮತ್ತು ಅದರ ಮಧ್ಯ ಪ್ರವೇಶ– ಮುಂತಾದವುಗಳ ಮೂಲಕ ದೇಶದಲ್ಲೂ ಹೊಸದಾದ ಒಡನಾಟ ಮತ್ತು ಸಂಬಂಧಗಳು ಬೆಳೆಯಲಾರಂಭಿಸಿದ್ದು, ಇವು ವಿವಿಧ ಕೈಗಾರಿಕೆಗಳು ಮತ್ತು ಸೇವಾ ಸಂಸ್ಥೆಗಳಲ್ಲಿ ಐಕ್ಯವಾದ ಹೋರಾಟಗಳು ವರ್ಗ ಶಾಮೀಲು ನೀತಿಗಳ ವಿರುದ್ಧ ಸೃಷ್ಟಿ ಯಾಗ ತೊಡಗಿದವು.
- ಸಿಐಟಿಯುವಿನ ಸ್ಥಾಪನೆಯಾದ ಕೆಲವೇ ದಿನಗಳಲ್ಲಿ, ಮೂಡಿದ ಐಕ್ಯ ಹೋರಾಟಗಳಲ್ಲಿ ಬಹುಮುಖ್ಯವಾದ್ದು 1974ರಲ್ಲಿ ದೇಶದ ಉದ್ದಗಲಕ್ಕೂ ನಡೆದ ರೈಲ್ವೇ ಕಾರ್ಮಿಕರ ಮುಷ್ಕರ. ಈ ಸಂಘರ್ಷ ದೇಶದ ಇಡೀ ಕಾರ್ಮಿಕ ವರ್ಗವನ್ನೇ ವಿದ್ಯುತ್ ಸಂಚಲನಗೊಳಿಸಿತು. ಇಪ್ಪತ್ತು ದಿನಗಳ ಈ ಮುಷ್ಕರದಲ್ಲಿ ಕಾರ್ಮಿಕರು ಅಮಾನುಷವಾದ ದಮನವನ್ನು ಧೈರ್ಯದಿಂದ ಎದುರಿಸಿದರು ಮತ್ತು ಬಲಿಪಶುಗಳಾದರು. ಇವೆಲ್ಲದರ ಮೂಲಕ ಕಾರ್ಮಿಕ ವರ್ಗಕ್ಕೆ ಇಂದಿಗೂ ಸ್ಪೂರ್ತಿಯ ಆ ಮುಷ್ಕರ ಇಂದಿಗೂ ಸ್ಪೂರ್ತಿಯ ಸೆಲೆಯಾಗಿದೆ. ರೈಲ್ವೆ ಕಾರ್ಮಿಕರನ್ನು ದೇಶದ ಸಂಯುಕ್ತ ಕಾರ್ಮಿಕ ಪಥದತ್ತ ತರುವಲ್ಲಿ ಸಿಐಟಿಯು ಬಹು ಮುಖ್ಯ ಪಾತ್ರವನ್ನು ವಹಿಸಿತ್ತು. ಈ ಐತಿಹಾಸಿಕ ಚಳುವಳಿಯ ನೇತೃತ್ವ ವಹಿಸಿದ್ದು ಎನ್‌ಸಿಸಿಆರ್‌ಎಸ್ (ರೈಲ್ವೆ ಕಾರ್ಮಿಕರ ಹೋರಾಟ ರಾಷ್ಟ್ರೀಯ ಸಮನ್ವಯ ಸಮಿತಿ) ಯಲ್ಲಿ ಸಿಐಟಿಯುವನ್ನು ಒಳಗೊಂಡ ಎಲ್ಲ ಪ್ರಧಾನ ಕೇಂದ್ರ ಕಾರ್ಮಿಕ ಸಂಘಟನೆಗಳೂ ಸೇರಿದ್ದವು. ಐಎನ್‌ಟಿಯುಸಿ ಹೊರತಾಗಿ, ಸಿಐಟಿಯು ಈ ಹೋರಾಟದಲ್ಲಿ ಬಲಿಪಶುಗಳಾದ ಕಾರ್ಮಿಕ ಪರವಾಗಿ ಕಾನೂನು ನೆರವು ಬೆಂಬಲ ಸೂಚಿಸುವ ಕಾರ್ಯಕ್ರಮಗಳ ಸಂಘಟನೆ ಮತ್ತು ಇತರ ಎಲ್ಲ ರೀತಿಯ ಪರಿಹಾರ ಮತ್ತು ಸಹಾಯವನ್ನು ನೀಡಿತ್ತು. ಇದಲ್ಲದೆ ತುರ್ತು ಪರಿಸ್ಥಿತಿಯಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳ ಮೇಲೆ ತೀವ್ರ ಧಾಳಿ ಮತ್ತು ದಮನಗಳು ನಡೆದವು. ಆದರೂ ಕ್ರಿಯಾತ್ಮಕವಾಗಿ ಜನತೆಯ ಹೋರಾಟಗಳನ್ನು ಬೆಂಬಲಿಸುತ್ತಾ, ಐ.ಎಲ್.ಓ.ಗೆ ದೂರು ನೀಡುವುದರ ಮೂಲಕ ಕಾರ್ಮಿಕ ಸಂಘಟನೆಯ ಹಕ್ಕುಗಳ ಮೇಲಿನ ಸರಕಾರದ ಆಕ್ರಮಣಗಳನ್ನು ಸಿಐಟಿಯು ಬಯಲಿಗೆ ಎಳೆಯಿತು.



- ಎರಡನೇ ಪ್ರಮುಖ ಘಟನೆ ಎಂದರೆ ಕೇಂದ್ರದಲ್ಲಿ ಜನತಾಪಕ್ಷ ಆಡಳಿತಕ್ಕೆ ಬಂದಾಗ, 1978ರಲ್ಲಿ ತರಲು ಹವಣಿಸಿದ ಕುಖ್ಯಾತ "ಕೈಗಾರಿಕಾ ಸಂಬಂಧ ಮಸೂದೆ, 78" ರ ವಿರುದ್ಧ ದೇಶಾದ್ಯಾಂತ ಕಟ್ಟಲಾದ ಪ್ರತಿಭಟನಾ ಹೋರಾಟ, ಇದರಿಂದಾಗಿ ಈ ಮಸೂದೆಯನ್ನು ಕೊನೆಗೆ ಇತಿಹಾಸದ ಕಸದ ಬುಟ್ಟಿಗೆ ಎಸೆಯಲಾಯಿತು. ಈ ಪ್ರಕ್ರಿಯೆಯಲ್ಲಿ "ಕಾರ್ಮಿಕ ಸಂಘಟನೆಗಳ ಪ್ರಚಾರ ಸಮಿತಿಯನ್ನು 1981 ರ ಕಾಂಗ್ರೆಸ್ ಆಡಳಿತದಲ್ಲಿದ್ದಾಗ ಸ್ಥಾಪಿಸಲಾಯಿತು. ಇದರಲ್ಲಿ ಐಎನ್‌ಟಿಯುಸಿ ಹೊರತು ಪಡಿಸಿ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸ್ವಾಯತ್ತ ಒಕ್ಕೂಟಗಳು ಸೇರಿದ್ದವು.
- ಮೂರನೇ ಪ್ರಮುಖ ಘಟನೆ ಎಂದರೆ, ಐಎನ್‌ಟಿಯುಸಿ ಹೊರತು ಪಡಿಸಿ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು 1982ರ ಜನವರಿ, 19ರಂದು ಪಪ್ರಥಮವಾಗಿ ಯಶಸ್ವಿಯಾಗಿ ಕೈಗೊಂಡ ಸಾರ್ವತ್ರಿಕ ಮುಷ್ಕರ. ಈ ಮುಷ್ಕರದಲ್ಲಿ ರೈತರು ಮತ್ತು ಕೃಷಿ ಕಾರ್ಮಿಕರ ಬೇಡಿಕೆಗಳನ್ನು ಮುನ್ನಲೆಗೆ ತರಲಾಯಿತು. ದೇಶದ ಹಲವು ಕಡೆ ಅವರುಗಳು ಕ್ರಿಯಾತ್ಮಕವಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಪೋಲೀಸರು ನಡೆಸಿದ ಗೋಲಿಬಾರ್ ಗೆ ಕೃಷಿ ಕಾರ್ಮಿಕರನ್ನು ಒಳಗೊಂಡು 10 ಜನ ಕಾರ್ಮಿಕರು ಮೃತಪಟ್ಟರು.
- ಸಾರ್ವಜನಿಕ ವಲಯದ ಘಟಕಗಳ (ಪಿ.ಎಸ್.ಯು) ಸಂಘಟನೆಗಳನ್ನು ಐಕ್ಯ ಸಂಘರ್ಷದ ವೇದಿಕೆಯ ಮೂಲಕ ಒಗ್ಗೂಡಿಸಿದ್ದಲ್ಲದೆ ಸಿಪಿಎಸ್‌ಟಿಯು, ಅಂದರೆ ಸಾರ್ವಜನಿಕ ವಲಯ ಉದ್ಯಮಗಳ ಕಾರ್ಮಿಕ ಸಂಘಗಳ ಸಮಿತಿಯ ಸ್ಥಾಪನೆಯಲ್ಲೂ ಸಿಐಟಿಯು ಮುಂಚೂಣಿಯ ಪಾತ್ರವಹಿಸಿತು.
- ನವ ಉದಾರೀಕರಣ ಸುಧಾರಣೆಗಳು ದೇಶದಲ್ಲಿ ಜಾರಿಯಾದಗಿನಿಂದ ಈ ನೀತಿಗಳ ವಿರುದ್ಧ ಸಿಐಟಿಯು ದೇಶದ ಇಡೀ ಕಾರ್ಮಿಕ ಚಳುವಳಿಯನ್ನು ಒಗ್ಗೂಡಿಸುವ ಯತ್ನಗಳನ್ನು ಮಾಡಿದೆ. ಕೇಂದ್ರ ಕಾರ್ಮಿಕ ಸಂಘಟನೆಗಳನ್ನು ಮತ್ತು ಸ್ವತಂತ್ರ ಕೈಗಾರಿಕಾ ಸ್ವಾಯುತ್ತ ಒಕ್ಕೂಟಗಳನ್ನ ಸಂಯುಕ್ತ ವೇದಿಕೆಯ ಮೂಲಕ ಐಕ್ಯ ಹೋರಾಟಗಳನ್ನು ಬೆಳೆದು ಬರಲು ಸಿಐಟಿಯು ಸಾಕಷ್ಟು ಮತುವರ್ಜಿ ವಹಿಸಿದೆ ಮತ್ತು ಕಾರ್ಮಿಕ ಸಂಘಟನೆಗಳ ಪ್ರಾಯೋಜಕ ಸಮಿತಿಯ ನೇತೃತ್ವದಲ್ಲಿ ನಡೆಸಲಾದ ಹಲವು ಹೋರಾಟಗಳಿಗೆ ನಾಯಕತ್ವ ವಹಿಸಿದೆ. 2009 ರಲ್ಲಿ ಪಪ್ರಥಮಬಾರಿ, ಐಎನ್‌ಟಿಯುಸಿ ಮತ್ತು ಬಿಎಂಎಸ್ ಸೇರಿದಂತೆ ಎಲ್ಲ ಕೇಂದ್ರ ಸಂಘಟನೆಗಳನ್ನು ಒಂದು ಸಾರ್ವತ್ರಿಕ ವೇದಿಕೆಯ ಮೇಲೆ ಸೇರಿಸಲಾಯಿತು. ಜೆಸಿಟಿಯು ಸ್ಥಾಪನೆಗೆ ನಾಂದಿಯಾಡಿತು ಇದರ ನಾಯಕತ್ವದಲ್ಲೇ ದೇಶಾದ್ಯಂತದ ಮೂರು ಸಾರ್ವತ್ರಿಕ ಮುಷ್ಕರವನ್ನು ಹೂಡಿತು, ಇದಲ್ಲದೆ ಫೆ. 2013 ರಲ್ಲಿ ಎರಡು ದಿನಗಳ ಸಾರ್ವತ್ರಿಕ ಮುಷ್ಕರವನ್ನು ಆಚರಿಸಲಾಯಿತು. ಇದರಲ್ಲೂ ಸಿಐಟಿಯು ಮಹತ್ವದ ಪಾತ್ರ ನಿರ್ವಹಿಸಿತು.

ಆದರೆ ಬಿಜೆಪಿ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ತಕ್ಷಣ, ಬಿಎಂಎಸ್ ಜಂಟಿ ಕಾರ್ಮಿಕ ಸಂಘಟನೆಗಳ ಚಳುವಳಿಗೆ ದ್ರೋಹ ಬಗೆದು,

ಪುಟ 14 ಕ್ಕೆ

**ಹಲ್ಲಿಯಲ್ಲಿ ವಿಷವಿದೆಯೇ?**

ಈಗ ನೀವು ಈ ರೀತಿಯಾಗಿ ಒಂದು ಸಣ್ಣ ಘಟನೆಯನ್ನು ಕಲ್ಪಿಸಿಕೊಳ್ಳಿ.

ನಗರದಿಂದ ದೂರವಿರುವ, ಹತ್ತಿರದಲ್ಲಿ ಆಸ್ಪತ್ರೆ ಸೌಕರ್ಯಗಳಿಲ್ಲದ ಹಳ್ಳಿಗಾಡಿನ ಶಾಲೆಯೊಂದರಲ್ಲಿ ನೀವು ಶಿಕ್ಷಕ ವೃತ್ತಿ ಮಾಡುತ್ತಿದ್ದೀರಿ. ಶಾಲೆಯ ಮುಖ್ಯೋಪಾಧ್ಯಾಯರು ರಜೆಯಲ್ಲಿರುವುದರಿಂದ ಅವರ ಜವಾಬ್ದಾರಿಯು ನಿಮ್ಮ ಮೇಲೆ ಬಂದಿದೆ. ನೀವು ಅಲ್ಲಿ ಉಸ್ತುವಾರಿ ಮುಖ್ಯೋಪಾಧ್ಯಾಯರು. ಮಧ್ಯಾಹ್ನ ಮಕ್ಕಳೆಲ್ಲಾ ಊಟ ಮಾಡಿ ಮತ್ತೆ ತರಗತಿಯಲ್ಲಿ ಸೇರಿದ್ದಾರೆ. ಅಯ್ಯಯ್ಯೋ!! ಇಷ್ಟೆಲ್ಲಾ ಆದ ಮೇಲೆ ಈಗ ಅಡುಗೆ ಪಾತ್ರೆಯ ತಳದಲ್ಲಿ ಉಳಿದಿರುವ ಪಲಾವ್‌ನಲ್ಲಿ ಹಲ್ಲಿಯೊಂದು ಬೆಂದು ಹೋಗಿದ್ದು ಅದರ ಬೆಂದುಹೋದ ದೇಹ ಸಿಕ್ಕಿದೆ.!! ನೀವು ಮತ್ತೆ ಮತ್ತೆ ನೋಡಿ ಖಚಿತ ಮಾಡಿಕೊಳ್ಳುತ್ತೀರಿ ಅದು ಹಲ್ಲಿಯೋ, ಬೇರೆನಾದರೂ ಇರಬಹುದೋ? ಎಂದು. ಉಹುಂ– ನಿಮ್ಮ ದುರದೃಷ್ಟಕ್ಕೆ ಅದು ಹಲ್ಲಿಯೇ ಆಗಿದೆ. ಈಗ ನೀವು ಏನು ಮಾಡುವಿರಿ.?

ಓಹ್..ಬೇಗ.. ತತ್‌ಕ್ಷಣ ಹತ್ತಿರದ ಜಿಲ್ಲೆಯ ದೊಡ್ಡಾಸ್ಪತ್ರೆಗೆ ಫೋನ್ ಮಾಡುತ್ತೀರಿ. ಸುಮಾರು 400 ಹೈಸ್ಕೂಲು ಮಕ್ಕಳು ವಿಷಾಹಾರ ಸೇವಿಸಿ ಸುಸ್ತಾಗಿದ್ದಾರೆ. ಅವರ ಪ್ರಾಣ ಉಳಿಸುವ ಔಷಧ ಮತ್ತು ಚಿಕಿತ್ಸೆಗೆ ತುರ್ತು ವ್ಯವಸ್ಥೆ ಮಾಡಿ ಅಂತ ಮೊದಲು ವಿನಂತಿಸಿಕೊಳ್ಳುತ್ತೀರಿ. ಶಾಲೆಗೆ ತುರ್ತಾಗಿ ಆಂಬುಲೆನ್ಸ್ ವಾಹನ ಕಳುಹಿಸುವುದಕ್ಕೆ ಕೇಳುತ್ತೀರಿ. ಮತ್ತೆ ಎಲ್ಲ ಮಕ್ಕಳು ತಿಂದಿರುವ ಅನ್ನವನ್ನೆಲ್ಲಾ ವಾಂತಿ ಮಾಡಿಸಲು ಉಪಾಯಗಳನ್ನು ಹೇಳಿ ಶಿಕ್ಷಕರನ್ನು ಎಲ್ಲ ತರಗತಿಗೂ ತಕ್ಷಣ ಕಳುಹಿಸುತ್ತೀರಿ....

ಆಮೇಲೆ? ಮುಂದಿನದನ್ನು ಸ್ವಲ್ಪ ಕಲ್ಪಿಸಿಕೊಳ್ಳೋಣ. ನಿಮ್ಮ ಹಾಗೇ ಶಿಕ್ಷಕರು ಸಹ ತುಂಬಾ ಜಾಣ್ಮೆಯಿಂದ ಕರ್ತವ್ಯ ನಿರ್ವಹಿಸಿದರು. ಮಕ್ಕಳಿಗೆಲ್ಲಾ ಸಾಧ್ಯವಾದಷ್ಟು ವಾಂತಿ ಮಾಡಿಸಿದರು. ಶಾಲೆಗೆ ಆಂಬುಲೆನ್ಸ್ ಕೂಡ ಬೇಗ ಬಂದಿತು. ತುಂಬಾ ಸುಸ್ತಾದ ಮಕ್ಕಳನ್ನು ತುರ್ತಾಗಿ ಕಳುಹಿಸಿಕೊಡಲಾಯಿತು. ಊರುಬಳಿ ಹಾದು ಹೋಗುವ ಬಸ್ಸುಗಳನ್ನೇ ಊರವರು ತಡೆಗಟ್ಟಿ ವಿಷಯ ವಿವರಿಸಿದರು. ಪ್ರಯಾಣಿಕರೂ ಸಹಕರಿಸಿದರು. ಮಕ್ಕಳನ್ನು ಕರೆದುಕೊಂಡು ಆಸ್ಪತ್ರೆಗೆ ಹೋಗಿ ಸೇರಿಸಲು ಕೈಜೋಡಿಸಿದರು. ಹೋದ ಕೂಡಲೇ ಆಸ್ಪತ್ರೆಯ ವೈದ್ಯರು ಔಷಧೋಪಚಾರ ಮಾಡಿದರು. ಕೆಲವರಿಗೆ ಸೂಜಿಮದ್ದು ಚುಚ್ಚಿದರು. ಎಲ್ಲರಿಗೂ ಮಾತ್ರೆಗಳನ್ನು ಕೊಟ್ಟರು. ತುಂಬಾ ಸುಸ್ತಾದವರಿಗೆ ಗ್ಲೂಕೋಸ್ ಕೂಡ ಹಾಕಿದರು. ಆಸ್ಪತ್ರೆಯ ಮುಖ್ಯವೈದ್ಯರೇ ಉಸ್ತುವಾರಿಗೆ ನಿಂತಿದ್ದರು. ನಿಮ್ಮ 'ಮನೆದೇವರ ಕೃಪೆ'. ಅಂತೂ ಕೊನೆಗೆ ಯಾರಿಗೂ ಅಪಾಯವಿಲ್ಲದಂತೆ ಎಲ್ಲ ಮಕ್ಕಳೂ ಸುರಕ್ಷಿತವಾಗಿ ಮಕ್ಕಳು ಮನೆಗೆ ಮರಳಿದವು.

ಬೇಷ್!! ಭಲೇ ಬೇಷ್!!! ಜವಾಬ್ದಾರಿಯುತ ಮುಖ್ಯೋಪಾಧ್ಯಾಯರು ಬಾರಿ ಅನಾಹುತವೊಂದನ್ನು ತಪ್ಪಿಸಲು ಏನು ಮಾಡಬಹುದಿತ್ತೋ ಎಲ್ಲವನ್ನೂ ನೀವು ತುಂಬಾ ಹೊಣೆಗಾರಿಕೆಯಿಂದ ಮಾಡಿದಿರಿ.

ಇಷ್ಟಕ್ಕೆ ನಿಮ್ಮ ಬೆನ್ನು ನೀವು ತಟ್ಟಿಕೊಳ್ಳಬೇಡಿ. ಇನ್ನೂ ಮುಖ್ಯವಾದ ವಿಷಯವಿದೆ. ಈಗ ಜವಾಬ್ದಾರಿ ಇರುವ ಶಿಕ್ಷಕರಾಗಿ ನೀವು ಮುಖ್ಯ ಒಂದು ಕರ್ತವ್ಯ ಮಾಡಿಲ್ಲ ಅಂತಲೂ ನಿಮ್ಮ ಮೇಲೆ ಆರೋಪಿಸಬಹುದು. ಅದೇನೆಂದರೆ 'ಹಲ್ಲಿಯಲ್ಲಿ ವಿಷ ಇಲ್ಲ' ಎಂಬ ಸರಳ ಸತ್ಯವನ್ನು ನೀವು ತಿಳಿದುಕೊಂಡಿರಲಿಲ್ಲ. ಈ ವಾಸ್ತವ ನಿಮಗೆ ಗೊತ್ತಿದ್ದಿದ್ದರೆ ನೀವು ಆಹಾರದಲ್ಲಿ ಹಲ್ಲಿ ಬಿದ್ದ ವಿಷಯವನ್ನು ತಿಂದ ಮಕ್ಕಳಿಗೆ ಹೇಳದೇ, ಮುಂದೆ ಏನಾಗುತ್ತದೆ ಎಂದು ಮಕ್ಕಳನ್ನು ಗಮನಿಸುತ್ತಾ ಸುಮ್ಮನೆ ಹಾಗೆ ಇದ್ದು ಬಿಡಬಹುದಿತ್ತು. ಆಗ ಯಾವ ಮಕ್ಕಳಿಗೂ ವಾಂತಿ ಆಗುತ್ತಿರಲಿಲ್ಲ. ಯಾರಿಗೂ ಸುಸ್ತು ಆಗುತ್ತಿರಲಿಲ್ಲ. ಆಸ್ಪತ್ರೆ, ಆಂಬುಲೆನ್ಸ್ ಯಾವುದೂ ಬೇಕಿರಲಿಲ್ಲ.

**ಜ್ಞಾನ ವಿಜ್ಞಾನ**

ಹಲ್ಲಿಯಲ್ಲಿ ಸು. 3,000 ಕ್ಕೂ ಹೆಚ್ಚು ಪ್ರಬೇಧಗಳಿವೆ. ಅವುಗಳಲ್ಲಿ ಎರಡು ಪ್ರಬೇಧಗಳು ಮಾತ್ರ ವಿಷಕಾರಿ. ನೈರುತ್ಯ ಅಮೆರಿಕಾ ಮತ್ತು ಮೆಕ್ಸಿಕೋದಲ್ಲಿ ವಾಸಿಸುವ ಗೀಲಾಮಾನಸ್ಟರ್ ಪ್ರಬೇಧದ ಹಲ್ಲಿಗಳಲ್ಲಿ ಮಾತ್ರ ವಿಷವಿದೆ. (ಹಲ್ಲಿಬಿದ್ದ ಕಾರಣಕ್ಕಲ್ಲದೇ ಬೇರೆ ಕಾರಣಕ್ಕೆ ಆಹಾರ ವಿಷಗೊಂಡಿರಲೂ ಬಹುದು. ಪ್ರಕರಣ ಹಾಗಿದ್ದರೆ ಬೇರೆ ರೀತಿಯ ಅಗತ್ಯ ಎಚ್ಚರ ವಹಿಸಲೇ ಬೇಕಾಗುತ್ತದೆ.) ಸತ್ಯ ಗೊತ್ತಿಲ್ಲದ ಜನರಿಗೆ ವಿಚಿತ್ರ ಅನಿಸಬಹುದು. ಹಲ್ಲಿಯಲ್ಲಿ ವಿಷ ಇಲ್ಲವಾದರೆ ಮಕ್ಕಳಿಗೆ ವೈದ್ಯರು ಸೂಜಿಮದ್ದು, ಮಾತ್ರೆ, ಔಷಧಿ ಮಾತ್ರೆ ಕೊಡುವುದು ಯಾಕೆ.? ಅಂತ. ಅದು ಹೇಗೋ ಹಲ್ಲಿಯಲ್ಲಿ ವಿಷ ಇದೆ ಎಂಬ ತಪ್ಪು ಅಭಿಪ್ರಾಯ ಜನರ ನಡುವೆ ವ್ಯಾಪಕವಾಗಿ ಹರಡಿದೆ. ಆಕಸ್ಮಿಕವಾಗಿ ಆಹಾರದಲ್ಲಿ ಹಲ್ಲಿ ಬಿದ್ದದ್ದು ಗೊತ್ತಾದರೆ ತಿಂದ ಜನ ಸಾವಿನ ಭಯದಿಂದ ಭೀತಿಗೊಳಗಾಗುತ್ತಾರೆ. ಆತಂಕದಿಂದ ವಾಂತಿ, ಸುಸ್ತು ಎಲ್ಲವೂ ಆಗುತ್ತದೆ.

ಆತಂಕದಲ್ಲಿರುವ ಜನರು ತಮ್ಮ ಬಳಿ ಬಂದಾಗ ವೈದ್ಯರು ಹಲ್ಲಿಯಲ್ಲಿ ವಿಷ ಇಲ್ಲ ಎಂಬ ಪಾಠ ಮಾಡುತ್ತಾ ಕೂರಲು ಸಾಧ್ಯವಿಲ್ಲ. ಮಾನಸಿಕ ನೆಮ್ಮದಿಯ ಕಾರಣಕ್ಕೆ ಔಷಧಿಯಂತೆ ಕಾಣುವ ಏನಾದರೂ ದ್ರವವನ್ನು ಅಥವಾ ಇಂತಹ ಉದ್ದೇಶಕ್ಕೆಂದೇ ತಯಾರಿಸಲಾಗಿರುವ ಔಷಧಿವನ್ನು ನೀಡುತ್ತಾರೆ.(ಇಂತಹ ಔಷಧಿಗಳು ಕೇವಲ 'ಮಾನಸಿಕ ನೆಮ್ಮದಿಗಾಗಿ ನೀಡುವ' ಔಷಧಿಗಳು. ಅಂತಹ ಔಷಧಿಗಳ ಪ್ರಕಾರವೇ ಇದೆ.)

ನಮ್ಮ ಸಮಾಜದಲ್ಲಿ ಒಂದು ನಿರ್ದಿಷ್ಟ ಸಮುದಾಯವನ್ನು ಅದರಲ್ಲೂ ಮುಸ್ಲಿಮರನ್ನು ದೇಶದ್ರೋಹಿಗಳು, ಭಯೋತ್ಪಾದಕರು ಎಂದು ಪ್ರಚಾರ ಮಾಡಲಾಗಿದೆ. ಒಳ್ಳೆಯವರು ಕೆಟ್ಟವರು ಎಲ್ಲ ಮತಧರ್ಮಗಳಲ್ಲೂ ಇದ್ದಾರೆ. ಭಯೋತ್ಪಾದನೆಯನ್ನು ಯಾವುದೋ ಒಂದು ಮತಧರ್ಮದೊಂದಿಗೆ ತಳುಕು ಹಾಕುವುದು ತಪ್ಪು. ಹಲ್ಲಿಯಲ್ಲಿ ವಿಷ ಇದೆ ಎಂದು ನಂಬಿದಂತೆ ಇದು. ನಂಬಿದರೆ ವಿಷ ಇದೆ ಎಂದು ಕಾಣುತ್ತದೆ. ನಂಬದೇ ಸತ್ಯವನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಸಮಸ್ಯೆ ತಿಳಿಯಾಗುತ್ತದೆ. ಇರಲಿ.

ಈ ಹಲ್ಲಿ ಪ್ರಕರಣದ ಒಟ್ಟು ಅರ್ಥ ಏನೆಂದರೆ ನಾವು ಯಾವುದೇ ವಿಷಯವನ್ನು ಸಹ ಮೇಲೆ ಕಾಣುವುದಷ್ಟನ್ನೇ ನೋಡಿ ತೀರ್ಮಾನಕ್ಕೆ ಬರಬಾರದು. 'ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು' ಎಂಬಂತೆ ಯಾವ ವಿಷಯವಾದರೂ ವಿಷಯದ ಆಳಕ್ಕೆ ಹೋಗಿ ಪರಿಶೀಲಿಸಿ ನೋಡಬೇಕು. ಈಗ ಜೀವ ವಿಕಾಸದ ವಿಷಯಕ್ಕೆ ಬರೋಣ.



# ಜೀವವಿಕಾಸ : ಎತ್ತರದ ಮರದೆಲೆಗಳನ್ನು ತಿನ್ನಲು ಕತ್ತೆತ್ತಿ ಕತ್ತೆತ್ತಿ ಜಿರಾಫೆಯ ಕತ್ತು ಉದ್ದವಾಯಿತೇ?

**ಆರ್. ರಾಮಕೃಷ್ಣ**

**ಎತ್ತರದ ಮರದೆಲೆಗಳನ್ನು ತಿನ್ನಲು ಕತ್ತೆತ್ತಿ ಜಿರಾಫೆಯ ಕತ್ತು ಉದ್ದವಾಯಿತೇ?**

ಜಿರಾಫೆ ಎಂಬುದು ಒಂದು ವಿಶಿಷ್ಟ ಪ್ರಾಣಿ. ಅತ್ಯಂತ ಎತ್ತರದ ಕತ್ತು ಇದರ ವಿಶೇಷ. ಈ ಎತ್ತರದ ಕತ್ತಿನ ಮೂಲಕ ಜಿರಾಫೆಯು ಎತ್ತರದ ಮರಗಳ ಸೊಪ್ಪು, ಎಲೆಗಳನ್ನು ಕಿತ್ತು ತಿನ್ನಬಲ್ಲುದು. ಈ ಜಿರಾಫೆಗೆ ಇಷ್ಟು ಎತ್ತರದ ಕತ್ತು ಹೇಗೆ ಬಂತು ಎಂಬುದು ನಿಜಕ್ಕೂ ಕುತೂಹಲದ ವಿಷಯ. ಎತ್ತರದ ಮರಗಳ ಸೊಪ್ಪು ಎಲೆಗಳನ್ನು ತಿನ್ನಲು ಕತ್ತನ್ನು ಮೇಲೆ ಮೇಲೆ ಚಾಚುತ್ತಾ ಕ್ರಮೇಣ ಜಿರಾಫೆಯ ಕತ್ತು ಅತ್ಯಂತ ಉದ್ದವಾಯಿತು ಎಂದು ಬಹಳ ಜನ ನಂಬಿದ್ದಾರೆ. ಇದೊಂದು ಜನಪ್ರಿಯ ನಂಬಿಕೆ. ಆದರೆ ವಿಜ್ಞಾನವು ಈ ವಿಷಯವಾಗಿ ಕಂಡುಕೊಂಡಿರುವುದೇ ಬೇರೆ. ಜಿರಾಫೆಯ ಕತ್ತು ಹೇಗೆ ಉದ್ದವಾಯಿತು ಎಂಬ ಪರಿಕಲ್ಪನೆಯನ್ನು ಅರ್ಥ ಮಾಡಿಕೊಂಡರೆ ಜೀವಿಗಳ ವಿಕಾಸದ ಒಂದು ಮೂಲಭೂತ ಪರಿಕಲ್ಪನೆಯನ್ನು ಅರ್ಥಮಾಡಿಕೊಂಡಂತೆಯೇ.

**ಮೇಲಕ್ಕೆ 'ಚಾಚಿ ಚಾಚಿ' ಜಿರಾಫೆ ಕತ್ತು ಉದ್ದವಾಯಿತೆ?**

"ಜಿರಾಫೆ'ಯ ಪೂರ್ವಜ ಪ್ರಾಣಿಗಳು, ಅಂದರೆ ಈಗಿನ ಜಿರಾಫೆಯು ಈ ರೂಪಕ್ಕೆ ಬರುವ ಮುಂಚೆ ಇದ್ದ ಪ್ರಾಣಿಯು ಎತ್ತರದ ಗಿಡಮರಗಳ ಸೊಪ್ಪು ಸೆದೆಯನ್ನು ಕಿತ್ತು ತಿನ್ನಲು ಕತ್ತನ್ನು ಮೇಲೆ ಚಾಚಿ, ಮೇಲೆ ಚಾಚಿ ಜಿರಾಫೆಗಳ ಕತ್ತು ಉದ್ದವಾಗಿವೆ." ಎನ್ನುವುದು ಒಂದು ವಾದ. ಇದು 'ಲೆಮಾರ್ಕ್' ಎನ್ನುವ ವ್ಯಕ್ತಿ ಮಂಡಿಸಿರುವ ವಾದ. ಆದರೆ ಈ ವಿಚಾರ ವಾದಸರಣಿ ಸತ್ಯವಲ್ಲ. ವೈಜ್ಞಾನಿಕ ಅಧ್ಯಯನಗಳ ಆಧಾರದಲ್ಲಿ ನೋಡಿದಲ್ಲಿ ಡಾರ್ವಿನ್ ವಾದಕ್ಕೆ ಹೆಚ್ಚು ಪುಷ್ಟಿ ಸಿಗುತ್ತದೆ. ಲೇ ಮಾರ್ಕ್ ವಾದಕ್ಕೆ ಹೆಚ್ಚು ಬೆಂಬಲವಿಲ್ಲ.

ಜಿರಾಫೆ ಎಂಬ ಪ್ರಾಣಿಯ ಪೂರ್ವಜ ಪ್ರಾಣಿ, ಅದು ಜಿಂಕೆಯನ್ನು ಹೋಲುವ ಪ್ರಾಣಿಯು ಸುಮಾರು 2.5 ಕೋಟಿ ವರ್ಷಗಳ ಹಿಂದೆ ಆಫ್ರಿಕಾ ಖಂಡದಲ್ಲಿ ಇದ್ದುದ್ದಕ್ಕೆ ಪಳೆಯುಳಿಕೆಯ ಸಾಕ್ಷ್ಯಗಳು ದೊರೆತಿವೆ. ಆಗ ಆ ಪ್ರಾಣಿಯು ಹೆಚ್ಚು ಎತ್ತರ ಇರಲಿಲ್ಲ. ಆ ಪ್ರಾಣಿಯ ಕತ್ತು ಸಹ ಹೆಚ್ಚು ಎತ್ತರವಿರಲಿಲ್ಲ. ಈಗ ಇಂತಹ ಪ್ರಾಣಿಯು ಹೇಗೆ ಎತ್ತರವಾಯಿತು ಮತ್ತು ಆ ಪ್ರಾಣಿಯ ಕತ್ತು ಹೇಗೆ ಉದ್ದವಾಯಿತು ಎಂಬ ವೈಜ್ಞಾನಿಕ ಅಧ್ಯಯನಗಳನ್ನಾಧರಿಸಿದ ಮಾಹಿತಿಗಳನ್ನು ತಿಳಿಯೋಣ.


ಜಿಂಕೆ, ಮೇಕೆ, ಕುದುರೆ ಯಾವುದೇ ಪ್ರಾಣಿಯಾಗಿರಲಿ ಅದರ ಮರಿಗಳಲ್ಲಿ ಎಲ್ಲವೂ ಒಂದೇ ಎತ್ತರ ಇರುವುದಿಲ್ಲ ಎಂಬುದನ್ನು ನಾವು ಗಮನಿಸಬಹುದು. ನಾನಾ ಕಾರಣಗಳಿಗಾಗಿ ಅವುಗಳಲ್ಲಿ ಕೆಲವು ಎತ್ತರ ಇರಬಹುದು, ಕೆಲವು ಮಧ್ಯಮ ಗಾತ್ರದ್ದಿರಬಹುದು, ಕೆಲವು ಕುಳ್ಳ ಮರಿಗಳಿರಬಹುದು. ಹೆಚ್ಚು ಮಕ್ಕಳಿರುವ ಕುಟುಂಬಗಳಲ್ಲಿ ಬೇರೆ ಬೇರೆ ಎತ್ತರದ ಮಕ್ಕಳಿರುತ್ತಾರಲ್ಲ, ಅವರನ್ನು ತಮಾಷೆಗಾಗಿ ಬಳ್ಳ(ಕೊಳಗ), ಸೇರು, ಪಾವು, ಚಟಾಕು ಎಂದು ತಮಾಷೆ ಮಾಡುವುದಿಲ್ಲವೇ? ಹಾಗೆ ಪ್ರಾಣಿಗಳ ಮರಿಗಳಲ್ಲಿ ಬೇರೆ ಬೇರೆ ಎತ್ತರದ ಮರಿಗಳಿರುತ್ತವೆ. ಈ ಮರಿಗಳು ಗಿಡಮರಗಳ ಎಲೆಗಳನ್ನು ತಿಂದು ಜೀವಿಸುವ ಪ್ರಾಣಿಗಳಾಗಿದ್ದಲ್ಲಿ ಸಹಜವಾಗಿ ಎತ್ತರದ ಮರಿಗಳಿಗೆ ಹೆಚ್ಚು ಗಿಡಮರಗಳ ಸೊಪ್ಪನ್ನು ಮೇಯುವ ಅವಕಾಶ ದೊರೆಯುತ್ತದೆ. ಹೆಚ್ಚು ಆಹಾರಪುಷ್ಟಿ ದೊರೆತ ಎತ್ತರದ ಮರಿಗಳು ಹೆಚ್ಚು ಹೆಚ್ಚು ಬದುಕಿ ಬಾಳುತ್ತವೆ. ಕಡಿಮೆ ಆಹಾರ ದೊರೆತ ಮರಿಗಳು ಸೊರಗುತ್ತವೆ.

ಹೆಚ್ಚು ಆಹಾರ ದೊರೆತು ದಷ್ಟಪುಷ್ಟವಾಗಿ ಎತ್ತರವಾಗಿರುವ ಗಂಡು–ಹೆಣ್ಣು ಪ್ರಾಣಿಗಳು ಸಹಜವಾಗಿ ಪರಸ್ಪರ ಲೈಂಗಿಕವಾಗಿ ಆಕರ್ಷಿತವಾಗುವ ಸಾಧ್ಯತೆ ಹೆಚ್ಚಿರುತ್ತದೆ. ತಂದೆ ತಾಯಿ ಪ್ರಾಣಿಗಳ ಗುಣಗಳು ವಂಶವಾಹಿಗಳ ಮೂಲಕ ತಂದೆ ತಾಯಿಗಳಿಗೆ ವರ್ಗಾವಣೆಯಾಗುತ್ತದೆ. ಎತ್ತರದ ತಂದೆ–ತಾಯಿಯಿಂದ ಹುಟ್ಟುವ ಮರಿಯು ವಂಶವಾಹಿಗಳ ದೆಸೆಯಿಂದಾಗಿ ಮತ್ತಷ್ಟು ಎತ್ತರವಾಗಿ ಬೆಳೆಯುವ ಅವಕಾಶ ಹೆಚ್ಚಿರುತ್ತದೆ.

ಹವಾಮಾನ ಬದಲಾವಣೆಯಿಂದಲೋ ಪ್ರಾಣಿಗಳ ಸಂಖ್ಯೆಗಳ ಹೆಚ್ಚಳದಿಂದಲೋ ಆ ನಿರ್ದಿಷ್ಟ ಪ್ರದೇಶದಲ್ಲಿ ನೆಲಮಟ್ಟದ ಕುರುಚಲು ಕಾಡು, ನೆಲಮಟ್ಟದ ಗಿಡಗಂಟೆಗಳು ಇಲ್ಲವಾದವು ಎಂದು ಭಾವಿಸಿಕೊಳ್ಳಿ, ಆಗ ಹೆಚ್ಚು ಎತ್ತರದ ಗಿಡಮರಗಳ ಎಲೆ ಸೊಪ್ಪುಗಳನ್ನು ಎಟುಕಿಸಿಕೊಂಡು ತಿನ್ನಲಾರದ ಗಿಡ್ಡ ಮರಿಗಳು ನಾಶವಾಗುತ್ತವೆ. ಹೀಗೆ ಲಕ್ಷಾಂತರ – ಕೋಟ್ಯಾಂತರ ವರ್ಷಗಳ ಕಾಲದ ವಿಕಾಸ ಪ್ರಕ್ರಿಯೆಯ ನಂತರ ಈಗಿನ ಅತಿ ಎತ್ತರದ ದೇಹ ಮತ್ತು ಕತ್ತನ್ನು ಉಳ್ಳ ಜಿರಾಫೆಯಂತಹ ಒಂದು ವಿಶಿಷ್ಟ ಜೀವಿ ಸೃಷ್ಟಿಯಾಗಿದೆ.

ಚಾರ್ಲ್ಸ್ ಡಾರ್ವಿನ್ನರ ಈ ವಾದಕ್ಕೆ ಹೆಚ್ಚಿನ ಮಾನ್ಯತೆ ದೊರೆತಿದೆ. ಲೇ ಮಾರ್ಕರ ವಾದಕ್ಕೆ ಹೆಚ್ಚಿನ ವಿಜ್ಞಾನಿಗಳ ಸಮರ್ಥನೆ ಇಲ್ಲ ಎಂಬುದನ್ನು ನಾವು ಅರಿತು ವಿಕಾಸವಾದದ ವೈಜ್ಞಾನಿಕ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳೋಣ. ಪ್ರಚುರ ಪಡಿಸೋಣ.

●



# ‘ಅಚ್ಛೇ ದಿನ್’ ಹೊರಟೇ ಹೋಗಿದೆ; ‘ಸೆಕ್ಯುಲರಿಸಂ’ ಮರಳಿ ಬಂದಿಲ್ಲ




2019ರ ಸಾರ್ವತ್ರಿಕ ಚುನಾವಣೆಗಳ ಪ್ರಚಾರ ಆರಂಭವಾಗಿ ಒಂದೂವರೆ ತಿಂಗಳಾಗಿವೆ, ಅದೀಗ ಕೊನೆಯ ಘಟ್ಟವನ್ನು ತಲುಪುತ್ತಿದೆ. ಈ ಅವಧಿಯಲ್ಲಿ ಈ ಚುನಾವಣೆಗಳ ಪ್ರಮುಖ ಸ್ಪರ್ಧಿಗಳಿಂದ ಹಲವಾರು ಪದಪುಂಜಗಳ ಭಾರೀ ಪ್ರಯೋಗಗಳು ನಡೆದಿವೆ. ಆದರೆ ಇದರಲ್ಲಿ ಎರಡು ಪದಗಳ ಗೈರುಹಾಜರಿ ಅತ್ಯಂತ ಗಮನಾರ್ಹವಾಗಿದೆ ಎನ್ನುತ್ತಾರೆ ಸಿಪಿಐ(ಎಂ)ನ ಹಿರಿಯ ಮುಖಂಡರಾದ, ಈ ಚುನಾವಣಾ ಪ್ರಚಾರದಲ್ಲಿ ದೇಶದ ಉದ್ದಗಲದಲ್ಲೂ ಸಂಚರಿಸುತ್ತಿರುವ ಬೃಂದಾ ಕಾರಟ್ (ಎನ್‌ಡಿಟಿವಿ.ಕಾಂ, ಮೇ 5). ಅವೆಂದರೆ ‘ಅಚ್ಛೇ ದಿನ್’ ಅಂದರೆ ಒಳ್ಳೆಯ ದಿನಗಳು ಮತ್ತು ‘ಸೆಕ್ಯುಲರಿಸಂ’ ಅಂದರೆ ಜಾತ್ಯತೀತತೆ. ಮೊದಲನೆಯದು ಬಿಜೆಪಿ ಪ್ರಚಾರದಲ್ಲಿ ಕಾಣೆಯಾಗಿದ್ದರೆ, ಎರಡನೆಯದ್ದು ಪ್ರಧಾನ ಪ್ರತಿಪಕ್ಷ ಕಾಂಗ್ರೆಸಿನ ಪ್ರಚಾರದಲ್ಲಿ, ಎನ್ನುತ್ತಾರೆ ಅವರು.

**2014ರ ಚುನಾವಣೆಗಳ ಪ್ರಧಾನ ಪ್ರಚಾರ ಘೋಷಣೆಯಾದ ‘ಅಚ್ಛೇ ದಿನ್’ ಪದ ಈ ಬಾರಿ ಆಳುವ ಪಕ್ಷದ ಇಬ್ಬರೂ ಅತ್ಯುನ್ನತ ‘ಸ್ಟಾರ್ ಪ್ರಚಾರಕ’ರ ಬಾಯಿಂದ ಒಮ್ಮೆಯಾದರೂ ತಪ್ಪಿಯೂ ಬಂದಿಲ್ಲ.** ಬೃಂದಾ ಕಾರಟ್ ಹೇಳುವಂತೆ ಹೊಣೆಗಾರಿಕೆ ಎಂಬುದರ ಕನಿಷ್ಟ ಪ್ರಜ್ಞೆಯಾದರೂ ಇದ್ದಿದ್ದರೆ ಇವರು ತಮಗೆ ಅಧಿಕಾರ ತಂದು ಕೊಟ್ಟ ಈ ಘೋಷಣೆಯನ್ನು ಎಷ್ಟರ ಮಟ್ಟಿಗೆ ವಾಸ್ತವಗೊಳಿಸಲು ಸಾಧ್ಯವಾಗಿದೆ ಎಂದು ಮತದಾರರಿಗೆ ಹೇಳಬೇಕಾಗಿತ್ತು. ಆದರೆ ಹೇಗೆ ತಾನೇ ಹೇಳಿಯಾರು?

ಜನಧನ, ಉಜ್ವಲಾ, ಮುದ್ರಾ, ಮೇಕ್ ಇನ್ ಇಂಡಿಯಾ, ಸ್ಟಾರ್ಟ್ ಅಪ್ ಇತ್ಯಾದಿ ಇತ್ಯಾದಿ ಹಲವಾರು ಯೋಜನೆಗಳ ಪ್ರಚಾರದ ಜಾಹೀರಾತುಗಳಿಗೆ 4000 ಕೋಟಿ ರೂ. ಗಳಿಗಿಂತಲೂ ಹೆಚ್ಚು ಖರ್ಚು ಮಾಡಿರುವ ‘ಅಚ್ಛೇ ದಿನ್’ ಸರಕಾರಕ್ಕೆ ಈ ಬಗ್ಗೆ, ತಾವು 2014ರಲ್ಲಿ, ಮತ್ತು ನಂತರ ನೀಡಿದ ನೂರಾರು ಆಶ್ವಾಸನೆಗಳಲ್ಲಿ ತಮ್ಮ ಸಾಧನೆಗಳೇನು ಎಂದು ಮತದಾರರಿಗೆ ಹೇಳಲು ಏನೂ ಇದ್ದಂತಿಲ್ಲ. ಜಿಡಿಪಿ ಹೆಚ್ಚಳದ, ಎಫ್‌ಡಿಐ ಹೆಚ್ಚಳದ ಮಾತೂ ಇಲ್ಲ.

**ಈ ಹಿಂದೆ ತನ್ನ ಮಹಾಸಾಧನೆ, 56 ಅಂಗುಲ ಎದೆಯ ಪ್ರತೀಕ ಎಂದು ಅಬ್ಬರಿಸುತ್ತಿದ್ದ ‘ನೋಟುರದ್ದತಿ’ಯ ಬಗ್ಗೆಯಂತೂ ಚಕಾರವಿಲ್ಲ.** ಆದ್ದರಿಂದಲೇ ಹುಸಿ ರಾಷ್ಟ್ರವಾದದ ಹೆಸರಲ್ಲಿ ಎಲ್ಲ ಪ್ರತಿಪಕ್ಷಗಳ ಮೇಲೆ ಟೀಕೆ, ಬೈಗುಳ, ಸುಳ್ಳುಗಳ, ಧ್ರುವೀಕರಣದ ಕೆಟ್ಟ ಪ್ರಯತ್ನಗಳ ನಕಾರಾತ್ಮಕ ಪ್ರಚಾರವನ್ನೇ ಆಳುವ ಪಕ್ಷದ ಈ ಪ್ರಧಾನ ರೂವಾರಿಗಳು ನೆಚ್ಚಿಕೊಂಡಂತಿದೆ. ಅದೇ ತಮಗೆ ಮತ್ತೆ ಅಧಿಕಾರ ತಂದು ಕೊಡುತ್ತದೆ ಎಂದು ಬಲವಾಗಿ ನಂಬಿಕೊಂಡಂತಿದೆ.

# ಐಕ್ಯೈಕ ‘ಯಶಸ್ವಿ’ ಪಿಎಂ.. ಯೋಜನೆ: ಬಿಲಿಯನೇರ್ ಬಡಾವೊ, ಬಚಾವೊ, ಬನಾವೊ

ಹತ್ತಾರು ‘ಪ್ರಧಾನ ಮಂತ್ರಿ.. .. .. ಯೋಜನಾ’ಗಳು ಜುಮ್ಲಾಗಳಾದರೇನಂತೆ, ಒಂದು ಅತ್ಯಂತ ‘ಯಶಸ್ವಿ’ ಯೋಜನೆಯ ಬಗ್ಗೆ ಮಾಧ್ಯಮಗಳು ಗಮನ ಹರಿಸಿದಂತಿಲ್ಲ ಎನ್ನುತ್ತಾರೆ ಒಬ್ಬ ರಾಜಕೀಯ ವೀಕ್ಷಕರು (ಪೀಪಲ್ಸ್ ಡೆಮಾಕ್ರಸಿ, ಮೇ 5–12). ಅವರು ಇದಕ್ಕೆ ಇಟ್ಟಿರುವ ಹೆಸರು ‘ಪ್ರಧಾನ ಮಂತ್ರಿ ಬಿಲಿಯನೇರ್ ಬಡಾವೊ–ಬಿಲಿಯನೇರ್ ಬಚಾವೊ–ಬಿಲಿಯನೇರ್ ಬನಾವೊ ಯೋಜನಾ’. ಇದು ಎಂದೂ ಸಾರ್ವಜನಿಕವಾಗಿ ಪ್ರಕಟವಾಗದ ಯೋಜನೆ, ಜಾಹೀರಾತಿಗೆ ಖರ್ಚುಮಾಡದ, ಆದರೆ ದೇಶದ ಸಂಪನ್ಮೂಲಗಳಿಗೆ ಹೊರೆಯಾದ ‘ಯಶಸ್ವಿ’ ಯೋಜನೆ ಎಂದು ಬೇರೆ ಹೇಳಬೇಕಾಗಿಲ್ಲ. ಮುಕೇಶ್ ಅಂಬಾನಿ ಡಬಲ್ ಯೋಜನಾ, ಅಡಾನಿ ಕಲ್ಯಾಣ್ ಯೋಜನಾ, ಅನಿಲ್ ಅಂಬಾನಿ ಬಚಾವೊ ಯೋಜನಾ ಮತ್ತು ಬಾಬಾ ಟು ಬಿಲಿಯನೇರ್ ಬನಾವೊ ಯೋಜನಾಗಳನ್ನು ಈ ವೀಕ್ಷಕರು ವಿಶ್ಲೇಷಿಸಿದ್ದಾರೆ.

ಈ ‘ಯೋಜನಾ’ದ ಅಡಿಯಲ್ಲಿ ದೇಶದ ಅತ್ಯಂತ ಶ್ರೀಮಂತ ವ್ಯಕ್ತಿ ಡಬಲ್ ಶ್ರೀಮಂತ ವ್ಯಕ್ತಿಯಾದರು ಎಂದು ಅಂಕಿ–ಅಂಶಗಳೇ ಹೇಳುತ್ತವೆ. 2016 ಸಪ್ಟಂಬರ್‌ನಲ್ಲಿ ಪ್ರಧಾನಿಗಳ ಫೋಟೋ ರಾರಾಜಿಸುತ್ತಿದ್ದ ಪೂರ್ಣ ಪುಟದ ರಿಲಯಂಸ್ ಜಿಯೊ ದ ‘ಖಾಸಗಿ’ ಜಾಹೀರಾತನ್ನು ಈ ಸಂದರ್ಭದಲ್ಲಿ ಅವರು ನೆನಪಿಸುತ್ತಾರೆ. 2014ರಲ್ಲಿ ಈ ವ್ಯಕ್ತಿಯ ಆದಾಯ 23 ಬಿಲಿಯ ಡಾಲರ್‌ಗಳಿದ್ದದ್ದು, 2016ರಲ್ಲೂ ಸುಮಾರಾಗಿ ಅಷ್ಟೇ ಇತ್ತು, ಆದರೆ 2019ರಲ್ಲಿ 55 ಬಿಲಿಯ ಡಾಲರ್‌ಗಳಿಗೇರಿದೆ. ಅಂದರೆ ತನ್ನ ಜೀವನದ 50 ವರ್ಷಗಳಲ್ಲಿ ‘ಕಷ್ಟಪಟ್ಟು’ ಸಂಪಾದಿಸಿದಷ್ಟನ್ನು ಅಚ್ಛೇ ದಿನ್’ ಸರಕಾರದ ಕೇವಲ 3 ವರ್ಷಗಳಲ್ಲಿ ಸಂಪಾದಿಸಿದ್ದಾರೆ, ಎಂಬುದು ಈ ವೀಕ್ಷಕರ ಲೆಕ್ಕಾಚಾರ. ಇದನ್ನು ಒಪ್ಪದಿರಲು ಸಾಧ್ಯವಿಲ್ಲ.

ಇನ್ನೊಬ್ಬ, ಈ ಪ್ರಧಾನಿಗಳು ಗುಜರಾತಿನ ಮುಖ್ಯಮಂತ್ರಿಗಳಾಗಿದ್ದಾಗ ಶತಕೋಟ್ಯಾಧಿಪತಿಯಾದ ‘ನಿಕಟ ಸ್ನೇಹಿತ’– 2014ರಲ್ಲಿ 2.6 ಬಿಲಿಯ ಡಾಲರ್‌ಗಳ ಅವರ ಆದಾಯ ಈಗ 11.9 ಬಿಲಿಯ ಡಾಲರುಗಳಾಗಿದೆ, ಅಂದರೆ ನಾಲ್ಕು ಪಟ್ಟು. ಇವೆರಡು ‘ಬಿಲಿಯನೇರ್ ಬಡಾವೊ’ ಯೋಜನೆಗಳ ಪ್ರಮುಖ ಉದಾಹರಣೆಗಳು. ಈ ರೀತಿ ಅಲ್ಲಿ ಎರಡು ಪಟ್ಟು, ಇಲ್ಲಿ ನಾಲ್ಕು ಪಟ್ಟು ಹೇಗಾಯಿತು ಎಂಬುದನ್ನೂ ಈ ವೀಕ್ಷಕರು ಮೇಲೆ ಹೇಳಿದ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ.

ಈ ಅವಧಿಯಲ್ಲೇ ದಿವಾಳಿಯ ಅಂಚಿಗೆ ಬಂದು ನಿಂತಿದ್ದ ಮತ್ತೊಬ್ಬ ಬಿಲಿಯನೇರ್ ‘ಮಿತ್ರ’ನಿಗೆ ರಫೇಲ್ ವ್ಯವಹಾರದಲ್ಲಿ ಭಾರೀ ಉಡುಗೊರೆ ದೊರೆತಿರುವುದು ಈಗ ವಿವಾದವಾಗಿದೆ. ಇದಕ್ಕೆ ದೇಶದ ಪ್ರತಿಷ್ಠಿತ ಸಾರ್ವಜನಿಕ ವಲಯದ ಉದ್ದಿಮೆ ಹೆಚ್‌ಎಎಲ್ ಭಾರೀ ಬೆಲೆ ತೆರಬೇಕಾಗಿ ಬಂದಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಇದನ್ನು ಈ ವೀಕ್ಷಕರು ಒಂದು ಪ್ರಮುಖ ‘ಬಿಲಿಯನೇರ್ ಬಚಾವೊ ಯೋಜನಾ’ ಎಂದು ಗುರುತಿಸಿದ್ದಾರೆ.

ಇನ್ನು, ಐದು ವರ್ಷಗಳ ಹಿಂದೆ ಈಗಿನ ಪ್ರಧಾನ ಮಂತ್ರಿಗಳ ಚುನಾವಣಾ ಪ್ರಚಾರದಲ್ಲಿ ಎದ್ದು ಕಾಣುತ್ತಿದ್ದ ‘ರಾಜಕೀಯೇತರ’ ಯೋಗಗುರು ಬಾಬಾನ ಗಿಡಮೂಲಿಕೆಗಳನ್ನು ಆಧರಿಸಿದ್ದ ಸಣ್ಣ ಉದ್ದಿಮೆ ಈ ಐದು ವರ್ಷಗಳಲ್ಲಿ 6 ಬಿಲಿಯ ಡಾಲರ್‌ಗಳ ಪ್ರಮುಖ ಉದ್ದಿಮೆ ಗುಂಪಾಗಿರುವುದು ‘ಬಿಲಿಯನೇರ್ ಬನಾವೊ’ದ ಒಂದು ಜ್ವಲಂತ ಉದಾಹರಣೆ.

# ವ್ಯಕ್ತಿ ಪ್ರತಿಷ್ಠೆಯ ಅಲೆಯೋ, ಕಾರ್ಪೊರೇಟ್ ಹಣದ ಅಲೆಯೋ?

‘ಅಚ್ಛೇ ದಿನ್’ ಪದವೇ ಕಾಣೆಯಾದರೇನಂತೆ, ಪ್ರಧಾನ ಮಂತ್ರಿಗಳ ವೈಯಕ್ತಿಕ ಜನಪ್ರಿಯತೆ ಈಗಲೂ ಹಾಗೆಯೇ ಇದೆ ಎನ್ನುತ್ತಾರೆ ಇನ್ನು ಕೆಲವು ರಾಜಕೀಯ ಮತ್ತು ಚುನಾವಣಾ ವೀಕ್ಷಕರು. ಇದು ಮುಖ್ಯವಾಗಿ ಪುಲ್ವಾಮ ದುರಂತದ ನಂತರ ಬಾಲಕೋಟ್ ಕಾರ್ಯಾಚರಣೆಯ ಹೆಸರಿನಲ್ಲಿ ನಡೆಸಿದ ಪರಿಣಾಮಕಾರಿ ಪ್ರಚಾರದ ಫಲ, ಹಣಬಲವಿಲ್ಲದೆ ಇದು ಸಾಧ್ಯವಾಗುತ್ತಿರಲಿಲ್ಲ ಎಂದು ಮತ್ತೊಬ್ಬ ವೀಕ್ಷಕರು ಹೇಳುತ್ತಾರೆ (ದಿ ವೈರ್.ಇನ್, ಮೇ 6). 2019ರಲ್ಲಿ ಆಳುವ ಪಕ್ಷ ತನ್ನ ನೇತಾರನ ಹೆಸರಿನ ಅಲೆಯನ್ನು ನೆಚ್ಚಿದೆಯೋ ಅಥವ ಕಾರ್ಪೊರೇಟ್ ಹಣದ ಅಲೆಯನ್ನೋ ಎಂದು ಅವರು ತಮ್ಮ ಲೇಖನದಲ್ಲಿ ಪರಿಶೀಲಿಸಿದ್ದಾರೆ.

ಈಗಾಗಲೇ ಮಾಧ್ಯಮಗಳಲ್ಲಿ ಪ್ರಕಟವಾಗಿರುವಂತೆ, 2017–18ರಲ್ಲಿ ದೇಶದ ಏಳು ದೊಡ್ಡ ರಾಜಕೀಯ ಪಕ್ಷಗಳ ಘೋಷಿತ ಆದಾಯ 1390 ಕೋಟಿ ರೂ. ಇದರಲ್ಲಿ ಮೊದಲ ಸ್ಥಾನದಲ್ಲಿರುವ ಬಿಜೆಪಿಯ ಘೋಷಿತ ಆದಾಯ 1027 ಕೋಟಿ ರೂ. ಅಂದರೆ 73.5%! ಈ ಆದಾಯದಲ್ಲಿ 98% ದಷ್ಟು ‘ದೇಣಿಗೆ’ಗಳಿಂದ ಬಂದಿದೆ. ನಂತರದ ಸ್ಥಾನದಲ್ಲಿರುವ ಕಾಂಗ್ರೆಸ್ ಪಡೆದಿರುವ ದೇಣಿಗೆಯ ಏಳು ಪಟ್ಟು.

ಆಳುವ ಪಕ್ಷ ಪಡೆದಿರುವ ‘ದೇಣಿಗೆ’ಗಳಲ್ಲಿ ಬಹುಪಾಲು “ಅಜ್ಞಾತ ಮೂಲ”ದಿಂದ ಬಂದವುಗಳು. ಇದರಲ್ಲಿ ಈ ‘ಅಚ್ಛೇ ದಿನ್’ ಸರಕಾರ 2017ರಲ್ಲಿ ಆರಂಭಿಸಿದ ಚುನಾವಣಾ ಬಾಂಡುಗಳದ್ದು ಪ್ರಮುಖ ಪಾತ್ರ ಎನ್ನಲಾಗಿದೆ. 2017–18ರಲ್ಲಿ ಈ ಬಾಂಡುಗಳ ಮೂಲಕ ಸಂಗ್ರಹವಾದ 215 ಕೋಟಿರೂ.ಗಳಲ್ಲಿ 210 ಕೋಟಿರೂ. ಬಿಜೆಪಿಯ ಖಜಾನೆಗೆ ಹೋಗಿದೆ ಎಂದು ಅಧಿಕೃತವಾಗಿ ಗೊತ್ತಾಗಿದೆ. ಚುನಾವಣೆ ಘೋಷಣೆಯಾದ ಮಾರ್ಚ್ 2019ರ ಮೊದಲ ಎರಡೇ ವಾರಗಳಲ್ಲಿ ಈ ಬಾಂಡುಗಳಿಂದ 1407 ಕೋಟಿ ರೂ. ಸಂಗ್ರಹವಾಗಿದೆ, ಇದರಲ್ಲಿ 1366 ಕೋಟಿ ರೂ. ‘ಅಜ್ಞಾತ’ ಮೂಲದಿಂದ ಬಂದಿವೆ. ಇವುಗಳಲ್ಲಿ 99.8% ದಷ್ಟು 10 ಲಕ್ಷ ರೂ. ಅಥವ ಅದಕ್ಕೆ ಮೇಲ್ಪಟ್ಟ ಮೌಲ್ಯದ ಬಾಂಡುಗಳು. ಈ ‘ಅಜ್ಞಾತ’ ದೇಣಿಗೆದಾರರು ಕಡುಶ್ರೀಮಂತರು, ಕಾರ್ಪೊರೇಟ್‌ಗಳು, ಬಹುಶಃ ವಿದೇಶಿ ಕಂಪನಿಗಳೂ ಇರಬಹುದು ಎನ್ನಲಾಗಿದೆ. 2017–18ರ ಅಂಕಿ–ಅಂಶಗಳು, ಮತ್ತು ಈ ಚುನಾವಣಾ ಬಾಂಡ್‌ನ ಸ್ವರೂಪದಿಂದಲೇ ಆಳುವ ಪಕ್ಷ ಇದರಲ್ಲಿ ಸಿಂಹಪಾಲು ಪಡೆದಿದೆ ಎಂದು ಸುಲಭವಾಗಿ ಊಹಿಸಬಹುದು.

ಆಳುವ ಪಕ್ಷ ಮತ್ತು ಪ್ರತಿಪಕ್ಷಗಳು ‘ಹೊಸ’ ಪ್ರಚಾರ ಮಾಧ್ಯಮಗಳಲ್ಲಿ ಮಾಡುತ್ತಿರುವ ಖರ್ಚುಗಳಿಂದಲೂ ಇದನ್ನು ಅಂದಾಜು ಮಾಡಬಹುದು.

2017–18ರಲ್ಲಿ ಪ್ರಕಟಿಸಿರುವ ಅಂಕಿ–ಅಂಶಗಳ ಪ್ರಕಾರ ಚುನಾವಣಾ ವೆಚ್ಚ ಆಳುವ ಪಕ್ಷದ ಪ್ರಮುಖ ವೆಚ್ಚವಾಗಿತ್ತು. ಆ ವರ್ಷ ಅದು 567 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದರೆ, ನಂತರದ ಸ್ಥಾನದಲ್ಲಿರುವ ಕಾಂಗ್ರೆಸ್ ನ ಚುನಾವಣಾ ಪ್ರಚಾರ ವೆಚ್ಚ 29 ಕೋಟಿ ರೂ.

ಈ ಸಾರ್ವತ್ರಿಕ ಚುನಾವಣೆಗಳಲ್ಲಿ ಈ ‘ಅಸಮಾನತೆ’ ತೀವ್ರವಾಗಿ ಹೆಚ್ಚಿದ್ದರೂ ಆಶ್ಚರ್ಯವಿಲ್ಲ. ಈ ಅಂಕಿ–ಅಂಶಗಳನ್ನು ನೋಡಿ:


- ಈ ವರ್ಷ ಫೆಬ್ರುವರಿ 20ರಿಂದ ಎಪ್ರಿಲ್ 24ರ ನಡುವೆ ಗೂಗಲ್‌ನಲ್ಲಿ ರಾಜಕೀಯ ಜಾಹೀರಾತುಗಳಿಗೆ ಬಿಜೆಪಿ ಮಾಡಿರುವ ವೆಚ್ಚ 6 ಕೋಟಿ ರೂ. ಇದು ಕಾಂಗ್ರೆಸ್ ಮಾಡಿರುವ ವೆಚ್ಚದ 10 ಪಟ್ಟು.
- ಸುಮಾರಾಗಿ ಇದೇ ಅವಧಿಯಲ್ಲಿ ಬಿಜೆಪಿ ಅಧಿಕೃತವಾಗಿ ಫೇಸ್‌ಬುಕ್ ಪೇಜಿನಲ್ಲಿ ಮಾಡಿರುವ ವೆಚ್ಚ 1.32 ಕೋಟಿ ರೂ.; ‘ಭಾರತ್ ಕೇ ಮನಕೀ ಬಾತ್’, ‘ನೇಶನ್ ವಿದ್ ನಮೋ’ , ‘ಮೈ ಫಸ್ಟ್ ವೋಟ್ ಫಾರ್ ಮೋದಿ’ ಇತ್ಯಾದಿ ಅನಧಿಕೃತ ಫೇಸ್ ಬುಕ್ ಪೇಜ್‌ಗಳ ಮೇಲೆ ಒಟ್ಟು 4.5 ಕೋಟಿ ರೂ. ವೆಚ್ಚ ಮಾಡಲಾಗಿದೆಯಂತೆ.
- ಈ ಎಲ್ಲ ಅನಧಿಕೃತ ಫೇಸ್‌ಬುಕ್ ಪೇಜುಗಳನ್ನು ಸಂಘಟಿಸುತ್ತಿರುವ ಸಂಘಟನೆ 2017–18ರಲ್ಲಿ 23. ಕೋಟಿ ರೂ. ಆದಾಯ ಪಡೆದಿದೆ ಎಂದು ಮಾಧ್ಯಮ ತನಿಖೆಗಳಲ್ಲಿ ವರದಿಯಾಗಿದೆ.
- ಇದಲ್ಲದೆ ಬಹಳಷ್ಟು ದಿನಗಳ ವರೆಗೆ ತನ್ನದಲ್ಲ ಎಂದು ಹೇಳಿಕೊಂಡ, ಕೊನೆಗೂ ತನ್ನ ಐಟಿ ಸೆಲ್ ನಡೆಸುತ್ತಿದೆ ಎಂದು ಆಳುವ ಪಕ್ಷ ಒಪ್ಪಿಕೊಂಡ ‘ನಮೋಟಿವಿ’ಗೆ ಎಷ್ಟು ಖರ್ಚು ಮಾಡಲಾಗುತ್ತಿದೆ ಎಂದು ತಿಳಿದಿಲ್ಲ.

ಕಳೆದ ವರ್ಷ ನವಂಬರ್‌ನಲ್ಲಿ ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಗಳ ವೇಳೆಯಲ್ಲಿ ಟಿವಿ ಜಾಹೀರಾತುಗಳಲ್ಲಿ ಬಿಜೆಪಿ ಭಾರತದ ಪ್ರಧಾನ ‘ಬ್ರಾಂಡ್’ ಎಂದೇ ಹೆಗ್ಗಳಿಕೆ ಗಳಿಸಿದೆ! 22099 ಬಾರಿ ಅದರ ಜಾಹೀರಾತುಗಳು ಟಿವಿಗಳಲ್ಲಿ ರಾರಾಜಿಸಿವೆ.

ಇನ್ನು, ಈಗಾಗಲೇ ಪ್ರಕಟವಾಗಿರುವಂತೆ, ಅಕ್ಟೋಬರ್ 2018ರ ವರೆಗಿನ ನಾಲ್ಕೂವರೆ ವರ್ಷಗಳಲ್ಲಿ ಈ ‘ಅಚ್ಛೇದಿನ್’ ಸರಕಾರದ ಜಾಹೀರಾತು ವೆಚ್ಚ ಹಿಂದಿನ ಎರಡು ಯುಪಿಎ ಸರಕಾರಗಳು ಹತ್ತು ವರ್ಷಗಳಲ್ಲಿ ಮಾಡಿದಷ್ಟು. 4000 ಕೋಟಿ ರೂ.ಗಳಿಗೂ ಮೀರಿದ ಈ ಜಾಹೀರಾತುಗಳಲ್ಲಿ ಪ್ರಿಂಟ್ ಮಾಧ್ಯಮದಲ್ಲಿ ಜಾಹೀರಾತು ವೆಚ್ಚ 2136 ಕೋಟಿ ರೂ. ಆಗಿದ್ದರೆ, ಇಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಜಾಹೀರಾತಿಗೆ 2211 ಕೋಟಿ ರೂ.

ಇವಿಷ್ಟೇ ಅಲ್ಲ, ದೂರದರ್ಶನದಂತಹ ‘ಸ್ವಾಯತ್ತ’ ಮಾಧ್ಯಮದಲ್ಲಿ ಆಳುವ ಪಕ್ಷ, ಪ್ರಧಾನ ಪ್ರತಿಪಕ್ಷಕ್ಕಿಂತ ಎರಡು ಪಟ್ಟು ‘ಕವರೇಜ್’ ಅಂದರೆ ಪ್ರಚಾರ ಪಡೆದಿದೆ!

ಈಗ ಚುನಾವಣಾ ಆಯೋಗದಿಂದ ‘ಕ್ಲೀನ್ ಚಿಟ್’ಗಳಲ್ಲೂ ಈ ಆಳುವ ಅತ್ಯುನ್ನತ ‘ಸ್ಟಾರ್ ಪ್ರಚಾರಕ’ರದ್ದೇ ಮೇಲುಗೈ!




ಈಗ ನಮ್ಮ ಮುಖಂಡರ ಅಸಹ್ಯ ಹುಟ್ಟಿಸುವ, ಅಸಂವಿಧಾನಿಕ ವರ್ತನೆಗಳ ಬದಲು ಚುನಾವಣಾ ಆಯೋಗವೇ ಈಗ ಚರ್ಚೆಯ ವಿಷಯವಾಗಿರುವುದು ದುರದೃಷ್ಟಕರ

–ಎಸ್.ವೈ.ಖುರೇಶಿ, ನಿವೃತ್ತ ಮುಖ್ಯ ಚುನಾವಣಾ ಆಯುಕ್ತರು




ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

# ಪ್ರಸಕ್ತ ಸಂದರ್ಭದಲ್ಲಿ ಹಣ ವರ್ಗಾವಣೆ ಯೋಜನೆಗಳ ಮಹತ್ವ




**ಈಗ ಪ್ರಸ್ತಾಪಿಸಲಾಗುತ್ತಿರುವ ನಗದು ವರ್ಗಾವಣೆಯು, ಮೋದಿ ಸರಕಾರದ 'ಪಿಎಂ-ಕಿಸಾನ್' ಆಗಲಿ ಕಾಂಗ್ರೆಸಿನ 'ನ್ಯಾಯ್' ಆಗಲಿ, ನವ ಉದಾರ ಬಂಡವಾಳಶಾಹಿಯು ಬಿಕ್ಕಟ್ಟಿಗೆ ಒಳಗಾಗಿರುವ ಅಂಶವನ್ನು ಸೂಚಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅದರ ಆಚೆಗೆ ನೋಡಲಾರದ ರಾಜಕೀಯ ಪಡೆಗಳಲ್ಲಿ ಒಂದು ಸನ್ನಿಗೆ ಒಳಗಾದ ರೀತಿಯಲ್ಲಿ ಕೋಮು ಭಾವನೆಗಳನ್ನು ಕೆಣಕಿ ವೋಟು ಬಾಚಿಕೊಳ್ಳುವ ಸನ್ನಾಹದಲ್ಲಿ ತೊಡಗಿದ್ದರೆ, ಇನ್ನೊಂದು, ಜಾತ್ಯಾತೀತ ಮನೋಭಾವ ಹೊಂದಿರುವ ರಾಜಕೀಯ ಪಡೆಯು ನವ ಉದಾರ ಬಂಡವಾಳಶಾಹಿಗೆ ಒಂದು "ಮಾನವೀಯ ಮುಖ" ತೊಡಿಸುವ ಆಶ್ವಾಸನೆ ಕೊಡುತ್ತಿದೆ. ಬಡವರಿಗೆ ಪರಿಹಾರ ದೊರಕಿಸುವ ಆಶ್ವಾಸನೆಯಿಂದ ಕೂಡಿದ ಕ್ರಮಗಳಿಗೆ ಈ ರಾಜಕೀಯ ಪಡೆಗಳು ಮುಂದಾದಾಗ ಎಡ ಪಂಥೀಯರು ಅದನ್ನು ಸ್ವಾಗತಿಸಬೇಕು. ಏಕೆಂದರೆ, ನವ ಉದಾರವಾದದ ತರ್ಕ ಮತ್ತು ಚಾಳಿಯಿಂದಾಗಿ ಒಂದೋ ಈ ಆಶ್ವಾಸನೆ ಕೊಟ್ಟವರು ಅದನ್ನು ಮುರಿಯುತ್ತಾರೆ, ಆಗ ಎಡ ಶಕ್ತಿಗಳು ಅದನ್ನು ಎತ್ತಿ ತೋರಿಸಿ ಅದರ ವಿರುದ್ಧ ಹೋರಾಡಬೇಕಾಗುತ್ತದೆ, ಇಲ್ಲವೇ ನವ ಉದಾರ ವ್ಯವಸ್ಥೆಯನ್ನೇ ಮೀರಲು ಆರಂಭಗೊಳ್ಳುವ ಒಂದು ಗತಿತಾರ್ಕಿಕ ಪ್ರಕ್ರಿಯೆಯನ್ನು ಎಡ ಶಕ್ತಿಗಳು ಉದ್ದೀಪಿಸಬಹುದು.**

**ಪ್ರೊ.ಪ್ರಭಾತ್ ಪಟ್ನಾಯಕ್** ಅನು: ಕೆ.ಎಂ.ನಾಗರಾಜ್

ಮೊದಲು ಮೋದಿ ಸರ್ಕಾರವು ತನ್ನ ಕೊನೆಯ ಬಜೆಟ್‌ನಲ್ಲಿ ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಹಣ ವರ್ಗಾಯಿಸುವ ಒಂದು ಯೋಜನೆಯ ಘೋಷಣೆ ಮಾಡಿದೆ. ಈ ಯೋಜನೆಯ ಪ್ರಕಾರ, ಅತಿ ಸಣ್ಣ ರೈತ ಕುಟುಂಬವೊಂದಕ್ಕೆ ವಾರ್ಷಿಕ 12,000 ರೂಗಳನ್ನು ಅವರ ಬ್ಯಾಂಕ್ ಖಾತೆಗೆ ಸರ್ಕಾರವೇ ನೇರವಾಗಿ ವರ್ಗಾಯಿಸುತ್ತದೆ. ಈ ಯೋಜನೆಯ ಸುಮಾರು 12 ಕೋಟಿ ಮಂದಿಗೆ ಅನುಕೂಲ ಕಲ್ಪಿಸುತ್ತದೆ ಎಂದು ಅವರು ಹೇಳುವಾಗ ಚುನಾವಣೆಗಳಲ್ಲಿ ವೋಟು ಬಾಚಿಕೊಳ್ಳುವುದಷ್ಟೇ ಅವರ ಉದ್ದೇಶ. ಆದರೆ, ಅವರು ಘೋಷಣೆ ಮಾಡಿರುವ ಹಣದ ಮೊತ್ತವು ಅದೆಷ್ಟು ಜುಜುಬಿ ಎಂದರೆ, ಅದರ ಬಗ್ಗೆ ಮೋದಿ ಕೂಡ ತಮ್ಮ ಚುನಾವಣಾ ಭಾಷಣಗಳಲ್ಲಿ ತುತ್ತೂರಿ ಊದುವುದನ್ನೇ ನಿಲ್ಲಿಸಿದ್ದಾರೆ. ಬದಲಿಗೆ, ಬಿಜೆಪಿಯು ಪ್ರಜ್ಞಾ ಠಾಕುರ್ ಅಂತಹ ಭಯೋತ್ಪಾದನೆ ಆರೋಪಿಯನ್ನು ಕಣಕ್ಕಿಳಿಸಿ ಕೋಮು ಭಾವನೆಗಳನ್ನು ಕೆಣಕಿ ವೋಟು ಬಾಚಿಕೊಳ್ಳುವ ತನ್ನ ಹಳೆಯ ಚಾಳಿಗೆ ಮರಳಿದೆ.

ಈಗ ಕಾಂಗ್ರೆಸ್‌ನ ಸರದಿ. ಅದು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ?ನ್ಯಾಯ್? ಎಂಬ ಹೆಸರಿನ ಒಂದು ಹೆಚ್ಚು ಮಹತ್ವಾಕಾಂಕ್ಷೆಯ ಯೋಜನೆಯನ್ನು ಘೋಷಿಸಿದೆ. ಅದರ ಪ್ರಕಾರ, ಸುಮಾರು ಐದು ಕೋಟಿ ಅತ್ಯಂತ ಬಡ ಕುಟುಂಬಗಳಿಗೆ ತಿಂಗಳಿಗೆ 6000 ರೂಗಳನ್ನು ಅವರ ಖಾತೆಗೆ ವರ್ಗಾಯಿಸಲಾಗುವುದು. ಈ ಯೋಜನೆಗೆ ವಾರ್ಷಿಕ 3.6 ಲಕ್ಷ ಕೋಟಿ ರೂ ವೆಚ್ಚ ತಗಲುತ್ತದೆ. (ಮೋದಿ ಸರ್ಕಾರದ ಯೋಜನೆಗೆ ತಗಲುವ ವೆಚ್ಚ ವಾರ್ಷಿಕ 72,000 ಕೋಟಿ ರೂಗಳು). ಕಾಂಗ್ರೆಸ್‌ನ ಈ ಯೋಜನೆಗೆ ಹಣ ಒದಗಿಸಿಕೊಳ್ಳುವ ಬಗ್ಗೆ ವಿವರಗಳು ಇನ್ನೂ ಲಭ್ಯವಿಲ್ಲವಾದರೂ ಈ ಯೋಜನೆ ಗಂಭೀರತೆಯಿಂದ ಕೂಡಿದೆ ಎಂಬ ಭಾವನೆ ಇದೆ.

ಬಡವರಿಗೆ ಈ ದೇಶದಲ್ಲಿ ದೊರೆಯುವ ಯಾವುದೇ ರೀತಿಯ ನೆರವು ಸ್ವಾಗತಾರ್ಹವೇ. ?ನ್ಯಾಯ್? ಯೋಜನೆಯಲ್ಲಿ ಎರಡು ಸಮಸ್ಯೆಗಳು ಎದ್ದು ಕಾಣುತ್ತವೆ. ಮೊದಲನೆಯ ಸಮಸ್ಯೆ ಎಂದರೆ, ಇದೊಂದು ನಗದು ಹಣ ವರ್ಗಾವಣೆಯ ಯೋಜನೆ. ಹಾಲಿ ಇರುವ ಕಲ್ಯಾಣ ಕಾರ್ಯಕ್ರಮಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಮತ್ತು ಅಧಿಕವಾಗಿ ಈ ಯೋಜನೆ ಸೇರಿಕೊಳ್ಳುತ್ತದೆ ಎಂದು ಭಾವಿಸಿಕೊಂಡರೂ ಸಹ, ಬಡವರಿಗೆ ಒಂದಿಷ್ಟು ಹಣ ಕೊಟ್ಟು ಸರ್ಕಾರ ಕೈ ತೊಳೆದುಕೊಳ್ಳುತ್ತದೆ, ಅಷ್ಟೆ. ಶಿಕ್ಷಣ ಮತ್ತು ಆರೋಗ್ಯ ಇಂತಹ ಸಾರ್ವತ್ರಿಕ ಅಗತ್ಯ ಸೇವೆಗಳನ್ನು ಒದಗಿಸುವ ತನ್ನ ಜವಾಬ್ದಾರಿಯಿಂದ ಸರ್ಕಾರ ನುಣುಚಿಕೊಳ್ಳುತ್ತದೆ. ಹಾಗಾಗಿ, ಇಂತಹ ಅಗತ್ಯ ಸೇವೆಗಳನ್ನು ಖಾಸಗಿಯಾಗಿ ಒದಗಿಸುವವರು ತಮ್ಮ ಸೇವೆಗಳ ಬೆಲೆ ಏರಿಸಿ ಬಡವರಿಗೆ ವರ್ಗಾವಣೆಯಾದ ಈ ಹಣವನ್ನು ತಮ್ಮ ಜೇಬಿಗೆ ಇಳಿಸಿಕೊಳ್ಳುತ್ತಾರೆ.

ಎರಡನೆಯ ಸಮಸ್ಯೆ ಎಂದರೆ, ಈ ಯೋಜನೆಯ ಕೆಲವೇ ಮಂದಿಗೆ ಮಾತ್ರ ಫಲ ದೊರಕಿಸುವ ಗುರಿ ಹೊಂದಿದೆ. ಹಾಗಾಗಿ, ಅನೇಕ ಮಂದಿ ಈ ಯೋಜನೆಯಿಂದ ಹೊರಗುಳಿಯುತ್ತಾರೆ. ಮೇಲಾಗಿ, ಫಲಾನುಭವಿಗಳ ಆಯ್ಕೆ ಮನಸೋ ಇಚ್ಛೆಯಾಗಿರುತ್ತದೆ. ಉದಾಹರಣೆಗೆ, ಒಂದು ನಿಗದಿಪಡಿಸಿದ ವರಮಾನ ಮಿತಿಯೊಳಗಿರುವ ಒಂದು ಕುಟುಂಬಕ್ಕೆ ತಿಂಗಳಿಗೆ 6000 ರೂ ದೊರೆಯುವಾಗ, ಆ ಮಿತಿಗಿಂತ ಒಂದು ರೂ ಹೆಚ್ಚಿನ ವರಮಾನವಿರುವ ಕುಟುಂಬಕ್ಕೆ ಏನೂ ಸಿಗುವುದಿಲ್ಲ. ಇದು ಬಡ ಜನತೆಯ ನಡುವೆ ವಿರಸ ಸೃಷ್ಟಿಸುತ್ತದೆ.

ಯಾವುದೇ ಸೀಮಿತ ಫಲಾನುಭವಿ ಯೋಜನೆಯು ಸರ್ಕಾರದ ಔದಾರ್ಯಪೂರ್ಣ ಬಕ್ಷೀಸು ಎನಿಸುತ್ತದೆ. ಇದನ್ನು ಪಡೆಯಲು ಒಬ್ಬ ವ್ಯಕ್ತಿಯು ದೈನ್ಯತೆಯಿಂದ ಕೋರಿಕೆ ಸಲ್ಲಿಸಬೇಕಾಗುತ್ತದೆ. ಇದು, ಮೂಲಭೂತವಾಗಿ ಪ್ರಜಾಪ್ರಭುತ್ವ-ವಿರೋಧಿ ನಡೆಯಾಗುತ್ತದೆ ಒಂದು ಸಾರ್ವತ್ರಿಕವಾಗಿ ಹಕ್ಕು ಆಗಿ ಪ್ರತಿ ಪ್ರಜೆಗೂ ಒದಗಿಸಬೇಕಾದ ಸರ್ಕಾರವು ಕೆಲವು ವಸ್ತುಗಳು ಮತ್ತು ಸೇವೆಗಳು, ಅದರ ಬದಲಿಗೆ ಅವನ್ನು ದಾನವೋ ಭಿಕ್ಷೆಯೋ ಎಂಬಂತೆ ಕೊಡುವಂತಾಗುತ್ತದೆ. ಆದ್ದರಿಂದ, ಕೆಲವು ಆರ್ಥಿಕ ಹಕ್ಕುಗಳು ಸಾರ್ವತ್ರಿಕವಾಗಿ ಜಾರಿಯಾದಾಗ ಮಾತ್ರ ಇಂತಹ ಸೀಮಿತ ಫಲಾನುಭವಿ ಯೋಜನೆಗಳು ಬಡ ಜನತೆಯ ನಡುವೆ ಸೃಷ್ಟಿಸುವ ವಿರಸ ನಿವಾರಣೆಯಾಗುತ್ತದೆ.

ಇಂತಹ ಯೋಜನೆಗಳ ಬಗ್ಗೆ ಅನಿಸಿಕೆಗಳನ್ನು ಬದಿಗೆ ಸರಿಸಿ, ಒಂದು ಪ್ರಶ್ನೆ ಕೇಳಬೇಕಿದೆ: ಇದ್ದಕ್ಕಿದ್ದಂತೆಯೇ ಇಂತಹ ವರ್ಗಾವಣೆಯ ವಿಷಯವನ್ನು ಏಕೆ ಎತ್ತಲಾಗಿದೆ? "ಅಭಿವೃದ್ಧಿ"ಯ ಬಗ್ಗೆ ಮಾತನಾಡಿಯೇ ಮೋದಿ 2014ರ ಚುನಾವಣೆ ಗೆದ್ದರು. ಅದಕ್ಕೂ ಹಿಂದೆ, ಜಿಡಿಪಿಯ ಬೆಳವಣಿಗೆ ದರ, ಭಾರತ ಒಂದು "ಬಲಿಷ್ಠ ಆರ್ಥಿಕ ಶಕ್ತಿ"ಯಾಗಿ ಹೊರಹೊಮ್ಮುವ ಬಗ್ಗೆ, "ಪ್ರಕಾಶಮಾನ ಭಾರತ" ಮುಂತಾದ ವಿಷಯಗಳ ಬಗ್ಗೆ ಚರ್ಚೆಯಾಗುತ್ತಿತ್ತೇ ವಿನಃ, ಯಾವತ್ತೂ ಬಡವರಿಗೆ ಹಣ ವರ್ಗಾಯಿಸುವ ಚರ್ಚೆ ಇರಲೇ ಇಲ್ಲ. ಯುಪಿಎ-1 ಸರ್ಕಾರ ಜಾರಿಗೆ ತಂದ ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ 2014ರ ಚುನಾವಣೆಯ ಸಂದರ್ಭದಲ್ಲಿಯೂ ಸಹ ಚರ್ಚೆಯಾಗಲಿಲ್ಲ. ಈ ಎಲ್ಲ ಅಂಶಗಳನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಜಿಡಿಪಿ ಉನ್ನತವಾಗಿ ಬೆಳೆಯುತ್ತದೆ ಮತ್ತು ಅದರಿಂದಾಗಿಯೇ ಎಲ್ಲರ ಏಳಿಗೆಯಾಗುತ್ತದೆ ಎಂಬುದಾಗಿ ಎಲ್ಲರೂ ನಂಬಿದ್ದರು. ಆದರೆ, ಈಗ ಇಂತಹ ಬೊಗಳೆಯ ಮಾತುಗಳಿಗೆ ಮತದಾರರು ಮರುಳಾಗುತ್ತಿಲ್ಲ.

ಈಗ ಪ್ರಸ್ತಾಪಿಸಲಾಗುತ್ತಿರುವ ನೇರ ವರ್ಗಾವಣೆಯು, ಸಂಕ್ಷಿಪ್ತವಾಗಿ ಹೇಳುವುದಾದರೆ, ನವ ಉದಾರ ಬಂಡವಾಳಶಾಹಿಯು ಬಿಕ್ಕಟ್ಟಿಗೆ ಒಳಗಾಗಿರುವ ಅಂಶವನ್ನು ಸೂಚಿಸುತ್ತದೆ. ನವ ಉದಾರ ಬಂಡವಾಳಶಾಹಿಯು ಉತ್ಪಾದಕ ಶಕ್ತಿಗಳನ್ನು ವೇಗವಾಗಿ ಬೆಳೆಸುವುದರಿಂದ ಜಿಡಿಪಿ ಉನ್ನತವಾಗಿ ಬೆಳೆಯುತ್ತದೆ. ಅದರಿಂದ ಎಲ್ಲರೂ ಪ್ರಯೋಜನ ಪಡೆಯುತ್ತಾರೆ ಎಂದು ಪ್ರಚುರಪಡಿಸುತ್ತಿದ್ದ ಅದರ ಸಿದ್ಧಾಂತವು ಈಗ ವಿಶ್ವಾಸಾರ್ಹತೆ ಕಳೆದುಕೊಂಡಿದೆ.

ಈ ಸಂಗತಿ ಬಿಜೆಪಿಯು ಹುಚ್ಚು ಹಿಡಿದ ರೀತಿಯಲ್ಲಿ ಪ್ರಚೋದನಾಕಾರಿ ಕೋಮು ಪ್ರಚಾರಕ್ಕೆ ಮರಳಿರುವ ಅಂಶದಲ್ಲಿಯೂ ಕಾಣ ಬರುತ್ತದೆ. ಹಿಂದೆ "ಅಭಿವೃದ್ಧಿ"ಯ ಬಗ್ಗೆ ಅವರು ಕೊಟ್ಟ ಭರವಸೆಗಳು ಈಗ ಟೊಳ್ಳು ಶಬ್ದಗಳಾಗಿ ಕೇಳಿಸುತ್ತಿವೆ, ಅವುಗಳನ್ನು ಈಗ ಪುನರಾವರ್ತಿಸುವಂತಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ, ಅಂದರೆ, ಬಂಡವಾಳಶಾಹಿಯ ಬಿಕ್ಕಟ್ಟಿನ ಸಂಭರ್ಧದಲ್ಲಿ, "ಅಭಿವೃದ್ಧಿ" ಘೋಷಣೆಯ ಮೂಲಕ ಎಳ್ಳಷ್ಟೂ ಪರಿಹಾರ ಸಿಗುವುದಿಲ್ಲ ಎಂಬುದು ಜನತೆಗೆ ಅನುಭವದ ಮೂಲಕವೇ ತಿಳಿದಿದೆ.

ಈ ವಿದ್ಯಮಾನಗಳನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನವ ಉದಾರ ಬಂಡವಾಳಶಾಹಿಯು ಇಂದು ಬಿಕ್ಕಟ್ಟಿಗೆ ಒಳಗಾಗಿರುವ ಪರಿಸ್ಥಿತಿಯಲ್ಲಿ ಅದಕ್ಕೆ ಬದ್ಧವಾಗಿರುವ ಒಂದು ರಾಜಕೀಯ ಪಡೆ ಸನ್ನಿಗೆ ಒಳಗಾದ ರೀತಿಯಲ್ಲಿ ಕೋಮು ಭಾವನೆಗಳನ್ನು ಕೆಣಕಿ ವೋಟು ಬಾಚಿಕೊಳ್ಳುವ ಸನ್ನಾಹದಲ್ಲಿ ತೊಡಗಿದೆ. ಅದೇ ಸಮಯದಲ್ಲಿ, ಇನ್ನೊಂದು ರಾಜಕೀಯ ಪಡೆ ಇನ್ನೊಂದು ರೀತಿಯಲ್ಲಿ ಕಾರ್ಯಮಗ್ನವಾಗಿದೆ. ವಿಶಾಲ ಜಾತ್ಯಾತೀತ ಮನೋಭಾವ ಹೊಂದಿರುವ ಈ ಪಡೆಯು ನವ ಉದಾರ ಬಂಡವಾಳಶಾಹಿಗೆ ಒಂದು "ಮಾನವೀಯ ಮುಖ" ತೊಡಿಸಿ, ಸಮಾಜದ ತಳಸ್ತರದದಲ್ಲಿವ ಒಟ್ಟು ಜನಸಂಖ್ಯೆಯ ಐದನೇ ಒಂದು ಭಾಗದಷ್ಟು ಮಂದಿಗೆ ನೇರ ಹಣ ವರ್ಗಾವಣೆಯ ಮೂಲಕ ನವ ಉದಾರ ಬಂಡವಾಳಶಾಹಿಯ ದಿಕ್ಪಥವನ್ನು ಪರಿಷ್ಕರಿಸುವ ಆಶ್ವಾಸನೆ ಕೊಡುತ್ತಿದೆ.

ನಿಜ, ಇಂತಹ ನೇರ ಹಣ ವರ್ಗಾವಣೆ ಯೋಜನೆ ಕಾರ್ಯಸಾಧ್ಯ, ಅವಕ್ಕೆ ಹಣ ಹೊಂದಿಸಿಕೊಳ್ಳುವುದು ಸಾಧ್ಯವಿದೆ. ಅದಕ್ಕೆ ತಗಲುವ ವೆಚ್ಚವು ಜಿಡಿಪಿಯ ಸುಮಾರು ಶೇ.2ರಷ್ಟಾಗುತ್ತದೆ. ಆದರೆ, ನವ ಉದಾರ ಬಂಡವಾಳಶಾಹಿಯ ಅಂತರ್ಗತ ತರ್ಕವೇ ಇಂತಹ ವರ್ಗಾವಣೆಗೆ ಅಡ್ಡಿಯಾಗುತ್ತದೆ. ಜಿಡಿಪಿಯ ಸುಮಾರು ಶೇ.2ರಷ್ಟಾಗುವ ಈ ಮೊತ್ತವನ್ನು ಬಂಡವಾಳದಾರರ ಮೇಲೆ ತೆರಿಗೆ ಹಾಕಿಯೋ ಅಥವಾ ಸಮಾಜದ ಶ್ರೀಮಂತ ವಿಭಾಗಗಳ ಮೇಲೆ ತೆರಿಗೆ ಹಾಕುವ ಮೂಲಕವೋ ಹೊಂದಿಸಿಕೊಳ್ಳಬಹುದು. ಅಥವಾ, ವಿತ್ತೀಯ ಕೊರತೆಯ ಗಾತ್ರವನ್ನು ಹೆಚ್ಚಿಸಿಕೊಳ್ಳುವ ಮೂಲಕ, ಅಥವಾ ಈ ಎರಡೂ ವಿಧಾನಗಳ ಸಂಯೋಜನೆಯ ಮೂಲಕವೂ ಹೊಂದಿಸಿಕೊಳ್ಳಬಹುದು. ಆದರೆ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವ ಈ ಎರಡೂ ವಿಧಾನಗಳನ್ನು ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಅನಿಷ್ಟವೆಂದೇ ಬಗೆಯುತ್ತದೆ. ಈ ಕಾರಣದಿಂದಾಗಿ, ನೇರ ಹಣ ವರ್ಗಾವಣೆಯ ಯೋಜನೆಯನ್ನು ಜಾರಿಗೊಳಿಸ ಬಯಸುವ ಯಾವುದೇ ಸರ್ಕಾರವು ನವ ಉದಾರವಾದದ ಏರ್ಪಾಡಿನಲ್ಲಿ ಕೆಲವು ಬದಲಾವಣೆ ಮಾಡಬೇಕಾಗುತ್ತದೆ (ಆಗ, ಈ ಬದಲಾವಣೆಯ ಕ್ರಿಯೆಯು ತನ್ನದೇ ಒಂದು ಗತಿ ತಾರ್ಕಿಕ ಚಲನೆಯನ್ನು ಹೊಮ್ಮಿಸುತ್ತದೆ). ಇದು ಸಾಧ್ಯವಾಗದಿದ್ದಲ್ಲಿ, ಹಾಲಿ ಕಲ್ಯಾಣ ಕಾರ್ಯಕ್ರಮಗಳನ್ನು ನಿಲ್ಲಿಸುವ ಮೂಲಕ ವರ್ಗಾವಣೆ ಯೋಜನೆಗೆ ಹಣ ಹೊಂದಿಸಿಕೊಳ್ಳಬೇಕಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ವರ್ಗಾವಣೆಯ ಉದ್ದೇಶವೇ ವಿಫಲವಾಗುತ್ತದೆ.

ಬಂಡವಾಳಶಾಹಿ ವ್ಯವಸ್ಥೆಯು ತನ್ನನ್ನು ತಾನು ಸಮರ್ಥಿಸಿಕೊಳ್ಳುವ ಸಲುವಾಗಿಯೇ ಸ್ವಲ್ಪ ಮಟ್ಟಿನ ನೆರವನ್ನು ಬಡವರಿಗೆ ಒದಗಿಸಬಲ್ಲದು, ಮತ್ತು ಒದಗಿಸುತ್ತದೆ, ಇಂತಹ ವರ್ಗಾವಣೆ ಯೋಜನೆಗಳನ್ನು, ಅಥವ ಟ್ಟಾರೆಯಾಗಿ ಕಲ್ಯಾಣ ವೆಚ್ಚಗಳನ್ನು ಸ್ವಾಗತಿಸುವುದು "ಪರಿಷ್ಕರಣವಾದ' ಆಗುತ್ತದಷ್ಟೇ ಎಂಬುದಾಗಿ ವಾದಿಸುವ ಪ್ರವೃತ್ತಿ ಕೆಲವು ಎಡ ಪಂಥೀಯ ವಲಯಗಳಲ್ಲಿದೆ. ನೇರ ಹಣ ವರ್ಗಾವಣೆ ಅಥವಾ ಕಲ್ಯಾಣ ಕಾರ್ಯಕ್ರಮಗಳು ವ್ಯವಸ್ಥೆಯಲ್ಲಿ ಕಾರ್ಯಸಾಧ್ಯವಾದ ಕೇವಲ ಸುಧಾರಣಾ ಕ್ರಮಗಳು. ಅದಕ್ಕೆ ಪ್ರಶಂಸೆಯ ಅಗತ್ಯವಿಲ್ಲ ಎನ್ನುತ್ತಾರೆ ಅವರು.

ವ್ಯಂಗ್ಯದ ಸಂಗತಿಯೆಂದರೆ ಬಡವರಿಗೆ ನೆರವು ಒದಗಿಸುವ ಬಗ್ಗೆ ನವ ಉದಾರ ಬಂಡವಾಳಶಾಹಿಯ ಸಮರ್ಥಕರು ಹೊಂದಿರುವ ಅಭಿಪ್ರಾಯವೂ ಇದೇ ರೀತಿಯಲ್ಲಿದೆ. ಬಡವರಿಗೆ ನೆರವು ಒದಗಿಸಬಹುದಾದಷ್ಟು ಹೊಂದಿಕೆಯನ್ನು ಅದು ಮಾಡಿಕೊಳ್ಳಬಲ್ಲದು, ಅದರ ಅಂತರ್ಗತ ತರ್ಕವು ಇಂತಹ ನೆರವಿಗೆ ಅಡ್ಡಿಯಾಗುವುದಿಲ್ಲ ಎಂದು ಅವರು ವಾದಿಸುತ್ತಾರೆ.

ಶ್ರೀಮಂತರಿಗೆ ಮತ್ತು ಕಾರ್ಪೊರೇಟ್‌ಗಳಿಗೆ ತೆರಿಗೆ ಕಡಿತ ಮಾಡಿದರೆ ಅದರ ಫಲವು ಕೆಳಕ್ಕೆ ಜಿನುಗಿ ತಳಸ್ತರಗಳಿಗೂ ಪ್ರಯೋಜನ ಸಿಗುತ್ತದೆ ಎಂಬ "ಜಿನುಗು ಸಿದ್ಧಾಂತ"ವು ಅಪಹಾಸ್ಯಗೊಳಗಾಗಿದ್ದ ಸಂದರ್ಭದಲ್ಲಿ ನವ ಉದಾರ ಬಂಡವಾಳಶಾಹಿಯ ಹೊಸ ಸಮರ್ಥನೆಯಾಗಿ, ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ದಸ್ತಾವೇಜಿನಲ್ಲಿ, ಜಿಡಿಪಿ ಉನ್ನತವಾಗಿ ಬೆಳೆದಾಗ ಮಾತ್ರ ಸರ್ಕಾರದ ಆದಾಯವೂ ವೇಗವಾಗಿ ಬೆಳೆದು ಬಡತನ ತೊಡೆದು ಹಾಕುವ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚು ಹಣ ದೊರೆಯುತ್ತದೆ ಎಂಬುದಾಗಿ ಹೇಳಲಾಗಿತ್ತು. ಇದೊಂದು ಸೋಗು. ಬಡತನ ನಿವಾರಿಸುವ ಸಲುವಾಗಿ ಅಗತ್ಯ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ನವ ಉದಾರ ಆಳ್ವಿಕೆಯು ಅಡ್ಡಿಪಡಿಸುವುದಿಲ್ಲ ಎಂದು ತೋರಿಸಲು ಈ ರೀತಿಯ ಸೋಗು ಹಾಕಲಾಗಿತ್ತು.

ಸರ್ಕಾರದ ಈ ಅಭಿಪ್ರಾಯ ಸರಿಯೇ ಇದ್ದರೆ, ನವ ಉದಾರ ಆಳ್ವಿಕೆಯಲ್ಲಿ ಉನ್ನತವಾಗಿ ಜಿಡಿಪಿ ಬೆಳೆದದ್ದರ ಜೊತೆಯಲ್ಲೇ ಬಡತನವೂ ಅಗಾಧವಾಗಿ ಬೆಳೆಯುತ್ತಿರಲಿಲ್ಲ. ಹಸಿವೆಯ ಹಾಹಾಕಾರ ತೀವ್ರಗೊಳ್ಳುತ್ತಿರಲಿಲ್ಲ. ನಿರುದ್ಯೋಗ ಬೃಹದಾಕಾರವಾಗಿ ಬೆಳೆಯುತ್ತಿರಲಿಲ್ಲ. ದುಡಿಯುವ ಜನತೆಯ ತಲಾ ವರಮಾನವು ಉದಾರೀಕರಣ ಪೂರ್ವದಲ್ಲಿ ಇದ್ದುದಕ್ಕಿಂತಲೂ ಕೆಳಗೆ ಇಳಿಯುವ ಮಟ್ಟಿಗೆ ಅವರನ್ನು ಹಿಂಡುತ್ತಿರಲಿಲ್ಲ. ಇವೆಲ್ಲವೂ ಅಲ್ಲಗಳೆಯಲಾಗದ ವಾಸ್ತವ ಸಂಗತಿಗಳು. ಸ್ವಲ್ಪವೂ ಜಗ್ಗದ ನವ ಉದಾರ ಬಂಡವಾಳಶಾಹಿಯ ವರ್ತನೆಯಿಂದಾಗಿಯೇ ಇವೆಲ್ಲವೂ ಘಟಿಸಿವೆ. ಜೊತೆಯಲ್ಲಿ, ಅದರ ಅಂತರ್ಗತ ತರ್ಕದ ಅಗತ್ಯವಾಗಿ ಒಂದು ಧೃವದಲ್ಲಿ ಬೆಳೆಯುತ್ತಲೇ ಹೋಗುವ ಐಶ್ವರ್ಯವನ್ನೂ, ಇನ್ನೊಂದು ಧೃವದಲ್ಲಿ ಹೆಚ್ಚುತ್ತಲೇ ಹೋಗುವ ಬಡತನವನ್ನೂ ಹುಟ್ಟಿಸಿದೆ. ಇಂತಹ ಒಂದು ವ್ಯವಸ್ಥೆಯೊಳಗೆ ಬಡತನ ನಿವಾರಣೆ ಸಾಧ್ಯವೇ ಇಲ್ಲ. ಬಡತನ ನಿವಾರಣೆ ಸಾಧ್ಯವಾಗಬೇಕು ಎಂದಾದರೆ ನವ ಉದಾರ ಆಳ್ವಿಕೆಯ ಏರ್ಪಾಡನ್ನು ಮೀರಲೇಬೇಕಾಗುತ್ತದೆ.

ಕರಾರುವಾಕ್ಕಾಗಿ ಇದೇ ಕಾರಣದಿಂದಾಗಿ, ಬಡವರಿಗೆ ಪರಿಹಾರ ದೊರಕಿಸುವ ಆಶ್ವಾಸನೆಯಿಂದ ಕೂಡಿದ ಕ್ರಮಗಳನ್ನು ಕೈಗೊಳ್ಳಲು ನವ ಉದಾರವಾದದಿಂದ ಆಚೆ ನೋಡಲಾಗದ ರಾಜಕೀಯ ಪಡೆಗಳು ಮುಂದಾದಾಗ ಎಡ ಪಂಥೀಯರು ಅದನ್ನು ಸ್ವಾಗತಿಸಬೇಕು. ಏಕೆಂದರೆ, ನವ ಉದಾರವಾದದ ತರ್ಕ ಮತ್ತು ಚಾಳಿಯಿಂದಾಗಿ ಒಂದೋ ಈ ಆಶ್ವಾಸನೆ ಕೊಟ್ಟವರು ಅದನ್ನು ಮುರಿಯುತ್ತಾರೆ, ಆಗ ಎಡ ಶಕ್ತಿಗಳು ಅದನ್ನು ಎತ್ತಿ ತೋರಿಸಿ ಅದರ ವಿರುದ್ಧ ಹೋರಾಡಬೇಕಾಗುತ್ತದೆ, ಇಲ್ಲವೇ ನವ ಉದಾರ ವ್ಯವಸ್ಥೆಯನ್ನು ಮೀರಲು ಆರಂಭಗೊಳ್ಳುವ ಒಂದು ಗತಿತಾರ್ಕಿಕ ಪ್ರಕ್ರಿಯೆಯನ್ನು ಎಡ ಶಕ್ತಿಗಳು ಉದ್ದೀಪಿಸಬಹುದು.

ನವ ಉದಾರವಾದಿ ಬಂಡವಾಳಶಾಹಿಯ ಬಿಕ್ಕಟ್ಟಿನ ಸಮಯದಲ್ಲಿ ಮತ್ತು ಅದರ ಪರಿಣಾಮವಾಗಿ ಜನತೆ ಜರ್ಜರಿತರಾಗಿದ್ದಾರೆ. ಅವರ ಆಕ್ರೋಶವನ್ನು ಬೇರೆಡೆಗೆ ತಿರುಗಿಸುವ ಉದ್ದೇಶದಿಂದ ಕಾರ್ಪೊರೇಟ್-ಹಣಕಾಸು ಕುಳಗಳು ಕೋಮುವಾದಿ ಮತ್ತು ಛಿದ್ರಕಾರಿ ಅಜೆಂಡಾ ಹೊಂದಿರುವ ಶಕ್ತಿಗಳನ್ನು ಪ್ರೋತ್ಸಾಹಿಸುವ ಪ್ರವೃತ್ತಿ ಬೆಳೆಸಿಕೊಂಡಿರುವ ಸನ್ನಿವೇಶದಲ್ಲಿ, ಜನ ಜೀವನದ ದೈಹಿಕ ಸ್ಥಿತಿ-ಗತಿಗಳ ಬಗ್ಗೆ ಗಮನವನ್ನು ಕೇಂದ್ರೀಕರಿಸಿ ಅವರ ಸ್ಥಿತಿ-ಗತಿಗಳನ್ನು ಸುಧಾರಿಸುವ ಯಾವುದೇ ಕಾರ್ಯಕ್ರಮವು ಆ ಕಾರಣದಿಂದಾಗಿಯೇ ಕಾರ್ಪೊರೇಟ್-ಕೋಮುವಾದಿ ಮೈತ್ರಿಗೆ ಎದುರಾಗುವ ಒಂದು ಪ್ರಗತಿಪರ ಪ್ರತಿ-ಶಕ್ತಿಯಾಗುತ್ತದೆ. ಜನರ ಜೀವನ, ಅವರ ಸ್ಥಿತಿ-ಗತಿಗಳನ್ನು ಸುಧಾರಿಸುವ ಕಾರ್ಯಕ್ರಮ ಮತ್ತು ನವ ಉದಾರವಾದಿ ಬಂಡವಾಳಶಾಹಿಯ ತರ್ಕ ಇವುಗಳ ನಡುವೆ ಇರುವ ವೈರುಧ್ಯದ ಅರಿವಿಲ್ಲದ ಬೂರ್ಜ್ವಾ ರಾಜಕೀಯ ಪಡೆಗಳು ಜನರ ಸ್ಥಿತಿ-ಗತಿಗಳು ಸುಧಾರಿಸಬೇಕೆಂದು ಸಮರ್ಥಿಸುವುದು ಅಷ್ಟರಮಟ್ಟಿಗೆ ಒಳ್ಳೆಯದೇ. ●

## ಸಿಐಟಿಯು ಸುವರ್ಣ ಮಹೋತ್ಸವ......

ಪುಟ 10 ರಿಂದ

ಆಚೆ ನಡೆಯಿತು. ಜಂಟಿ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ 18 ದೇಶಾದ್ಯಂತದ ಮುಷ್ಕರಗಳನ್ನು ಹಮ್ಮಿಕೊಳ್ಳಲಾಯಿತು. ಇದರಲ್ಲಿ ಇತ್ತೀಚಿನದೆಂದರೆ ಜನರಿ 8 ಮತ್ತು 9, 2019ರಲ್ಲಿ ನಡೆದ ಐತಿಹಾಸಿಕ ಹೋರಾಟ, 20 ಕೋಟಿ ಕಾರ್ಮಿಕರು ಈ ಮುಷ್ಕರದಲ್ಲಿ ಭಾಗವಹಿಸಿದ್ದು, ಸಾಮಾನ್ಯ ಜನರಿಂದಲೂ ಈ ಹೋರಾಟ ಅಪಾರ ಬೆಂಬಲ ಗಳಿಸಿತು.

- ಇದಲ್ಲದೆ, ಸಿಐಟಿಯು ಸಂಯೋಜಿತ ವಿವಿಧ ಒಕ್ಕೂಟಗಳು ತಮ್ಮ ತಮ್ಮ ವ್ಯಾಪ್ತಿಯ ಕಲ್ಲಿದ್ದಲು, ಸ್ಟೀಲ್, ಪ್ಲಾಂಟೇಶನ್‌ಗಳು, ಅಂಗನವಾಡಿ, ಆಶಾ, ಮಧ್ಯಾಹ್ನ ಊಟದ ಕಾರ್ಮಿಕರು ಇತ್ಯಾದಿ ಕ್ಷೇತ್ರಗಳ ಕಾರ್ಮಿಕರನ್ನು ಸಂಘಟಿಸುತ್ತಾ ಪ್ರಬಲ ಜಂಟಿ ಹೋರಾಟಗಳನ್ನು ಕಟ್ಟುತ್ತಿದ್ದಾರೆ.
- ಸಿಐಟಿಯುವಿನಿಂದ ಈ ರೀತಿ ಸ್ವತಂತ್ರವಾಗಿ ಕೈಗೊಳ್ಳಲಾದ ಪ್ರಚಾರಗಳು ಮತ್ತು ಹೋರಾಟಗಳು ಜಂಟೀ ಪ್ರಚಾರ ಮತ್ತು ಜಂಟಿ ಹೋರಾಟಗಳಿಗೆ ಸ್ಫೂರ್ತಿ ಮತ್ತು ಪ್ರೇರಣೆ ನೀಡಿವೆ. ಹೀಗಿದ್ದರೂ, ಇತರ ಕಾರ್ಮಿಕ ಸಂಘಟನೆಗಳು ಸಿಐಟಿಯುವನ್ನು ಏಕಾಂಗಿಯಾಗಿ ಮಾಡಿ ಸರಕಾರಿ ನೀತಿಯನ್ನು ಬೆಂಬಲಿಸಿದಾಗ, ದುಡಿಯುವ ವರ್ಗದ ಹಿತಾಸಕ್ತಿಗಳ ಪರವಾಗಿ ಸಿಐಟಿಯು ಒಂಟಿಯಾಗೇ ಧ್ವನಿ ಎತ್ತಲು ಎಂದೂ ಹಿಂಜರಿದಿಲ್ಲ. ಇದಕ್ಕೆ ಉತ್ತಮ ನಿದರ್ಶನಗಳು ಎಂದರೆ 1971ರ ಕುಟುಂಬ ಪಿಂಚಣಿ ಯೋಜನೆ ಮತ್ತು 1995ರ ನೌಕರರ ಪಿಂಚಣಿ ಯೋಜನೆ 1995– ಇವುಗಳ ವಿರುದ್ದ ಸಿಐಟಿಯು ಹಮ್ಮಿಕೊಂಡ ಹೋರಾಟ.
- ಸಿಐಟಿಯುವಿನ ವಿವಿಧ ಒಕ್ಕೂಟಗಳು ಮತ್ತು ರಾಜ್ಯ ಸಮಿತಿಗಳು, ಬೃಹತ್ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ದುಡಿಯುವ ವರ್ಗದ ದಿನ ನಿತ್ಯದ ಅನೇಕ ಜ್ವಲಂತ ಸಮಸ್ಯೆಗಳ ವಿರುದ್ದ ವಿವಿಧ ಸ್ತರದಲ್ಲಿ ಸಾವಿರಾರು ಕಾರ್ಮಿಕರನ್ನು, ಸಿಐಟಿಯು ಸಂಘಟಿಸಿದೆ.
- ಇದರ ಕಾರ್ಮಿಕ ವರ್ಗದ ಐಕ್ಯತೆಯನ್ನು ಬೆಳೆಸುವುದರ ಜೊತೆಯಲ್ಲೇನಮ್ಮ ಸಮಾಜ ಉತ್ಪಾದನಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಇತರ ಮೂಲಭೂತ ವರ್ಗಗಳಾದ ಕೃಷಿ ಕಾರ್ಮಿಕರು, ರೈತರು ಇತ್ಯಾಧಿಯವರನ್ನು ಜಂಟಿ ಹೋರಾಟದ ಭಾಗವಾಗಿ ಸೇರಿಸಿಕೊಳ್ಳುವ ಅಗತ್ಯ ಮತ್ತು ಮಹತ್ವವನ್ನು ಸಿಐಟಿಯು ಅರಿತುಕೊಂಡಿತು. ಹೀಗೆ ಮಾಡುವುದರ ಮೂಲಕ ಜನವಿರೋಧಿ ನೀತಿಗಳ ವಿರುದ್ದ ಹೋರಾಟಗಳನ್ನು ರೂಪಿಸುತ್ತಾ, ಅಂತಿಮ ಗುರಿಯಾದ ಶೋಷಣಾ ರಹಿತ ಸಮಾಜದತ್ತ ಅವರನ್ನೂ ಕೊಂಡೊಯ್ಯುವ ಕೆಲಸ ಬಹು ಮುಖ್ಯವಾದುದ್ದು ಎನ್ನುವುದನ್ನು ಸಿಐಟಿಯು ಅರಿತು ಕೊಂಡಿತು. ಇದರ ಸಾಧನೆಗಾಗಿ ಅನೇಕ ಜಂಟೀ ಪ್ರಸಾರ ಕಾರ್ಯಕ್ರಮಗಳು ಮತ್ತು ಕಾರ್ಮಿಕರು, ಕೃಷಿ ಕಾರ್ಮಿಕರು ಮತ್ತು ರೈತರುಗಳ ಸಾರ್ವತ್ರಿಕ ಬೇಡಿಕೆಗಳನ್ನು ಪ್ರಚಾರ ಮಾಡುತ್ತಾ ಬಂದಿದೆ. 1982 ಜನವರಿ 19 ರಂದು ಸಾವನ್ನಪ್ಪಿದ ರೈತರು ಮತ್ತು ಕಾರ್ಮಿಕ ಹುತಾತ್ಮ ದಿನವನ್ನು ಆಚರಿಸುವುದು ಈ ಪ್ರಯತ್ನದ ಭಾಗವಾಗಿದೆ. ಆ ದಿನ ಸ್ವಾತಂತ್ರೋತ್ತರ ಇಂಡಿಯಾದ ಪ್ರಥಮ ರೈತ ಮತ್ತು ಕಾರ್ಮಿಕರ ಜಂಟಿ ಮುಷ್ಕರದ ದಿನವಾಗಿರುತ್ತದೆ. ಅಂದು ಕಾರ್ಮಿಕರು ಕೃಷಿ ಕಾರ್ಮಿಕರ ಮತ್ತು ರೈತರ ಬೇಡಿಕೆಗಳಿಗೆ ಧ್ವನಿಯಾಗಿ ನಿಂತರು. ಸೆಪ್ಟಂಬರ್ 5, 2018 ರಂದು, ನಡೆದ " ಮಜ್ದೂರ್ ಕಿಸಾನ್ ರ್‍ಯಾಲಿ "ರಾಜಧಾನಿ, ದೆಹಲಿಯಲ್ಲಿ ನಡೆದ ಆ ರೀತಿಯ ಮೊದಲ ರ್‍ಯಾಲಿಯಾಗಿತ್ತು. ಈ ರ್‍ಯಾಲಿಯಲ್ಲಿ ಲಕ್ಷಾಂತರ ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರು ಭಾಗವಹಿಸಿದ್ದರು. ಇದು ಇಡೀ ದೇಶದ ಪ್ರಗತಿಪರರಿಗೆ ಮತ್ತು ದುಡಿಯುವ ಜನತೆಗೆ ಸ್ಫೂರ್ತಿದಾಯಕವಾಗಿತ್ತು.
- ದುಡಿಯುವ ಮಹಿಳೆಯರನ್ನು ಸಂಘಟಿಸುವುದಲ್ಲಿ ಸಿಐಟಿಯು ಪ್ರಪ್ರಥಮ ಸಂಘಟನೆಯಾಗಿದೆ ಮತ್ತು ವರ್ಗಐಕ್ಯತೆ ಮತ್ತು ಐಕ್ಯ ಚಳವಳಿಯನ್ನು ಅದನ್ನು ಬಲಪಡಿಸುವ ಸ್ಪಷ್ಟ ಕಣ್ಣೋಟದ ಭಾಗವಾಗಿ ಈ ಕೆಲಸ ಕೈಗೆತ್ತಿಕೊಂಡಿದೆ. ಇದರ ಭಾಗವಾಗಿಯೇ 1979 ರಲ್ಲಿ ಪ್ರಥಮ ಬಾರಿ ದುಡಿಯುವ ಮಹಿಳೆಯರ ಅಖಿಲ ಭಾರತ ರಾಷ್ಟ್ರೀಯ ಸಮಾವೇಶವನ್ನು ಕಾರ್ಮಿಕ ಸಂಘಗಳ ಜಂಟಿ ಸಮಿತಿ ನೇತೃತ್ವದಲ್ಲಿ ಸಂಘಟಿಸಿ ಆ ವಿಭಾದ ಮಹಿಳೆಯರ ನಡುವೆ ಸಂಘಟನೆಯನ್ನು ಬಲಪಡಿಸುವ ಭಾಗವಾಗಿ ದುಡಿಯುವ ಮಹಿಳೆಯರ ಅಖಿಲ ಭಾರತ ಸಮನ್ವಯ ಸಮಿತಿಯನ್ನು ಅಸ್ತಿತ್ವಕ್ಕೆ ತರಲಾಯಿತು. ಈ ರೀತಿಯ ದುಡಿಯುವ ಮಹಿಳೆಯರನ್ನು ಒಗ್ಗೂಡಿಸುವ ದಣಿವೇ ಇಲ್ಲದ ಕಾರ್ಯಕ್ರಮದ ಫಲವಾಗಿ ಸಿಐಟಿಯುವಿನ ಮಹಿಳಾ ಪ್ರಾತಿನಿಧ್ಯ ಶೆ. 33 ಕ್ಕೂ ಹೆಚ್ಚಿದೆ. (ದುಡಿಯುವ ಮಹಿಳೆಯರ ಅಖಿಲ ಇಂಡಿಯಾ ಸಮನ್ವಯ ಸಮಿತಿ ಸ್ಥಾಪನೆ ಆಗಿ, 2019ಕ್ಕೆ ಸರಿಯಾಗಿ 40 ವರ್ಷ ಆಗುತ್ತದೆ ಎಂಬುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.) ಸಿಐಟಿಯುವಿನ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಮಾತ್ರವಲ್ಲದೆ ನಿರ್ಣಯ ಕೈಗೊಳ್ಳುವ ಮಂಡಳಿಗಳ ಎಲ್ಲಾ ಸ್ಥರಗಳಲ್ಲೂ ಮಹಿಳೆಯರು ಇದ್ದಾರೆ. ಎಂಬುದನ್ನು ಹೆಮ್ಮೆಯಿಂದ ತಾವು ಇಲ್ಲಿ ಗುರ್ತಿಸಬಹುದಾಗಿದೆ.
- ನವ ಉದಾರೀಕರಣ ನೀತಿಗಳಿಂದಾಗಿ ವಿಸ್ತೃತಗೊಂಡ ಅಸಂಘಟಿತ ವಲಯದ ಕಾರ್ಮಿಕರನ್ನು ಸಂಘಟಿಸುವತ್ತ ಸಿಐಟಿಯು ಗಮನ ಹರಿಸಿದೆ. ಇದು ಶೋಷಿತ ವರ್ಗವನ್ನು ಒಗ್ಗೂಡಿಸುವ ಸಿಐಟಿಯುವಿ ವರ್ಗ ಐಕ್ಯತೆಯ ಭಾಗವಾಗಿದೆ. ಅಸಂಘಟಿತ ವಲಯದ ಕಾರ್ಮಿಕರನ್ನು ಅವರ ವೃತ್ತಿ ಅನುಸಾರ ಸಂಘಟಿಸಿ ಮತ್ತು ಅವರುಗಳ ವಿಶಿಷ್ಟ ಬೇಡಿಕೆಗಳ ಅನುಸಾರ ಸಜ್ಜುಗೊಳಿಸಲಾಗಿದೆ. ಇಂದು ಸಿಐಟಿಯುನ ಶೇ. 70ರಷ್ಟು ಭಾಗ ಅಸಂಘಟಿತ ವಲಯದ ಸದಸ್ಯರಿಂದ ಕೂಡಿದೆ.
- "ನಾಯಕರನ್ನು ಹಿಂಬಾಲಿಸುವ ಪಡೆಯಾಳು" ರೀತಿಯ ಸಂಘಟನೆಯಾಗಿದ್ದರೆ, ಎಲ್ಲ ರೀತಿಯ ಶೋಷಣೆಗಳಿಂದ ಮುಕ್ತಿ ಹೊಂದಿದ ಸಮಾಜವನ್ನು ನಿರ್ಮಿಸಬೇಕು ಎನ್ನುವ ತನ್ನ ಗುರಿ ಮುಟ್ಟಲು ಸಾಧ್ಯವಿಲ್ಲ ಎಂಬುದು ಸಿಐಟಿಯುವಿಗೆ ಚೆನ್ನಾಗಿ ಅರ್ಥವಾಗಿದೆ. ಹಿಂದೆ ಎಐಟಿಯುಸಿಯ ಭಾಗವಾಗಿದ್ದಾಗ ಪ್ರಜಾತಾಂತ್ರಿಕ ವಿರೋಧ ಕ್ರಮಗಳನ್ನು ಎದುರಿಸಿ ಸಿಐಟಿಯು ಹೋರಾಟ ಮಾಡಿದೆ. ಮತ್ತು ಸಂಘಟನೆಗಳ ಒಳಗೆ ಕಾರ್ಮಿಕ ಯೂನಿಯನ್ ಗಳ ಪ್ರಜಾತಾಂತ್ರಿಕತೆಯ ಮಹತ್ವನ್ನು ಸಿಐಟಿಯು ಒತ್ತಿ ಹೇಳುತ್ತಿದೆ.
- ತನ್ನ 50 ವರ್ಷಗಳ ಇತಿಹಾಸದಲ್ಲಿ ಸಂಘಟನೆಗೆ ಸಂಬಂಧಿಸಿದ ಎರಡು ದಸ್ತಾ ವೇಜುಗಳನ್ನು ಅಳವಡಿಸಿಕೊಂಡಿರುವುದು ಸಿಐಟಿಯುವಿನ ಮಹತ್ವದ ಮೈಲಿಗಲ್ಲುಗಳು. ಇವುಗಳಲ್ಲಿ ಮೊದಲನೆಯ ದಸ್ತಾವೇಜು 1993 ರಲ್ಲಿ ಅಂಗೀಕೃತಗೊಂಡ ಭುವನೇಶ್ವರ ಸಂಘಟನಾ ದಸ್ತಾವೇಜು ಎಂದು ಕರೆಯಲ್ಪಡುತ್ತಿದೆ. ಇದು ತನ್ನ ಸಂಘಟನೆಯನ್ನು ಬಲಗೊಳಿಸುವಂಥ ಮೂಲಭೂತ ಮಾರ್ಗದರ್ಶಿಯಾಗಿ ಇಂದಿಗೂ ಪ್ರಸ್ತುತವಾಗಿದೆ. 2018 ರಲ್ಲಿ ಕೋಜಿಕೋಡ್(ಕೇರಳ) ನಲ್ಲಿ ಇದನ್ನು ಪರಿಷ್ಕೃತಗೊಳಿಸಲಾಯಿತು. ತನ್ನ ಮೂಲಭೂತ ನಿಲುವನ್ನು ಉಳಿಸಿಕೊಳ್ಳುತ್ತಲೇ ಅದನ್ನು ಒತ್ತಿ ಹೇಳುತ್ತಾ, ಬದಲಾದ ಪರಿಸ್ಥಿತಿಯ ಬೇಡಿಕೆಗಳ ಅನುಸಾರ ಇಲ್ಲಿ ಮಾರ್ಪಾಡು ಮಾಡಲಾದ ದಸ್ತಾವೇಜು ಇದಾಗಿದೆ. ಭುವನೇಶ್ವರ ದಸ್ತಾವೇಜು ಮತ್ತು ಕೋಜಿಕೋಡ್ ದಸ್ತಾವೇಜು ತೆರೆದ ಮನಸ್ಸಿನಿಂದ ಮುಕ್ತವಾಗಿ ವಿಮರ್ಶೆ ಮಾಡುತ್ತದೆ. ಮತ್ತು ಸ್ವವಿಮರ್ಶೆಗಳನ್ನ ಒಳಗೊಂಡಿವೆ. ತನ್ನ ತಪ್ಪುಗಳನ್ನು ಗುರ್ತಿಸಿ ಅವುಗಳನ್ನು ತಿದ್ದಿಕೊಳ್ಳುವುದರ ಮೂಲಕ ಸಂಘಟನೆಯನ್ನು ಬಲಗೊಳಿಸಿ ಕೊಳ್ಳುವ ಸಿಐಟಿಯುವಿನ ದೃಢ ಸಂಕಲ್ಪಕ್ಕೆ ಈ ಭುವನೇಶ್ವರ ಮತ್ತು ಕೋಜಿಕೋಡ್‌ನ ದಸ್ತಾವೇಜುಗಳು ಸಾಕ್ಷಿಯಾಗಿವೆ. ತನ್ನ ರಾಜಕೀಯ ಕಾರ್ಯಕ್ರಮವನ್ನು ತನ್ನ ಸಂಘಟನೆಯ ಕಾರ್ಯಾಚರಣೆಯಿಂದ ಪ್ರತ್ಯೇಕ ಮಾಡಬಾರದು ಎಂಬುದನ್ನು ಕುರಿತು ಸಿಐಟಿಯುಗೆ ಸ್ಪಷ್ಟವಾದ ಅರಿವಿದೆ.

ಇಂದು ನಾವು ನಮ್ಮ ಸಂಘಟನೆಯ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದ್ದೇವೆ ಈ ಸಂದರ್ಭದಲ್ಲಿ ನಮ್ಮ ದೇಶದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ನಾವು ವಹಿಸಿರುವ ವೈಭವೋಪೇತ ಪಾತ್ರವನ್ನು ಹಮ್ಮೆಯಿಂದ ನೆನಪು ಪಾಡಿಕೊಳ್ಳುತ್ತಿದ್ದೇವೆ. ಸಾವಿರಾರು ಕಾರ್ಮಿಕರು ಮತ್ತು ಪಡೆಯಾಳುಗಳ ತ್ಯಾಗ, ಬಲಿದಾನ ಮತ್ತು ಹೋರಾಟಗಳ ಪರಂಪರೆ ಮತ್ತು ಬಳುವಳಿ ನಮ್ಮ ಮುಂದೆ ಇದೆ. ಸ್ವಾತಂತ್ರ್ಯ ಬಂದ ದಿನದಿಂದ ಈ ಸಂಗಾತಿಗಳು ಎಲ್ಲ ಶೋಷಣೆಗಳಿಗೆ ಮುಕ್ತಾಯ ಮತ್ತು ಸಮಾಜದ ಪರಿವರ್ತನೆಗೆ ವರ್ಗ ಸಂಘರ್ಷವೇ ಮಾಧ್ಯಮ ಎಂದು ಆಳವಾಗಿ ನಂಬಿದ್ದರು.ಎಲ್ಲಾ ರೀತಿಯ ಶೋಷಣೆಗಳಿಗೆ ಪೂರಕವಾದ ಬಂಡವಾಳ ವ್ಯವಸ್ಥೆಗೆ ಪರ್ಯಾಯವೆಂದರೆ ಸಮಾಜವಾದ ಎಂದೂ ನಂಬಿದ್ದರು.ಈ ರೀತಿಯ ಶೋಷಣೆಗಳಿಂದ ಮುಕ್ತ ಸಮಾಜದ ಕಣ್ಣೋಟ ಹೊಂದಿದ್ದ ಆ ಪರಂಪರೆಯ ಕೊಡುಗೆಯನ್ನು ನಾವು ಇಂದು ನಮ್ಮ ಹೆಗಲ ಮೇಲೆ ಹೊತ್ತು ನಡೆದಿದ್ದೇವೆ. ಒಂದು ಶತಮಾನದ ಹಿಂದೆ ಮೊದಲ ಕಾರ್ಮಿಕ ಸಂಘಟನೆಯನ್ನು ಕಟ್ಟಿದ ನಮ್ಮ ಹಿರಿಯರೆಲ್ಲ ಈ ರೀತಿಯ ಶೋಷಣಾ ರಹಿತ ಸಮಾಜದ ಕನಸನ್ನು ಧ್ಯೇಯವಾಗಿ ಹೊಂದಿದ್ದರು.

ವರ್ಷಪೂರ್ತಿ ನಡೆಯುವ ಸಿಐಟಿಯುವಿನ ಸ್ಥಾಪನೆಯ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ನಾವೆಲ್ಲ ನಮ್ಮ ಕ್ರಾಂತಿಕಾರಿ ಗುರಿಯನ್ನು ಮುಟ್ಟಲು ನಮ್ಮನ್ನು ನಾವೇ ಪುನ: ಸಮರ್ಪಣೆ ಮಾಡಿಕೊಳ್ಳೋಣ. ಸಮಾಜ ಪರಿವರ್ತನೆಯ ಕಾರ್ಯದಲ್ಲಿ ತಮ್ಮ ಪಾತ್ರವನ್ನು ಕಾರ್ಮಿಕ ವರ್ಗ ಅರಿತುಕೊಳ್ಳುವಂತೆ ಮಾಡುವ ಸಾಧನೆಗೆ ನಮ್ಮನ್ನು ನಾವು ಸಮರ್ಪಣೆ ಮಾಡಿಕೊಳ್ಳೋಣ.

ಇದುವರೆಗೆ ತಲುಪದಿರುವವರನ್ನು ತಲುಪೋಣ.

ನೀತಿಯ ಜೊತೆ ಸಮಸ್ಯೆಗಳ ನಂಟನ್ನು ಜೋಡಿಸೋಣ

ನೀತಿಗಳ ಹಿಂದಿರುವ ರಾಜಕೀಯ ಹುನ್ನಾರಗಳನ್ನು ಬಹಿರಂಗ ಪಡಿಸೋಣ.

ಜಾಗೃತ, ಸಮರ್ಥ, ಬದ್ದ ಕಾರ್ಯಕರ್ತರ ಪಡೆಯನ್ನು ಕಟ್ಟೋಣ.

ವ್ಯಾಪಕ ವರ್ಗ ಐಕ್ಯತೆ ಮೂಲಕ ವರ್ಗ ಹೋರಾಟಗಳನ್ನು ತೀವ್ರಗೊಳಿಸೋಣ

ಸಿಐಟಿಯುವನ್ನು ಬಲಪಡಿಸಿ ಮುನ್ನಡೆಯೋಣ

## ಕನಿಷ್ಟ ವೇತನ ಹೆಚ್ಚಳ: ಭರವಸೆ ಮೂಡಿಸಿದ....

ಪುಟ 9 ರಿಂದ

6. ಮಾಲಿಕರು/ಮಾಲಿಕ ಸಂಘಟನೆಗಳು ಕರ್ನಾಟಕ ರಾಜ್ಯ ಸರ್ಕಾರವು ನಿಗದಿಗೊಳಿಸಿದ್ದ ಕನಿಷ್ಟ ವೇತನದ ಅಧಿಸೂಚನೆಗಳ ವಿರುದ್ದ ಸಲ್ಲಿಸಿದ್ದ ಎಲ್ಲಾ ಮೇಲ್ಮನವಿಗಳನ್ನು ವಜಾಗೊಳಿಸಿದೆ.

**ಯಾವೆಲ್ಲ ಕೆಲಸಗಳಲ್ಲಿ ತೊಡಗಿದವರಿಗೆ ಕೋರ್ಟ್ ತೀರ್ಪು ಅನ್ವಹಿಸಲಿದೆ?**

**ಒಟ್ಟು 37 ಉದ್ಯಮಗಳಲ್ಲಿ ಕೆಲಸ ಮಾಡುವವರಿಗೆ ಈ ತೀರ್ಪಿನಿಂದ ಕನಿಷ್ಟ ವೇತನ ಬಾಕಿ ಸಮೇತ ಸಿಗಲಿದೆ**

1. ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು.
2. ಆಟೋ ಮೊಬೈಲ್‌ಕೈಗಾರಿಕೆ.
3. ಆಯುರ್ವೇದಿಕ್ ಮತ್ತು ಆಲೋಪಥಿ ತಯಾರಿಕೆ.
4. ಆಸ್ಪತ್ರೆ ಮತ್ತು ನರ್ಸಿಂಗ್ ಹೋಂಗಳು.
5. ಅಕ್ಕಿ ಹಿಟ್ಟು ಮತ್ತು ಬೇಳೆ ಗಿರಣಿ ಉದ್ದಿಮೆ.
6. ಅಡಿಕೆ.
7. ಅಧಿಸೂಚಿತ ಪಟ್ಟಿಯಲ್ಲಿ ಸೇರಿದ ಉದ್ಯಮಗಳು.
8. ಇಂಜಿನಿಯರಿಂಗ್ ಇಂಡಸ್ಟ್ರಿ.
9. ರಾಸಾಯನಿಕ ಕೈಗಾರಿಕೆ.
10. ಪ್ಲಾಂಟೇಷನ್ ಉದ್ದಿಮೆ.
11. ಟೈಲರಿಂಗ್ ಉದ್ದಿಮೆ.
12. ಪ್ರಿಂಟಿಂಗ್ ಪ್ರೆಸ್.
13. ಪೌಂಡ್ರಿ.
14. ಪಬ್ಲಿಕ್ ಮೋಟಾರ್ಸ್
15. ಹಾಸ್ಟೆಲ್.
16. ಎಲೆಕ್ಟ್ರಾನಿಕ್ಸ್.
17. ಪ್ಲಾಸ್ಟಿಕ್.
18. ಆಹಾರ ಸಂಸ್ಕರಣೆ
19. ಲಾಂಡ್ರಿ
20. ಚಲನ ಚಿತ್ರ ಉದ್ದಿಮೆ.
21. ಸೆಕ್ಯೂರಿಟಿ
22. ಹೋಟೆಲ್
23. ಮಧ್ಯ ತಯಾರಿಕೆ.
24. ಬೇಕರಿಗಳು
25. ಮೆಟಲ್ ರೋಲಿಂಗ್
26. ಬಿಸ್ಕೆಟ್ ತಯಾರಿಕೆ
27. ಟೆಕ್ಸ್‌ಟೈಲ್, ಡೈ, ಪ್ರಿಂಟಿಂಗ್.
28. ಇಟ್ಟಿಗೆ
29. ಮೊಸಾಯಿಕ್‌ಟೈಲ್ಸ್
30. ಮರದ ಕೆಲಸ
31. ಪೇಪರ್‌ಕಾಟ್, ನ್ಯೂಸ್ ಪ್ರಿಂಟ್.
32. ಗ್ರಾನೈಟ್ ಸ್ಟೋನ್ ಮಾರ್ಬಲ್
33. ಪೆಟ್ರೋಲ್ & ಡೀಸೆಲ್, ಪಂಪುಗಳು.
34. ಹಿತ್ತಾಳೆ, ತಾಮ್ರ,
35. ಹತ್ತಿ ಹೆಕ್ಕುವ
36. ಪ್ಲೈವುಡ್ ಇಂಡಸ್ಟ್ರಿ
37. ಗ್ಲಾಸ್

**ಪ್ರಶ್ನೆ: ನ್ಯಾಯಾಲಯದ ತೀರ್ಪಿನಂತೆ ಕನಿಷ್ಟ ಕೂಲಿ ಬಾಕಿ ಪಡೆಯಲು ಏನು ಮಾಡಬೇಕು?**

**ಮೀನಾಕ್ಷಿ ಸುಂದರಂ:** ನ್ಯಾಯಾಲಯ ತೀರ್ಪಿಗೆ ಒಳಪಟ್ಟಿರುವ ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು ತಮಗೆ ಅನ್ವಯವಾಗುವ ಅಧಿ ಸೂಚನೆಯ ಅನ್ವಯ ಬರ ಬೇಕಾದ ಬಾಕಿಗಳನ್ನು ಲೆಕ್ಕ ಹಾಕಿ ಅದನ್ನು ನೀಡುವಂತೆ ಮಾಲಿಕರಿಗೆ ನೋಟಿಸ್ ನೀಡಬೇಕು.

ಈ ನೋಟೀಸ್‌ಗೆ ಒಪ್ಪಿ ಮಾಲಕರು ಬಾಕಿ ಪಾವತಿಸದೆ ಇದ್ದಲ್ಲಿ ಒಬ್ಬರು ಅಥವಾ ಗುಂಪಾಗಿ ಸಹ ಕನಿಷ್ಟ ವೇತನ ಪಾವತಿ ಕಾಯ್ದೆ–1948 ರ ಅಡಿಯಲ್ಲಿ ನೇಮಿಸಲಾಗಿದ್ದು ಪ್ರಾಧಿಕಾರ–ಸಹಾಯ ಕಾರ್ಮಿಕ ಆಯುಕ್ತರ ಕಾರ್ಮಿಕ ಇಲಾಖೆ ಇವರ ಬಳಿ ಕೋರಿಕೆ ಅರ್ಜಿ ಸಲ್ಲಿಸಬೇಕು.

**ಪ್ರಶ್ನೆ; ಕನಿಷ್ಟ ಕೂಲಿ ಕುರಿತ ಸಿಐಟಿಯುನ ಬೇಡಿಕೆ ಏನು? ಅದನು ಪಡೆಯಲು ಮುಂದಿನ ಹೋರಾಟ?**

**ಮೀನಾಕ್ಷಿ ಸುಂದರಂ:** ಕಾರ್ಮಿಕರ ಕುಟುಂಬವು ಬದುಕುಳಿಯಲು ಅಗತ್ಯ ಕೂಲಿಯನ್ನು ಸರ್ಕಾರಗಳು ನಿಗಧಿಗೊಳಿಸಲು ನಮ್ಮ ಹೋರಾಟ ಮುಂದುವರಿಯುತ್ತದೆ. ಕುಟುಂಬ ಅಂದರೆ ಗಂಡ–ಹೆಂಡತಿ, ಮಕ್ಕಳು ಹಾಗೂ ಇತ್ತೀಚೆಗೆ ಬಂದಿರುವ ತಂದೆ–ತಾಯಿಯರ ಆರೈಕೆಯನ್ನು ನೋಡಿಕೊಳ್ಳಬೇಕಾದ ಜವಾಬ್ದಾರಿಯ ಕಾರಣ ಮೂರು ಘಟಕಗಳ ಬದಲಾಗಿ 5 ಘಟಕಗಳಿಗೆ ಕನಿಷ್ಠ ಕೂಲಿಯನ್ನು ನಿಗದಿಗೊಳಿಸಬೇಕು. ಅತಿ ಹೆಚ್ಚು ಕೈಗಾರಿಕೆಗಳು ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುತ್ತಿರುವ ಕಾರಣ ಕನಿಷ್ಠ ಕೂಲಿಯ ವಲಯಗಳಲ್ಲಿ ಎರಡೇ ವಲಯಗಳನ್ನು ಮಾತ್ರ ನಿಗದಿಗೊಳಿಸಬೇಕು ಹಾಗೂ ಬೆಲೆ ಏರಿಕೆಯನ್ನು ಲೆಕ್ಕ ಹಾಕುವಾಗ ನೈಜ್ಯ ಮಾರುಕಟ್ಟೆ ದರಗಳನ್ನು ಪರಿಗಣಿಸದೇ, ಕಾರ್ಮಿಕರಿಗೆ ಎಸಗುತ್ತಿರುವ ದ್ರೋಹವನ್ನು ಖಂಡಿಸಿ ಇದೇ ಮೇ 21 ರಂದು ರಾಜ್ಯಾದಾದ್ಯಂತ ಪ್ರತಿಭಟನೆಯನ್ನು ನಡೆಸಲು ಕರೆ ನೀಡಲಾಗಿದೆ. ●






# ವೆನೆಜುವೆಲಾ: ದಂಗೆ ಪ್ರಯತ್ನ ವಿಫಲ

ಜಗದ ಸುತ್ತ
ನಾಗರಾಜ ನಂಜುಂಡಯ್ಯ

ಜನವರಿಯಲ್ಲಿ, "ನಾನೇ ಮಧ್ಯಂತರ ಅಧ್ಯಕ್ಷ"ನೆಂದು ಘೋಷಿಸಿಕೊಂಡಿದ್ದ ಕಳೆದ ವೆನೆಜುವೆಲಾ ಅಧ್ಯಕ್ಷೀಯ ಚುನಾವಣೆಯಲ್ಲಿ ಸೋತ ವಿರೋಧ ಪಕ್ಷದ ನಾಯಕ ಜುವಾನ್ ಗುಯಿಡೊ ಈಗ ಇನ್ನೊಂದು ಬಾರಿ ಅಧಿಕಾರಕ್ಕೆ ಪ್ರಯತ್ನಿಸಿದ್ದಾರೆ. ಈ "ಸ್ವ-ಘೋಷಿತ ಮಧ್ಯಂತರ ಅಧ್ಯಕ್ಷ" ಜುವಾನ್ ಗೈಯಿಡೊ ಟ್ವಿಟರ್ ಮೂಲಕ ವಿಡಿಯೋವೊಂದನ್ನು ಪ್ರಕಟಿಸಿ, ಏಪ್ರಿಲ್ 30 ರಂದು ಮಿಲಿಟರಿ ಸಿಬ್ಬಂದಿಗೆ ದಂಗೆ ಎದ್ದು ಚುನಾಯಿತ ಅಧ್ಯಕ್ಷ ನಿಕೊಲಸ್ ಮದುರೊ ಸರಕಾರ ಉರುಳಿಸಲು ಕರೆ ನೀಡಿದ್ದಾರೆ. ತಳಮಟ್ಟದ ಮೂಲಗಳ ಪ್ರಕಾರ ಈ ದಂಗೆಯು ವಿಫಲವಾಗಿದೆ.

ಜುವಾನ್ ಗೈಯಿಡೊ ತನ್ನ ವಿಡಿಯೋದಲ್ಲಿ ವೆನೆಜುವೆಲಾದ ಸೈನಿಕರು ರಾಜಧಾನಿ ಕ್ಯಾರಕಸ್ ನಲ್ಲಿನ ಕಾರ್ಲೋಡಾ ವಿಮಾನ ನಿಲ್ದಾಣದಲ್ಲಿ 'ಸ್ವಾತಂತ್ರ್ಯಕ್ಕಾಗಿ ಅಂತಿಮ ಹಂತದ ಕಾರ್ಯಚರಣೆ' ನಡೆಸುವ ಮೂಲಕ ಮದುರೊ ಸರ್ಕಾರವನ್ನು ಉರುಳಿಸಲು ಸೇರಬೇಕಾಗಿದೆ ಎಂದು ಟ್ವಿಟರ್ ವಿಡಿಯೊದಲ್ಲಿ ಕರೆ ಕೊಟ್ಟಿದ್ದಾರೆ. ಮಿಲಿಟರಿ ಯಲ್ಲಿನ ಬಲಪಂಥೀಯ ರ ಪರವಾದ, ಕೇವಲ ಒಂದು ಸಣ್ಣ ಗುಂಪು ಗೈಯಿಡೊ ಬೆಂಬಲಕ್ಕೆ ನಿಂತಿದೆ. ಈ ಸಣ್ಣ ಗುಂಪು 'ಅಲ್ಟಮೀರಾ ಡಿಸ್ಟ್ರಿಬ್ಯೂಟರ್ ರಸ್ತೆ' ಯಲ್ಲಿ ಮಾತ್ರ ಜನರ ಓಡಾಟವನ್ನು ನಿರ್ಬಂಧಿಸಿದೆ. ಉಳಿದಂತೆ, ಕ್ಯಾರಕಸ್ ನಗರದಲ್ಲಿ ನಿಯೋಜಿತಗೊಂಡ ಸಶಸ್ತ್ರ ಪಡೆಗಳು ದಂಗೆಕೋರರ ಆಕ್ರಮಣಗಳು ಆಗದಂತೆ ನೋಡಿಕೊಂಡಿವೆ. ನಗರದ ಬೇರೆ ಭಾಗಕ್ಕೆ ದಂಗೆ ಯ ಪರಿಣಾಮ ಹರಡದಂತೆ ತಡೆಯೊಡ್ಡುವಲ್ಲಿ ಸಫಲರಾಗಿದ್ದಾರೆ.

ಕ್ಯಾರಕಸ್ ನಗರದ ಉಳಿದ ಭಾಗಕ್ಕೆ ದಂಗೆಯ ಪರಿಣಾಮ ಬಾಧಿಸಿಲ್ಲದಿರುವುದು ದಂಗೆಯ ವಿಫಲತೆಯನ್ನು ಎತ್ತಿಹಿಡಿದಿದೆ. ದೇಶದ ರಕ್ಷಣಾ ಮಂತ್ರಿ "ಹಂಗಾಮಿ ಅಧ್ಯಕ್ಷ"ರೊಂದಿಗಿದ್ದ ಸಣ್ಣ ತುಕಡಿ ಬಿಟ್ಟರೆ ಇಡೀ ದೇಶದ ಸೈನ್ಯ ಚುನಾಯಿತ ಅಧ್ಯಕ್ಷರ ಜೊತೆಗಿದೆ ಎಂದಿದ್ದಾರೆ. "ದಂಗೆ"ಯ ಸುದ್ದಿ ತೀಳಿಯುತ್ತಿದ್ದಂತೆ ಅಧ್ಯಕ್ಷೀಯ ನಿವಾಸದ ಎದುರಿಗೆ ಜನತೆ ಧಾವಿಸಿ ತಮ್ಮ ಬೆಂಭಲ ಸಾರಿದರು. ಮರುದಿನದ ಮೇದಿನದ ರ‍್ಯಾಲಿಯಲ್ಲಿ ಸಾವಿರಾರು ಮಿಲಿಟರಿ ಪಡೆಗಳಲ್ಲದೆ ಲಕ್ಷಾಂತರ ಜನ ಭಾಗವಹಿಸಿ ಚುನಾಯಿತ ಸರಕಾರಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಈ ನಡುವೆ ಎಪ್ರಿಲ್ 30ರ ಮಿಲಿಟರಿ ದಂಗೆ ಯನ್ನು ಬೆಂಬಲಿಸಿ 10 ಜನ ವಿರೋಧ ಪಕ್ಷದ ಸಂಸದರ ಬಂಧನಕ್ಕೆ ಸುಪ್ರೀಂ ಕೋರ್ಟು ಆಜ್ಞೆ ಮಾಡಿದೆ. ಅವರಲ್ಲಿ ಮೂವರನ್ನು ಬಂಧಿಸಲಾಗಿದೆ. ಅವರಲ್ಲಿ ಒಬ್ಬರು ಸ್ವಘೋಷಿತ "ಉಪಾಧ್ಯಕ್ಷರು" ಝಂಬ್ರಾನೊ ಸಹ ಸೇರಿದ್ದಾರೆ. ಅವರು ಎ.30ರ 'ದಂಗೆ'ಯನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಸರಕಾರ ಆಪಾದಿಸಿದೆ. ಉಳಿದ 7 ಸಂಸದರ ವಿರುದ್ಧ ಕೋರ್ಟು ವಾರಂಟ್ ಹೊರಡಿಸಿದೆ. ದೇಶದ 'ಸಾಂವಿಧಾನಿಕ ಸಭೆ' ದಂಗೆಗೆ ಕೊಟ್ಟ ಅವರ ಬೆಂಬಲದಿಂದಾಗಿ ಬಂಧನದ ವಿರುದ್ಧ ಇರುವ ಈ ಸಂಸದರ 'ಪಾರ್ಲಿಮೆಂಟರಿ ವಿಶೇಷ ಅಧಿಕಾರ'ಗಳನ್ನು ರದ್ದು ಮಾಡಿದೆ. ದಂಗೆಕೋರರನ್ನು ಬೆಂಬಲಿಸಿದ ವಿರೋಧ ಪಕ್ಷಗಳ ಬೆಂಬಲಿಗರು ಮತ್ತು, ಭದ್ರತಾ ಪಡೆ ಹಾಗೂಸರಕಾರದ ಬೆಂಬಲಿಗರ ನಡುವೆ ಘರ್ಷಣೆಗಳಲ್ಲಿ 6 ಜನ ಸತ್ತಿದ್ದಾರೆ.

ಅರ್ಜೆಂಟಿನಾದ ರಾಜಧಾನಿ ಬ್ಯೂನಸ್ ಏರಿಸ್ ಮತ್ತು ಅಮೆರಿಕದ ರಾಜಧಾನಿ ವಾಷಿಂಗ್ಟನ್ ಡಿಸಿ ಗಳಲ್ಲಿ, ವೆನೆಜುವೆಲಾ ದ ರಾಯಭಾರ ಕಚೇರಿಗಳನ್ನು ಆಕ್ರಮಿಸಿಕೊಳ್ಳಲು ದಂಗೆಕೋರ 'ಹಂಗಾಮಿ ಅಧ್ಯಕ್ಷ"ನ ಬೆಂಬಲಿಗರು ಅದೇ ಸಮಯದಲ್ಲಿ ಪ್ರಯತ್ನಿಸಿದರು. ವಾಷಿಂಗ್ಟನ್ ಡಿಸಿ ಯ ವೆನೆಜುವೇಲಾದ ರಾಯಭಾರ ಕಚೇರಿಯನ್ನು ಗೊಯಿಡೊ ಬೆಂಬಲಿಗರು ಆಕ್ರಮಿಸಿ ವಶ ಪಡಿಸಿಕೊಳ್ಳುವುದನ್ನು, ಅಮೆರಿಕದ ಶಾಂತಿ ಮತ್ತು ಅಂತರ್‍ರಾಷ್ಟ್ರೀಯ ಸಂಘಟನೆಗಳ ಕೂಟ ಅದನ್ನು ತಡೆದು ಪ್ರತಿರೋಧ ಒಡ್ಡುತ್ತಿದೆ. ಕೋಡ್ ಪಿಂಕ್, ಆನ್ಸರ್ ಕೊಲಿಶನ್, ಬ್ಲ್ಯಾಕ್ ಅಲಯನ್ಸ್ ಫಾರ್ ಪೀಸ್, ವಿಯೆಟ್ನಾಂ ವೆಟೆರನ್ಸ್ ಫಾರ್ ಪೀಸ್ ಮುಂತಾದ ಸಂಘಟನೆಗಳ ಕೂಟ, ವೆನೆಜುವೇಲಾದ ಕಾನೂನು ಬಾಹಿರ ಮಿಲಿಟರಿ ದಂಗೆ ಮತ್ತು ಅಮೆರಿಕದ ರಾಜಕೀಯ-ಮಿಲಿಟರಿ ಮಧ್ಯಪ್ರವೇಶವನ್ನು ವಿರೋಧಿಸುತ್ತಿವೆ.

ಎಪ್ರಿಲ್ 24ರಂದು ವೆನೆಜುವೆಲಾದ ರಾಯಭಾರ ಕಚೇರಿಯ ಸಿಬ್ಬಂದಿಯನ್ನು ದೇಶ ಬಿಡಲು ಅಮೆರಿಕನ್ ಸರಕಾರ ಆಜ್ಞಾಪಿಸಿತು. ವಾಷಿಂಗಟನ್ನಿನ ವೆನೆಜುವೇಲಾದ ರಾಯಭಾರ ಕಚೇರಿ ಸಿಬ್ಬಂದಿ ದೇಶ ಬಿಟ್ಟು ಹೋಗುವಾಗ ಕಚೇರಿಯನ್ನು ನೋಡಿಕೊಳ್ಳಲು ಈ ಕೂಟದ ಸುಪರ್ದಿಗೆ ಒಪ್ಪಿಸಿ ಹೋಗಿದ್ದರು. ವೆನೆಜುವೇಲಾದ ದಂಗೆಕೋರ 'ಹಂಗಾಮಿ ಅಧ್ಯಕ್ಷ"ನ ಬೆಂಬಲಿಗರು ಮತ್ತು ಅಮೆರಿಕದ ಬಲಪಂಥೀಯ ಸಂಘಟನೆಗಳು ಅಂದಿನಿಂದಲೇ ಕಚೇರಿಯ ಎದುರು ದಿನಾ ಪ್ರತಿಭಟನೆ ನಡೆಸುತ್ತಿದ್ದರು. ಎಪ್ರಿಲ್ 30 'ದಂಗೆ'ಯ ಪ್ರಯತ್ನದ ದಿನದಿಂದ ಇದು ಹಿಂಸೆಗೆ ತಿರುಗಿದೆ. ಕಚೇರಿಯನ್ನು ಸುತ್ತುವರೆಯುವುದು, ಕಚೇರಿಯನ್ನು ನೋಡಿಕೊಳ್ಳುತ್ತಿದ್ದ ಮತ್ತು ಆಹಾರ ಮುಂತಾದ ಅವರ ಆವಶ್ಯಕತೆಗಳನ್ನು ಪೂರೈಸುತ್ತಿದ್ದ ಕೂಟದ ಸದಸ್ಯರನ್ನು ಬೆದರಿಸುವುದು ಅವರ ಮೇಲೆ ದಾಳಿ ಮಾಡುವುದು, ಲೈಂಗಿಕ ಕಿರುಕುಳ ಕೊಡುವುದು ಆರಂಭವಾಗಿದೆ. ಕಳೆದ ಕೆಲವು ದಿನಗಳಲ್ಲಿ ಅಮೆರಿಕ ಇಡೀ ದೇಶಕ್ಕೆ ಮಾಡುತ್ತಿರುವುದನ್ನು ಅದರ ರಾಯಭಾರ ಕಚೇರಗೆ ಮಾಡಲಾಗುತ್ತಿದೆ.

ಅಮೆರಿಕನ್ ಪೋಲಿಸರ ಮತ್ತು ಗುಪ್ತ ಏಜೆಂಟರ ಕುಮ್ಮಕ್ಕಿನೊಂದಿಗೆ ವೆನೆಜುವೇಲಾ ವಿರೋಧ ಪಕ್ಷದವರು ಮತ್ತು ಅಮೆರಿಕನ್ ಬಲಪಂಥೀಯರು ಸೇರಿ ಆಹಾರ ಔಷಧಿ ಮುಂತಾದ ಆವಶ್ಯಕತೆಗಳನ್ನು ಬಿಡುತ್ತಿಲ್ಲ. ಕಚೇರಿಯ ಒಳಗಿರುವ ಕೂಟದ ಸದಸ್ಯರಿಗೆ ಬೆಂಬಲ ನೀಡುತ್ತಿರುವ ಹೊರಗಿರುವ ಕೂಟದ ಸದಸ್ಯರ ಮೇಲೆ ಹಿಂಸಾತ್ಮಕ ದಾಳಿ ಮಾಡಲಾಗುತ್ತಿದೆ. ಕೆಲವರನ್ನು ಹುಸಿ ಆಪಾದನೆ ಮೇಲೆ ಬಂಧಿಸಲಾಗಿದೆ. ಇತ್ತೀಚೆಗೆ ಕಚೇರಿಯ ವಿದ್ಯುತ್ ಪೂರೈಕೆ ಕಡಿದು ಹಾಕಲಾಗಿದೆ. ಇವೆಲ್ಲ ಅಂತರ್‍ರಾಷ್ಟ್ರೀಯ ಕಾನೂನಿಗೆ ವಿರುದ್ಧವಾಗಿದ್ದರೂ ಅದರಲ್ಲಿ ಅಮೆರಿಕನ್ ಸರಕಾರ ತೊಡಗಿದೆ ಎಂಬುದು ಆಶ್ಚರ್ಯದ ಸಂಗತಿಯೇನಲ್ಲ. ಆದರೂ ಕಚೇರಿಯನ್ನು ರಕ್ಷಿಸುತ್ತಿರುವ ಕೂಟ ಇದುವರೆಗೆ ಅದರ ಬದ್ಧತೆಯಿಂದ ಹಿಂದೆ ಸರಿದಿಲ್ಲ.

ವೆನೆಜುವೆಲಾದಲ್ಲಿ ಸಂವಿಧಾನಿಕ ಬದ್ದವಾಗಿ ಕಳೆದ 2018 ರಲ್ಲಿ, ಜನತೆಯ ಬೆಂಬಲದೊಂದಿಗೆ ಚುನಾವಣೆಯ ಮೂಲಕ ಗೆದ್ದು ಬಂದಿರುವ, ಅಧ್ಯಕ್ಷ ನಿಕೊಲಾಸ್ ಮಡೊರೊ ಸರಕಾರ ವನ್ನು ಉರುಳಿಸುವ ದಂಗೆ ಕೋರರ ಎಲ್ಲಾ ರೀತಿಯ ಪ್ರಯತ್ನ ಗಳನ್ನು ಸಾಮಾಜಿಕ ಚಳುವಳಿಗಳು ಉಗ್ರವಾಗಿ ಖಂಡಿಸಿವೆ. ಅವರು ಬೊಲಿವಿಯೇರಿಯನ್ ಕ್ರಾಂತಿಯ ರಕ್ಷಣೆಗಾಗಿ ತಮ್ಮ ಹೋರಾಟವನ್ನು ಮುಂದುವರಿಸುತ್ತಿದ್ದಾರೆ. ಜಗತ್ತಿನಾದ್ಯಂತ ಪ್ರಜಾಪ್ರಭುತ್ವ ಸರಕಾರ ಗಳು ಈ ಹೋರಾಟಕ್ಕೆ, ಬೆಂಬಲ ಸೂಚಿಸಿವೆ. ಆದರೆ, ಭಾರತದ ಪ್ರಧಾನಿ ಮೋದಿ ಸರ್ಕಾರ ಮಾತ್ರ ಇನ್ನೂ ಖಂಡಿಸದೆ ಇರುವುದು ವಿಷಾದನೀಯ ವೆಂದು ತನ್ನ ಹೇಳಿಕೆಯಲ್ಲಿ ಸಿಪಿಐ(ಎಂ) ತಿಳಿಸಿದೆ.

ಈ ದಂಗೆಕೋರರಿಗೆ, ಅಮೆರಿಕಾ, ಕೆನಡಾ, ಯುರೋಪಿಯನ್ ಒಕ್ಕೂಟದ ಹಲವು ರಾಷ್ಟ್ರಗಳು ಮತ್ತು ಲ್ಯಾಟಿನ್ ಅಮೆರಿಕದ ಬಲಪಂಥೀಯ ಆಡಳಿತಗಳಾದ, ಕೊಲಂಬಿಯಾ, ಅರ್ಜೆಂಟೀನಾ ಇನ್ನಿತರ ರಾಷ್ಟಗಳು ದಂಗೆಗೆ ಬೆಂಬಲಿಸಿರುವುದು ಈಗಾಗಲೇ ಜಗಜ್ಜಾಹಿರಾದ ಸಂಗತಿಯಾಗಿದೆ. ಮದುರೊ ರವರನ್ನು ಕೊಲ್ಲುವ ಒಳಸಂಚಿನಲ್ಲಿ ಕೊಲಂಬಿಯಾದ ಕೈವಾಡ ವನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕಾಗಿದೆ. ಹಾಗೆಯೇ, ಕಳೆದ ಮಾರ್ಚ್ ತಿಂಗಳಲ್ಲಿ, ವೆನೆಜುವೆಲಾದ ರಾಷ್ಟ್ರೀಯ ವಿದ್ಯುತ್ ಜಾಲದ ಮೇಲೆ ಸರಣಿ ವಿಧ್ವಂಸಕ ದಾಳಿಗಳನ್ನು ನಡೆಸಲಾಗಿತ್ತು. ಇದರಿಂದ, ಹಲವಾರು ದಿನಗಳ ಕಾಲ ದೇಶದಾದ್ಯಂತ ವಿದ್ಯುತ್ ಸಂಪರ್ಕ ಕಡಿತಗೊಂಡು, ವೆನೆಜುವೆಲಾ ಜನರನ್ನು ಗಂಭೀರವಾಗಿ ಹಾನಿಗೊಳಿಸಲು ಪ್ರಯತ್ನಿಸಲಾಯಿತು. ವಿದ್ಯುತ್ ಕಡಿತದ ಸಂದರ್ಭದಲ್ಲಿ, ವಿರೋಧಿ ಗುಂಪುಗಳು ಸೃಷ್ಟಿಸಿದ್ದ ಭಯ ಮತ್ತು ನೀಡಿದ ಹಿಂಸೆಗಳನ್ನು ಎದುರಿಸುವಲ್ಲಿ ವೆನೆಜುವೆಲಾದ ಬೊಲಿವಿಯೇರಿಯನ್ ಕ್ರಾಂತಿಯ ಬೆಂಬಲಾರ್ಥ ಜನ ಒಗ್ಗಟ್ಟನ್ನು ಮುಂದುವರಿಸಿದ್ದಾರೆ.

ಈ ಹಿನ್ನೆಲೆಯಲ್ಲಿ, ದಂಗೆಯ ಆಕ್ರಮಣಕಾರಿ ಪ್ರಯತ್ನವು ಬಹುಮಟ್ಟಿಗೆ ತಟಸ್ಥ ಗೊಂಡಿದೆ ಎನ್ನಬಹುದು, ಆದರೆ, ಹತಾಶ ವಿರೋಧಿ ಬಣದಲ್ಲಿ ಹೆಚ್ಚಾಗಿದೆ. ಸಾಮ್ರಾಜ್ಯಶಾಹಿ ಶಕ್ತಿಗಳು ಬೊಲಿವಿಯೇರಿಯನ್ ವೆನೆಜುವೆಲಾ ಮತ್ತು ಅದರ, ಪ್ರಜಾಪ್ರಭುತ್ವದ ಚುನಾಯಿತ ನಾಯಕ ಮದುರೊ ಸರಕಾರವನ್ನು ಉರುಳಿಸಲು ನಡೆಸುತ್ತಿರುವ ಕೃತ್ಯಗಳು ಮುಂದುವರಿಯಲಿವೆ. ಆದರೆ, ಹ್ಯೂಗೋ ಚಾವೆಜ್ ರ ಬೊಲಿವಿಯೇರಿಯನ್ ಕ್ರಾಂತಿಯ ಕಡು ಬೆಂಬಲಿಗರಾದ ವೆನೆಜುವೆಲಾದ ಜನ ತಮ್ಮ ರಾಷ್ಟವನ್ನು ರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಬಲಿಷ್ಟವಾದ ಐಕ್ಯತೆಯಿಂದ ಕೂಡಿದ ಹೋರಾಟವನ್ನು ಮುಂದುವರಿಸಲು ನಿರ್ಧರಿಸಿದ್ದಾರೆ. ವಾಷಿಂಗ್ಟನ್ ರ ಸಂಚಿನ ಹಾದಿ ಇಲ್ಲಿ ನಡೆಯಲಾರದು ಎಂಬ ಸ್ಪಷ್ಟ ಸಂದೇಶವನ್ನು ನೀಡುತ್ತಿದ್ದಾರೆ. ●

# ಪನಾಮಾದಲ್ಲಿ ನಡು-ಎಡ ಪಂಥಿಯ ಅಧ್ಯಕ್ಷ

ಪನಾಮಾದಲ್ಲಿ ಮೇ 5ರಂದು ನಡೆದ ಚುನಾವಣೆಯಲ್ಲಿ ನಡು-ಎಡ ಪಂಥೀಯ ಪಿ.ಆರ್.ಡಿ. (ಡೆಮೊಕ್ರಾಟಿಕ್ ರೆವೆಲ್ಯೂಶನರಿ ಪಾರ್ಟಿ) ಅಭ್ಯರ್ಥಿ ನೀಟೊ ಕೋರ್ಟಿಝೋ ಜಯಗಳಿಸಿದ್ದಾರೆ. ಅವರು ನಿಕಟತಮ ನಡು-ಬಲಪಂಥೀಯ ಅಭ್ಯರ್ಥಿ ರೊಮುಲೊ ರೋಕ್ಸ್ ಅವರನ್ನು ಸೋಲಿಸಿದ್ದಾರೆ. ಕೊರ್ಟಿಝೋ ಶೇ. 33 ರಷ್ಟು ಮತ ಗಳಿಸಿದರೆ, ರೊಮುಲೊ ರೋಕ್ಸ್ ಶೇ. 31 ಮತ ಗಳಿಸಿದ್ದು ಬಹಳ ಬಿರುಸಿನ ಸ್ಪರ್ಧೆ ನಡೆದಿತ್ತು. ಅದರ ಮೊದಲು ನಡೆದ ಸಮೀಕ್ಷೆಗಳಲ್ಲಿ ಕೋರ್ಟಿಝೊ ಹೆಚ್ಚಿನ ಮುನ್ನಡೆ ಸಾಧಿಸಿದ್ದು ಇಂತಹ ಬಿರುಸಿನ ಸ್ಪರ್ಧೆ ಆಶ್ಚರ್ಯಕರವಾಗಿತ್ತು.

ಚುನಾವಣೆಯಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟ, ಹೆಚ್ಚುತ್ತಿರುವ ಅಸಮಾನತೆ ಮತ್ತು ಪನಾಮಾ ಕಪ್ಪು ಹಣ ಬಿಳುಪು ಮಾಡುವ ದೇಶ ಎಂಬ ಕೆಟ್ಟ ಇಮೇಜ್ ಹೋಗಲಾಡಿಸಬೇಕೆಂಬುದು ಪ್ರಮುಖ ಚುನಾವಣಾ ವಿಷಯವಾಗಿತ್ತು. ಇತ್ತೀಚೆಗೆ ಕುಪ್ರಸಿದ್ಧವಾಗಿದ್ದ 'ಪನಾಮಾ ಪೇಪರ್ಸ್' ಕಪ್ಪು ಹಣ ಬಿಳುಪು ಮಾಡುವ ಕುರಿತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಈಗಿನ ಅಧ್ಯಕ್ಷ ಕಾರ್ಲೋಸ್ ವರೆಲಾ ಮತ್ತು ಹಿಂದಿನ ಅಧ್ಯಕ್ಷ ರಿಕಾರ್ಡೊ ಮಾರ್ಟಿನೆಲ್ಲಿ ವಿರುದ್ಧ ಗಂಭೀರವಾದ ಭ್ರಷ್ಟಾಚಾರದ ಆಪಾದನೆಗಳಿವೆ. ಅವು ಇದುವರೆಗೆ ಕೋರ್ಟು ಮೆಟ್ಟಲು ಹತ್ತಿದಿದ್ದರೂ, ರಿಕಾರ್ಡೊ ಮಾರ್ಟಿನೆಲ್ಲಿ ಜೈಲಿನಲ್ಲಿದ್ದಾರೆ. ಸುಮಾರು 150ರಷ್ಟು ಅವರ ರಾಜಕೀಯ ವಿರೋಧಿಗಳ ಮತ್ತು ಪತ್ರಕರ್ತರ ಫೋನ್ ಟ್ಯಾಪಿಂಗ್ ನ್ನು ಕಾನೂನುಬಾಹಿರವಾಗಿ ಮಾಡಿದ ಅಪರಾಧಕ್ಕಾಗಿ ಅವರು ಜೈಲಿನಲ್ಲಿದ್ದಾರೆ. ಗ್ರಾಮೀಣ ಪ್ರದೇಶಗಳ ಬಡತನದ ದರ ಶೇ. 26ರಷ್ಟಿದ್ದು, ಅದು ಬುಡಕಟ್ಟು ಪ್ರದೇಶಗಳಲ್ಲಿ ಶೇ. 86ಕ್ಕೆ ಏರುತ್ತದೆ.



ಚುನಾಯಿತ ಅಧ್ಯಕ್ಷ ಅಸಮಾನತೆ, ಭ್ರಷ್ಟಾಚಾರದ ವಿರುದ್ಧ ಕಟು ಮತ್ತು ದಿಟ್ಟ ಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ಕೊಟ್ಟಿದ್ದಾರೆ.


JANASHAKTHI KANNADA VARA PATRIKE MAY 13-19, 2019 Price: Rs. 10/- Date of Publication: 10 MAY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

# ಬೇಕಾಗಿದ್ದಾರೆ.. ..ಇನ್ನಷ್ಟು 'ಸಂವಿಧಾನದ ಕಾಲಾಳು'ಗಳು

ಸಂವಿಧಾನ ಮತ್ತು ಅದು ಪ್ರತಿನಿಧಿಸುವ ಸ್ವಾತಂತ್ರ್ಯ ಹೋರಾಟದ ಅತ್ಯುನ್ನತ ಮೌಲ್ಯಗಳಾದ ಪ್ರಜಾಪ್ರಭುತ್ವ, ಸಮಾನತೆ, ಜಾತ್ಯತೀತತೆ, ಸಾಮಾಜಿಕ ನ್ಯಾಯಗಳು ಇಂದು ತೀವ್ರ ಸವಾಲನ್ನು ಎದುರಿಸುತ್ತಿವೆ ಎಂಬುದರ ಬಗ್ಗೆ ಯಾವುದೇ ಸಂಶಯವಿಲ್ಲ. ಇದು ಒಂದು ಪಕ್ಷ, ಒಂದು ಸರಕಾರಕ್ಕೆ ಸೀಮಿತವಾದದ್ದು ಅಲ್ಲ. ತೀರಾ ಇತ್ತೀಚಿನ ವಿದ್ಯಮಾನವೂ ಅಲ್ಲ. ಸ್ವತಂತ್ರ ಭಾರತದಲ್ಲಿ ಕೋಮು ಹಿಂಸಾಚಾರದ ಚರಿತ್ರೆಯೇ ಇದನ್ನು ಹೇಳುತ್ತದೆ. ಮತ್ತೆ ಮತ್ತೆ ಮರುಕಳಿಸಿದ, ವ್ಯಾಪಕವಾಗುತ್ತಾ ಹೋದ ವಿವಿಧ ರೀತಿಯ ಕೋಮು ಹಿಂಸಾಚಾರಗಳು ನಮಗೆ ಇದನ್ನು ನೆನಪಿಸುತ್ತಾ ಬಂದಿವೆ. ಅದು ಕಳೆದ ಕೆಲವು ವರ್ಷಗಳಲ್ಲಿ ಭೀಕರ ಸ್ವರೂಪ ಪಡೆದಿದೆ. ಸಾಂವಿಧಾನಿಕ ಪ್ರಜಾಪ್ರಭುತ್ವ ಮತ್ತು ದೇಶದ ಅಸ್ತಿತ್ವದ ಪ್ರಶ್ನೆಯಾಗಿ ಬಿಟ್ಟಿದೆ. ಈ ಸಾಂವಿಧಾನಿಕ ಮೌಲ್ಯಗಳನ್ನು ಉಳಿಸಿ ಬೆಳೆಸುವುದು ಹೇಗೆ ಎಂಬುದು ಪ್ರಗತಿಪರ, ಸಾಮಾಜಿಕ, ರಾಜಕೀಯ ಚಳುವಳಿಗಳ ಮುಂದಿರುವ ಮುಖ್ಯ ಸವಾಲು. ಕೋಮು ಹಿಂಸಾಚಾರಕ್ಕೆ ಬಲಿಯಾದವರಿಗೆ ಪರಿಹಾರ ಮತ್ತು ನ್ಯಾಯ ಒದಗಿಸಿಕೊಡುವುದು, ಕೋಮು ಹಿಂಸಾಚಾರದ ಅಪರಾಧಿಗಳಿಗೆ ಶಿಕ್ಷೆಯಾಗುವುದು ಹಾಗೂ ಕೋಮು ಹಿಂಸಾಚಾರ ಮರುಕಳಿಸದಂತೆ ತಡೆಯುವುದು – ಇವು ಆಗಬೇಕಾದ ಕನಿಷ್ಠ ಕರ್ತವ್ಯಗಳು.

ಈ ನಿಟ್ಟಿನಲ್ಲಿ ಒಂದು ಸಂಸ್ಥೆಯೋ ಎಂಬಂತೆ ನಿರಂತರವಾಗಿ, ಸಮಗ್ರವಾಗಿ ತಮ್ಮ ಕಾಯಕ ನಿರ್ವಹಿಸುತ್ತಾ ಬಂದಿರುವವರು ತೀಸ್ತಾ ಸೆಟಲವಾಡ್. ಪತ್ರಕರ್ತೆಯಾಗಿ, ಕೋಮು ಹಿಂಸಾಚಾರಕ್ಕೆ ಬಲಿಯಾದವರ ಪರ ಹೋರಾಟಗಾರ್ತಿಯಾಗಿ, ಸಾಮಾಜಿಕ ಕಾರ್ಯಕರ್ತೆಯಾಗಿ, ಸಾಮುದಾಯಿಕ ಶಿಕ್ಷಕಿಯಾಗಿ ಅವರ ಕೆಲಸ ಅದ್ವಿತೀಯವಾದದ್ದು. ಇಡೀ ದೇಶದ ಗಮನ ಸೆಳೆದ ಅವರ ಅಚ್ಚರಿ ಮೂಡಿಸುವ ಕೆಲಸಗಳನ್ನು ದಾಖಲಿಸುವ 'ಫುಟ್ ಸೋಲ್ಜರ್ಸ್ ಆಫ್ ಕಾನ್‌ಸ್ಟಿಟ್ಯೂಶನ್' ಎಂಬ ಪುಸ್ತಕವನ್ನು 2017ರಲ್ಲಿ 'ಲೆಫ್ಟ್‌ವರ್ಡ್' ಪ್ರಕಟಿಸಿತು. ಅದನ್ನು ಓದಿದಾಕ್ಷಣ ಇದನ್ನು ಕನ್ನಡದಲ್ಲಿ ತರಲೇಬೇಕು ಎಂದು ನಮಗನಿಸಿತು.

(ಪ್ರಕಾಶಕರ ಮಾತುಗಳಿಂದ)





## ತೀಸ್ತಾ ಸೆತಲ್ವಾಡ್ ಸ್ವಗತ

(ಜಿ. ರಾಜಶೇಖರ ಅವರ ಟಿಪ್ಪಣಿಯಿಂದ)

...ತೀಸ್ತಾ ಅವರ ಪ್ರಸ್ತುತ ಕೃತಿ ಕಳೆದ ಶತಮಾನದ 80ರ ದಶಕದಲ್ಲಿ ಪತ್ರಕರ್ತೆಯಾಗಿ ಅವರು ತಮ್ಮ ವೃತ್ತಿ ಜೀವನವನ್ನು ಆರಂಭಿಸಿದಂದಿನಿಂದ ಇಂದಿನವರೆಗೆ ಭಾರತದಲ್ಲಿ ಕೋಮುವಾದ ಬೆಳದು ಬಂದ ಬಗೆಯನ್ನು ವಿಶ್ಲೇಷಿಸುತ್ತದೆ. ಕೋಮುವಾದದ ಅಧ್ಯಯನ ತೀಸ್ತಾ ಅವರ ಮಟ್ಟಿಗೆ ಕೇವಲ ಬೌದ್ಧಿಕ ಆಸಕ್ತಿ ಅಲ್ಲ. ಕಳೆದ ಮೂರು ದಶಕಗಳಿಂದ ಅವರು ಕೋಮುವಾದದ ಸಿದ್ಧಾಂತ ಹಾಗೂ ರಾಜಕೀಯದ ವಿರುದ್ಧ ಸಂಘಟಿತ ಮತ್ತು ಹೋರಾಟದಲ್ಲಿ ನಿರತರಾಗಿರುವವರು. ತೀಸ್ತಾ ಮತ್ತು ಜಾವೆದ್ ಆನಂದ್ ಜೊತೆಯಾಗಿ ಹೊರತರುತ್ತಿರುವ 'ಕಮ್ಯುನಲಿಸಂ ಕಾಂಬ್ಯಾಟ್' ಕೂಡ ಅವರ ಬೌದ್ಧಿಕತೆ ಮತ್ತು ಹೋರಾಟಗಳ ಅಭಿವ್ಯಕ್ತಿಯೇ ಆಗಿದೆ. ಖ್ಯಾತ ಚಿಂತಕ, ಮಾನವ ಹಕ್ಕು ಹೋರಾಟಗಾರ ಬಾಲಗೋಪಾಲ್ 'ಕಮ್ಯುನಲಿಸಂ ಕಂಬ್ಯಾಟ್' ಬಗ್ಗೆ ಹೇಳಿದ ಮಾತುಗಳು ತೀಸ್ತಾ ಅವರ ವ್ಯಕ್ತಿತ್ವಕ್ಕೂ ಒಪ್ಪುವಂತಿವೆ. ಬಾಲಗೋಪಾಲ್ ಅವರ ಬದುಕಿನಲ್ಲೂ ಕೂಡ ಚಿಂತನೆ ಮತ್ತು ಮಾನವ ಹಕ್ಕುಗಳ ಹೋರಾಟ ಬೇರ್ಪಡಿಸಲಾಗದಂತೆ ಸೇರಿ ಹೋಗಿದ್ದವು. ಬಾಲಗೋಪಾಲ್ ಹೇಳುತ್ತಾರೆ, 'ಧರ್ಮ ನಿರಪೇಕ್ಷತೆ, ಬಹುತ್ವ, ಕೋಮುಸೌಹಾರ್ದ – ಹೀಗೆ ನೀವು ಯಾವುದೇ ಹೆಸರಿನಿಂದ ಆ ಮೌಲ್ಯಗಳನ್ನು ಕರೆಯಿರಿ, ಅವುಗಳ ರಕ್ಷಣೆ, ಪ್ರತಿಪಾದನೆ ಮತ್ತು ಪ್ರಚಾರಕ್ಕಾಗಿ ಇಂತಹ ಒಂದು ಪತ್ರಿಕೆ ನಮಗೆ ಖಂಡಿತ ಅಗತ್ಯವಿದೆ. ಈ ಪತ್ರಿಕೆಯ ಪ್ರಕಟಣೆ ನಮ್ಮ ಕಾಲದ ಬಹುಮುಖ್ಯ ರಾಜಕೀಯ ಕ್ರಿಯೆಯಾಗಿದೆ. ಜಾಗತೀಕರಣದ ವಿರುದ್ಧ ಹೋರಾಟದ ಅಗತ್ಯವನ್ನು ಗಮನದಲ್ಲಿ ಇರಿಸಿಕೊಂಡೇ ನಾನು ಈ ಮಾತು ಹೇಳುತ್ತಿದ್ದೇನೆ. ಪ್ರಾಯಶಃ ನಾನು ಹೀಗೆ ಹೇಳಲು ಕಾರಣವೆಂದರೆ ನಮ್ಮ ಆಸ್ತಿ ಹೆರವರ ಪಾಲಾಗುವುದಕ್ಕಿಂತಲೂ, ನಮ್ಮ ಮನಸ್ಸುಗಳು ವಿಕಾರಗೊಳ್ಳುವುದು ದೊಡ್ಡ ದುರಂತ. ಜಾಗತೀಕರಣವೆನ್ನುವುದು ಆಸ್ತಿಯ ಒಡೆತನದ ಪ್ರಶ್ನೆಗೆ ಮಾತ್ರ ಸೀಮಿತವಾಗಿಲ್ಲ. ಸಂಘ ಪರಿವಾರವು ನಮ್ಮ ಸಮಾಜದಲ್ಲಿ ಈಗ ಹರಡುತ್ತಿರುವ ವಿಷ ಎಲ್ಲದಕ್ಕಿಂತ ಹೆಚ್ಚು ಆತಂಕಕಾರಿಯಾಗಿದೆ'.

......ತೀಸ್ತಾ ಈ ಕೃತಿಯ ಉದ್ದಕ್ಕೂ ಕೋಮುವಾದದ ಹಿಂಸೆಯ ವಿರುದ್ಧ ತಮ್ಮ ಹೋರಾಟವನ್ನು ಬಣ್ಣಿಸುವಾಗ ಎಲ್ಲಿಯೂ ಭಾವೋದ್ವೇಗಕ್ಕೆ ಒಳಗಾಗುವುದಿಲ್ಲ. ಹಿಂದು ಮುಸ್ಲಿಂ ಐಕ್ಯ, ಸೋದರತ್ವ, ಪರಮತ ಸಹಿಷ್ಣುತೆ ಇತ್ಯಾದಿ ಸದ್ಗುಣಗಳ ಬಗ್ಗೆ ಅವರು ಉಪದೇಶಿಸುವುದೂ ಇಲ್ಲ. ಸ್ವಾತಂತ್ರ್ಯ, ಸಮಾನತೆ, ನ್ಯಾಯ ಹಾಗೂ ಪ್ರಜಾಪ್ರಭುತ್ವದ ಹಕ್ಕುಗಳು ಕೇವಲ ಸಜ್ಜನರ ಸದ್ಗುಣಗಳು ಮತ್ತು ಸದಾಶಯಗಳಿಂದ ದೊರೆಯುವಂತಹದಲ್ಲ. ಈ ಮೌಲ್ಯಗಳು ಸಾಂಸ್ಥಿಕವಾಗಿರುವಂತಹವು. ಅವು ಯಾರ ಔದಾರ್ಯದ ಫಲವೂ ಅಲ್ಲ. ಪ್ರಜಾಪ್ರಭುತ್ವವೊಂದು ಸಾಂಸ್ಥಿಕವಾದ ನ್ಯಾಯವನ್ನು ಪಾಲಿಸದೆ ಇದ್ದಲ್ಲಿ ಸರಕಾರಗಳು ಬಹುಮತದ ದಬ್ಬಾಳಿಕೆಗಳಾಗಿ ಪರಿಣಮಿಸುತ್ತವೆ. ಈಗ ಈ ದೇಶವನ್ನು ಆಳುತ್ತಿರುವ ಸರಕಾರವೂ ಇಂತಹದೇ ಒಂದು ಬಹುಮತದ ದಬ್ಬಾಳಿಕೆಯ ಸರಕಾರ. ಈ ಸರಕಾರವನ್ನು ನಡೆಸುತ್ತಿರುವ ರಾಜಕೀಯ ಪಕ್ಷಕ್ಕೆ, ಸಂವಿಧಾನವು ಪ್ರಜೆಗಳಿಗೆ ನೀಡಿರುವ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವದ ಮೌಲ್ಯಗಳ ಬಗ್ಗೆ ಗೌರವವಿಲ್ಲ. ಆ ಪಕ್ಷದ ಹಿರಿಯ ಆದರ್ಶವಾಗಿರುವ ಹಿಂದುರಾಷ್ಟ್ರ ನಿರ್ಮಾಣಕ್ಕೆ ಈ ಸಂವಿಧಾನ ಅವರಿಗೆ ಒಂದು ದೊಡ್ಡ ತೊಡಕು. ಆಳುವ ಪಕ್ಷದ ಕೋಮುವಾದಿ ಸಿದ್ಧಾಂತದ ವಿರುದ್ಧ ಹೋರಾಡುತ್ತಿರುವ ತೀಸ್ತಾ ತಾನು ಸಂವಿಧಾನದ ಕಾಲಾಳು ಎಂದು ಕರೆದುಕೊಂಡರೂ ವಾಸ್ತವವಾಗಿ ಅವರು ಈ ಹೋರಾಟದ ಓರ್ವ ಅಗ್ರಗಣ್ಯ ನಾಯಕಿಯಾಗಿದ್ದಾರೆ. ಪ್ರಭುತ್ವದ ಈ ಅನೈತಿಕತೆ ಮತ್ತು ಹೊಣೆಗೇಡಿತನಗಳನ್ನು ಪ್ರತಿಭಟಿಸುವದನ್ನೇ ತೀಸ್ತಾ ಈಗ ತನ್ನ ಪೂರ್ಣಾವಧಿ ವೃತ್ತಿ ಮಾಡಿಕೊಂಡಿದ್ದಾರೆ.




**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**